ವೈದ್ಯಸಾರ ಸಂಗ್ರಹ

ಸಂಪಾದನೆ ಮತ್ತು ಪರಿಷ್ಕಾರ

ವಿದ್ಯಾಲಂಕಾರ ಪ್ರೊ|| ಸಾ. ಕೃ. ರಾಮಚಂದ್ರರಾವ್

(ಅಧ್ಯಕ್ಷರು, ಆಯುರ್ವೇದ ಅಕ್ಯಾಡಮಿ, ಬೆಂಗಳೂರು)

ಶಾರದಾ ಪ್ರಕಾಶನ

ಅರಳೆಪೇಟೆ : : ಬೆಂಗಳೂರು-560 053

ವೈದ್ಯಸಾರ ಸಂಗ್ರಹ

ಸಂಪಾದನೆ ಮತ್ತು ಪರಿಷ್ಕಾರ
ವಿದ್ಯಾಲಂಕಾರ ಪ್ರೊ॥ ಸಾ. ಕೃ. ರಾಮಚಂದ್ರರಾವ್
(ಅಧ್ಯಕ್ಷರು, ಆಯುರ್ವೇದ ಅಕ್ಯಾಡಮಿ, ಬೆಂಗಳೂರು)

ಶಾರದಾ ಪ್ರಕಾಶನ
ಅರಳೆಪೇಟೆ, ಬೆಂಗಳೂರು-560 053

VAIDYASAARA SANGRAHA—Edited by Vidyalankara Prof. S. K. Ramachandra Rao and Published by Sharada Prakashana, Cottonpet, Bangalore-560 053.

ಪ್ರಥಮ ಮುದ್ರಣ : 1984

ಮುದ್ರಣ :
ಎಸ್‌ಎಸ್ ಪ್ರಿಂಟಿಂಗ್ ವರ್ಕ್ಸ್
ಬೆಂಗಳೂರು-560 004.

ಮೊದಲ ಮಾತು

ನನ್ನ ಹಿರಿಯರ ಸಂಗ್ರಹದಲ್ಲಿದ್ದ ಹಳೆಯದೊಂದು ಕನ್ನಡ ಪುಸ್ತಕ ಇದು. ಮುಟ್ಟಿದರೆ ಪುಡಿಪುಡಿಯಾಗುವಷ್ಟು ಹಳೆಯ ಕಾಗದ; ಕೈಯಿಂದ ಮಾಡಿದ್ದು. ಅದರ ಮೇಲೆ ಕಲ್ಲಚ್ಚಿನಂಥ ಮುದ್ರಣದ ಎಂಭತ್ತು ಪುಟಗಳು (5″ × 8″). ಶುದ್ಧವಾದ ಕನ್ನಡ ಭಾಷೆ, ಆಡು ಮಾತಿನಂತೆಯೇ ಬರಹ, ಧಾರವಾಡದ ಕಡೆಯ ಒಕ್ಕಣೆ. ಮುದ್ರಣದಲ್ಲಿ ತಪ್ಪುಗಳು ಹೇರಳವಾಗಿವೆ; ಬರೆದವರಿಗಾಗಲೀ ಅಚ್ಚು ಮಾಡಿದವರಿಗಾಗಲೀ ಪದ ವಿಭಾಗದ ಅರಿವೇ ಇರದು!

ಈ ಪುಸ್ತಕವನ್ನು ಬರೆದವರು ಯಾರೋ ತಿಳಿಯುವುದಿಲ್ಲ; ಪುಸ್ತಕದ ಹೊದಿಕೆಯೂ ಮೊದಲ ಪುಟಗಳೂ ಉಳಿದು ಬಂದಿಲ್ಲ; ಪುಸ್ತಕದಲ್ಲೆಲ್ಲೂ ಬರೆದವರು ತಮ್ಮನ್ನು ಕುರಿತು ಒಕ್ಕಣೆಯನ್ನೇನು ಸೇರಿಸಿಲ್ಲ. ಹೀಗಾಗಿ, ಪುಸ್ತಕ ಬರೆದವರ ವಿಚಾರವಿರಲಿ, ಬರೆದ ಕಾಲ, ಅಚ್ಚಾದ ಕಾಲ, ಅಚ್ಚನ್ನು ಕಂಡ ಊರು ಮೊದಲಾದ ಯಾವ ವಿವರಗಳೂ ದೊರೆಯುವಂತಿಲ್ಲ. ಈ ಪುಸ್ತಕವನ್ನು ಪಡೆದುಕೊಂಡಿದ್ದವರು ತಮ್ಮ ಹೆಸರನ್ನು ಮೊದಲ ಪುಟದ ಮೇಲೆ ಬರೆದುಕೊಂಡಿದ್ದಾರೆ, ಅಂಬೇಕರ ಕೃಷ್ಣಾಚಾರ್ಯರೆಂದು. ಅವರು ನನ್ನ ಅಜ್ಜನ ಸೋದರರು. ಅಂದರೆ ಈ ಪುಸ್ತಕ ಎಂಬತ್ತು ತೊಂಬತ್ತು ವರ್ಷಗಳಷ್ಟಾದರೂ ಹಳೆಯದು.

ಆದರೆ ಪುಸ್ತಕದ ಸ್ವಾರಸ್ಯದಲ್ಲಿ ಸಂಶಯವೇನು ಇರದು. ಸಾಮಾನ್ಯವಾಗಿ ಜನರನ್ನು ಕಾಡುವ ಹಲವಾರು ರೋಗಗಳಿಗೆ ಮದ್ದುಗಳನ್ನು ಹೇಳುವ ಗ್ರಂಥ ಇದು. ಮದ್ದನ್ನು ಹೇಳುವಾಗ, ಅಗತ್ಯವಾದ ದ್ರವ್ಯಗಳು, ಅವುಗಳ ಅಳತೆ-ತೂಕ, ಔಷಧವನ್ನು ಸಿದ್ಧಮಾಡುವ ಕ್ರಮ, ಔಷಧವನ್ನು ಸೇವಿಸುವ ಕ್ರಮ, ಪಥ್ಯ ಮೊದಲಾದ ವಿವರಗಳನ್ನು ಕೊಟ್ಟಿದ್ದಾರೆ. ಒಂದೇ ರೋಗಕ್ಕೆ ಬೇರೆ ಬೇರೆ ಔಷಧಗಳನ್ನೂ ಕಾಣಿಸಿದ್ದಾರೆ. ಕೆಲವು ಕಡೆ, ಅನುಭವದಲ್ಲಿ ಬಂದ ಔಷಧಗಳೆಂಬ ಸೂಚನೆಯೂ ಇದೆ. ಮತ್ತೆ ಕೆಲವು ಕಡೆ ಪ್ರಮಾಣವಾಗಿ ಮೂಲ ಸಂಸ್ಕೃತ ಶ್ಲೋಕಗಳನ್ನು ಕೊಡುವ ಪ್ರಯತ್ನವೂ ನಡೆದಿದೆ. ಈ ಶ್ಲೋಕಗಳು

ತೀರ ಅಶುದ್ಧ, ಅಸ್ಪಷ್ಟವಾದುದರಿಂದ ಆ ಭಾಗವನ್ನು ಬಿಟ್ಟಿದ್ದೇನೆ. ನಾನೇನು ವೈದ್ಯನಲ್ಲ ; ಈ ಪುಸ್ತಕದಲ್ಲಿರುವ ಔಷಧಗಳು ಎಷ್ಟು ಶಾಸ್ತ್ರೋಕ್ತವಾದುವು, ಅನುಭವಸಿದ್ಧವಾದುವು ಎಂಬುದನ್ನು ನಾನರಿಯೆ. ನನಗೆ ತಿಳಿದ ಮಟ್ಟಿಗೆ, ಇವು ಜಾನಪದ ನೆಲೆಯಲ್ಲಿ ಹರಡಿಕೊಂಡ ಚಿಕಿತ್ಸಾಕ್ರಮಗಳು. ಇಂಥ ಕ್ರಮ ಗಳನ್ನು ಸಂಗ್ರಹಿಸಿ ಪ್ರಕಟಮಾಡುವುದರಿಂದ ಪ್ರಯೋಜನವಿದ್ದೀತೆಂದು ಭಾವಿಸಿ ಇದನ್ನು ಅಚ್ಚಿಗೆ ಸಿದ್ಧಮಾಡಿದ್ದೇನೆ. ಆಯುರ್ವೇದ ವೈದ್ಯರು ಕೆಲವರಾದರೂ ಈ ಕಡೆ ಗಮನಹರಿಸಿ ಜಾನಪದ ವೈದ್ಯದ ತಪ್ಪೊಪ್ಪುಗಳನ್ನು ತೋರಿಸಿ ಯಾರೆಂಬ ಆಸೆಯೂ ಇದೆ.

ವಿಷಯ ನಿರೂಪಣೆಯಲ್ಲಿ ವ್ಯವಸ್ಥೆ ಅಷ್ಟಾಗಿ ಕಾಣಿಸುವುದಿಲ್ಲ. ವ್ಯವಸ್ಥೆ ಯನ್ನು ಮಾಡೋಣವೆಂದೂ, ಭಾಷೆಯನ್ನು ಸುಧಾರಿಸೋಣವೆಂದೂ ಪ್ರಯತ್ನ ಪಟ್ಟೆ ; ಆದರೆ ಹೀಗೆ ಮಾಡಿದರೆ ಪುಸ್ತಕದ ಮೂಲ ಸ್ವರೂಪವೇ ಮರೆಯಾದೀ ತೆಂದು ಹೆದರಿ ಪ್ರಯತ್ನವನ್ನು ಕೈಬಿಟ್ಟೆ. ಬಹು ಮಟ್ಟಿಗೆ ಇದ್ದುದು ಇದ್ದಂತೆಯೇ ಅಚ್ಚಾಗಿದೆ.

ಈಗಿನ ಓದುಗರಿಗೆ ಉಪಯುಕ್ತವಾಗುವಂಥ ಕೆಲವು ವಿವರಣೆಗಳನ್ನು ಕಡೆಯಲ್ಲಿ ಸೇರಿಸಿದ್ದೇನೆ.

ಪುಸ್ತಕವನ್ನು ಪ್ರಕಾಶನಕ್ಕೆ ಎತ್ತಿಕೊಂಡ ಮಿತ್ರರು ಶ್ರೀ ಬಸವರಾಜ್ ಅವರಿಗೂ, ಅಚ್ಚು ಮಾಡುವಲ್ಲಿ ಶ್ರದ್ಧೆಯನ್ನು ವಹಿಸಿದ ಶ್ರೀ ಎಂ. ನಾಗರಾಜ್ ಅವರಿಗೂ ಕೃತಜ್ಞತೆ ಸಲ್ಲಬೇಕು.

ಸಾ. ಕೃ. ರಾಮಚಂದ್ರರಾವ್

॥ ಶ್ರೀ ಶಂಕರಾಯ ನಮಃ ॥

ವೈದ್ಯಸಾರ ಸಂಗ್ರಹ

ಶ್ಲೋ ॥ ಭಿಷಕ್ಕಲ್ಪಂ ಲಿಖ್ಯತೆ ॥ ಶುಭಮಾರಣ್ಯ ಏಕಾಂತೆ ಪ್ರಭಾತೆ ಮಂತ್ರ ಯುಕ್ತತಃ ॥ ಸಂಗ್ರಾಹ್ಯಮೌಷಧಂ ಸಿದ್ಧೈಃ ನೋಚೇ ದ್ಭವತಿ ಕಾಷ್ಟವತ್ ॥

ಸಿದ್ಧಮೂಲಕಿ ತರುವ ವಿಧಾನ

ಸಿದ್ಧಮೂಲಿಕೆಗಳನ್ನು ತರುವ ವಿಧಾನವು : ಶುಭವಾದ ವನದಲ್ಲಿ, ಏಕಾಂತ ಸ್ಥಳದಲ್ಲಿಹ ಅವುಷಧವನ್ನು ಪ್ರಾತಃಕಾಲದಲ್ಲಿ ಹೋಗಿ ಶುಚಿರ್ಭೂತವಾದ ಮನಸ್ಸಿನಲ್ಲಿ ಮಂತ್ರನಿದಾನದಿಂದ ಪೂಜೆಯು ಮಾಡಿ ತಕ್ಕೊಂಡು ಬರುವುದು ; ಹೀಗಾದರೆ ಅವುಷಧ ಸಿದ್ಧಿಯಾಗುವುದು ; ಇಲ್ಲವೆ ಕಾಷ್ಟದಂತೆ ನಿಷ್ಫಲವಾಗುವುದು.

ನಮಸ್ಕಾರ ಮಂತ್ರವು

ಶ್ಲೋ ॥ ನಮಸ್ತ್ವೇ ಮೃತಸಂಭೂತೆ ಬಲವೀರ್ಯವಿವರ್ಧನಿ । ಬಲಮಾಯುಶ್ಚ್ಯಂ ದೇಹಿ ಪಾಪಂ ಮೇ ಜಹಿ ದೂರತಃ ॥

ಅಗೆಯುವ ಮಂತ್ರವು

ಶ್ಲೋ ॥ ಯೇನ ತ್ವಾಂ ಖನತೆ ಬ್ರಹ್ಮಾ ಯೇನ ತ್ವಾಂ ಖನತೆ ಭೃಗುಃ ।
ಯೇನ ಇಂದ್ರೋಽಥ ವರುಣೋ ಯೇನ ಕಾರ್ಯೇಣ ತೇಽಧುನಾ ।
ತೇನಾಽಹಂ ತ್ವಾಂ ಖನಿಷ್ಯಾಮಿ ಮಂತ್ರಪೂತೇನ ಪಾಣಿನಾ ॥

ಮೂಲಕಿ ಕೀಳುವ ಮಂತ್ರವು

ಶ್ಲೋ ॥ ಯತ್ರೈವ ತಿಷ್ಠ ಕಲ್ಯಾಣಿ ಮಮಕಾರ್ಯಕರೀ ಭವ ।
ಮಮ ಕಾರ್ಯಗತೆ ಸಿದ್ಧಿಃ ತಥಾ ಸ್ವರ್ಗಂ ಗಮಿಷ್ಯಸಿ ॥

ಈ ಪ್ರಕಾರ ಮಂತ್ರೋಕ್ತದಿಂದ ಮೂಲಿಕೆಗಳನ್ನು ತಕ್ಕೊಂಡು ಬರುವುದು.

ಅಥ ಮಹಾಸಮುದ್ರ ಚೂರ್ಣ ಕ್ರಮ : ಸಮುದ್ರಲವಣ, ಪಾದರ ಲವಣ, ಗಂಧವಿಡಿ, ಸಾಮುರೀಲವಣ, ಸೈಂಧವಲವಣ, ಸಂವತ್ಸರಲವಣ, ಬಳಿಗಾರ, ಸಜ್ಜೀಖಾರ, ಭದ್ರಮುಸ್ತಿ, ಬಿಳೇಲಕ್ಕಿ, ವಾಯಿವಾಡುಗ, ಚಿತ್ರ ಮೂಲ, ಜೀರಗಿ, ಕರೆಜೀರಗಿ, ಅರಿಶಿಣಾ, ಮರದರಿಶಿಣಾ, ಹಿಂಗು, ತ್ರಿಫಲ ವೆಂದರೆ ನೆಲ್ಲಿಕಾಯಿ, ತಾರೀಕಾಯಿ, ಅಳಲಿಕಾಯಿ, ತ್ರಿಕಟುಕವೆಂದರೆ ಶುಂಠಿ, ಮೆಣಸು, ಹಿಪ್ಪಲಿ, ದಾಳಿಂಬ, ಬಜೀ, ಅಜಾಮೊದಲಶುನ, ಇವು ಸಮಾನ ಚೂರ್ಣಮಂ ಮಾಡಿ ಅವುಡಲ ಯಂಣಿಗೆ ಹಾಲು ಮಿಶ್ರಮಾಡಿ, ಆ ಚೂರ್ಣ ಮರ್ದಿಸಿ, ಪಿಂಡಮಂ ಮಾಡಿ, ಯಕ್ಕಿ ಎಲೆಯಿಂದ ಮೂರು ಸುತ್ತ ಸುತ್ತಿ ಮೇಲೆ ನೂಲು ಸುತ್ತಿ, ಆಮೇಲೆ ಮೃತ್ತಿಕಾ ಅಥವಾ ವಾಗರವನರದು ಮೆತ್ತಿ, ಒಣಗಿಸಿ ಬೆರಣಿಯಿಂದ ಪುಟವ ಕೊಟ್ಟು, ತಣ್ಣಗಾದ ಮೇಲೆ ತೆಗೆದು ಚೂರ್ಣಮಂ ಮಾಡಿ, ಅನುಪಾನಗಳಿಂದ ಕೊಡಲು ವಾತ ಕ್ಷಯ ಗೂಲ್ಮಶೂಲ ಮಂದಾಗ್ನಿ ಕುಷ್ಠ ಮೊದಲಾದ ನಾನಾ ಮಹಾ ರೋಗಗಳು ಕೆಡುವವು. ಘೃತ, ಮಧು, ಶರ್ಕರಯೊಡನೆ ಕೊಡುವುದು. ಹುಳಿ, ಖಾರ, ಮೊದಲಾದ ನಂಜಿನ ಪದಾರ್ಥ ಬಿಡುವದು. ಈ ಮಹಾ ಸಮುದ್ರ ಚೂರ್ಣ ಸೇವನೆಯಿಂದ ನಾನಾ ರೋಗಗಳು ಶಮನವಾಗುವವು.

ಅಥ ಸಾರಸ್ವತಚೂರ್ಣ : ಅಣಲೀಕಾಯಿ, ಬಜಿ, ಕೋಷ್ಟಾ, ಹಿಪ್ಪಲಿ, ಶುಂಠಿ, ಸೈಂಧವಲವಣ, ಅಡಸೋಗೀ, ವಂದೆಲಗ, ಶಂಖಪುಷ್ಪ, ಬೋಳಧರ ವೆಂದರೆ ಮುಂಡಿಜೀರಗಿ, ಅತಿಬಜಿ, ಜೇಷ್ಟಮಧು, ಸಕ್ಕರಿ, ಇವೆಲ್ಲವಂ ಸಮಾನಂ ಕೊಂಡು ಸಂಣವಾಗಿ ಚೂರ್ಣಮಂ ಮಾಡಿ ಬೆಕ್ಕಿನ ಪಾದದಷ್ಟು ಪ್ರಾತಃಕಾಲದಲ್ಲಿ ತಕ್ಕೊಂಬುವುದು. 21 ದಿವಸ ಕೊಳ್ಳಲು ಕವಿತ್ವವ ಹೇಳು ವನು, ಕೆಟ್ಟಸ್ವರ ನೆಟ್ಟಗಾಗುವುದು, ಕಿನ್ನುರೀ ಆಕಾರ ಸುಸ್ವರಮಕ್ಕು. ಈ ಸರಸ್ವತಿಯ ಯೋಗವನ್ನು ಮಹಾದೇವರು ನಿರೂಪಿಸಿದರು.

ಅಥ ಕೂಷ್ಮಾಂಡಪಾಕ ಕ್ರಮ : ಕರೇಕುಂಬಳಕಾಯಿ ಹೋಳು 2 ಪಾವು, ಕಲಪಿ ಕಲ್ಲುಸಕ್ಕರೆ 3 ಶೇರು, ಚೀನಿಸಕ್ಕರೆ 5 ಶೇರು, ಆಕಳತುಪ್ಪ 2 ಶೇರು, ಆಕಳಹಾಲು ॥ ಧಡೆ, ಸತ್ವಶುಂಠಿ । ಶೇರು, ಮೆಣಸು 1 ಪಾವು, ಹಿಪ್ಪಲಿ 1 ಪಾವು, ಹಿಪ್ಪಲಿಬೇರು 1 ಪಾವು, ಮೆಣಸಿನಬೇರು 1 ಪಾವು, ಚಿತ್ರಮೂಲ 1 ಪಾವು, ದಾಲಚಿನ್ನಿ 1 ಪಾವು, ನಾಗಕೇಸರಿ 1 ಪಾವು, ಧಾಲ

ಚಿನ್ನಿ ಯಲಿ 1 ಪಾವು, ಬಾಳದಬೇರು 1 ಪಾವು, ಜೇಷ್ಟಮಧು 1 ಪಾವು, ತವಾಕ್ಷರ 1 ಪಾವು, ಭದ್ರಮುಸ್ತಿ 9 ಟಾಕ, ಧಣೆ 1 ಪಾವು, ರಕ್ತಚಂದನ 1 ಪಾವು, ಲವಂಗ 9 ಟಾಕ, ಪತ್ರಿ 6 ಟಾಕ, ಕೇಸರಿ 3 ಟಾಕ, ಜಾಯಫಲ 9 ಟಾಕ, ಕೃಷ್ಣಾಗರು 9 ಟಾಕ, ದೇವದ್ವಾರ 9 ಟಾಕ, ಯಾಲಕ್ಕಿಕಾಯಿ ಚೂರ್ಣ 1 ಪಾವು, ಸುವರ್ಣಮುಖಿ 1 ಪಾವು, ಪಚ್ಚಕರ್ಪೂರ 1 ಟಾಕ, ಅಶ್ವಗಂಧಿ 1 ಪಾವು, ನೆಗ್ಗಿಲಚೂರ್ಣ 1 ಪಾವು, ಬೇದಾಣೆ 1 ಪಾವು, ಬಾದಾಮಿ 1 ಪಾವು, ಕಸಕಶಿ 9 ಟಾಕ, ಕಾರೀಕ 1 ಶೇರು, ಈ ಪ್ರಕಾರ ಜೀನಸು ತಂದು ಪುಡಿ ಮಾಡಿ ಶೋಧಿಸಿ ಇಟ್ಟುಕೊಂಡು ಮೊದಲು ಹಾಲು ಕಾಯಲಿಕ್ಕೆ ಇಟ್ಟು ಪಾಕ ಆದಮ್ಯಾಲೆ ಆ ಜೀನಸನ್ನೆಲ್ಲ ಒಂದೊಂದು ಹಾಕಿ ಪಾಕಮಾಡುವುದು. ಅದು ತೀವ್ರ ಪಾಕವಾದರೆ ಇಳಹಿಕೊಂಡು ಇರಸಿಕೊಂಬುವುದು. ನಿತ್ಯ ಪ್ರಾತಃಕಾಲಕ್ಕೆ ಒಂದು ಮುಷ್ಟಿ ತುಂಬಾ ಸೇವಿಸಿದರೆ ವೃದ್ಧರಿಗೆ, ಬಾಲಕರಿಗೆ, ಮುಟ್ಟುಬಾರದ ಸ್ತ್ರೀಯರಿಗೆ, ವಾತರೋಗವುಳ್ಳವರಿಗೆ, ರಕ್ತವುದ್ರೇಕವಾದವರಿಗೆ, ತೃಷಿವುಳ್ಳವರಿಗೆ, ದಮ್ಮಿನವರಿಗೆ, ಕೆಮ್ಮಿನವರಿಗೆ,ಮೂಲ ವ್ಯಾಧಿಯುವರಿಗೆ, ವಾಂತಿಯಾಗುವವರಿಗೆ ಕೊಟ್ಟರೆ ಈ ರೋಗಗಳು ಪರಿಹಾರವಾಗಿ ನಿರೋಗಿಯಾಗುವರು. ಈ ಕೂಷ್ಮಾಂಡ ಪಾಕ ಸೇವನೆಯಿಂದ ಸಮಸ್ತ ಪೂರ್ವೋಕ್ತ ರೋಗಗಳು ನಾಶವಾಗಿ ಧಾತುಪುಷ್ಟಿಯಾಗುವುದು. ಮಧುರಾನ್ನ ಭೋಜನವ ಮಾಡವವರು ತುಪ್ಪ ಎಷ್ಟು ಉಂಡರೂ ಒಳ್ಳೇದು. ಹುಳಿ, ಖಾರ, ಮಜ್ಜಿಗೀ, ಮೊಸರು ಮೊದಲಾದ ನಂಜಿನ ಪದಾರ್ಥ ಬಿಡುವುದು. ನಷ್ಟೇಂದ್ರಿಯುದವನಿಗಾದರೂ ಕೊಡುವುದು ; ವೀರ್ಯವೃದ್ಧಿಯಾಗುವುದು.

ಅಥ ಭಾಸ್ಕರ ಚೂರ್ಣಕ್ರಮು : ವಡಾಗರದ ಉಪ್ಪು ಎಂದರೆ ಕಲ್ಲುಪ್ಪು 16 ಟಾಕ, ಗಂಧವಿಡಿ ಉಪ್ಪು 10 ಟಾ, ಹಿಪ್ಪಲೀ ಮೋಡಿ 4 ಟಾಕ, ನಾಗಕೇಸರ 4 ಟಾಕ, ಮೆಣಸು 4 ಟಾಕ, ಶುಂಠಿ 4 ಟಾಕ, ಜೀರಗಿ 2 ಟಾಕ, ಯಾಲಕ್ಕಿ 1 ಟಾಕ, ದಾಳಿಂಬರದಚೆಕ್ಕೆ (ಎಂದರೆ ಕಾಯಿ) ವಣಗಿಸಿ ಮೇಲಿನ್ನ ಶೋಟೆ ಒಣಗಿಸಿದ ಚೂರ್ಣ 8 ಟಾಕ, ದಾಲಚಿನ್ನಿ 8 ಟಾಕ, ಇಷ್ಟು ಜೀನಸನು ಪುಡಿಮಾಡಿ ಶೋಧಿಸಿದ ಚೂರ್ಣ ನಿತ್ಯ ಪ್ರಾತಃಕಾಲಕ್ಕೆ ಒಂದು ರೂಪಿ ತೂಕ ಚೂರ್ಣ ಆಕಳ ಮಜ್ಜಿಗೆಯಲ್ಲಿ ತಕ್ಕೊಳ್ಳಲು ವಾತಗುಲ್ಮ, ಸಂಗ್ರಹಣೀ, ಅಗ್ನಿಮಂದ, ಶ್ವಾಸ, ಖಾಸ, ಮೂಲವ್ಯಾಧಿ ಇಷ್ಟು ರೋಗ ಪರಿಹಾರವಾಗು

ವುದು. ಅನುಪಾನ ಆಕಳ ಮಜ್ಜಿಗೆಯೊಳಗೆ ಕೊಡುವುದು. ಹುಳಿ, ಖಾರ, ಮೊದಲಾದ ನಂಜಿನ ಪದಾರ್ಥ ಬಿಡೋದು.

ಆಗಸ್ತಿರಸಾಯನದ ಮಾತ್ರೆ ಕ್ರಮ : ಗಂಧಕವ ತಂದು ತುಪ್ಪ, ಹಾಲು ಹಾಕಿ ಕುಚ್ಚಿ ಶುದ್ಧ ಮಾಡುವುದು ; ವತ್ಸನಾಭಿ ತಂದು ಹಾಲು ಹಾಕಿ ಕುಚ್ಚಿ ಒಣಗಿಸಿದರೆ ಶುದ್ಧವಾಗುವುದು. ಪಾದರಸ, ಅರಿಶಿಣಪುಡಿ ಕೂಡಿ ಅರದು ಅರವೀಲಿ ಸೋಸಿ ತೆಗೆದರೆ ಪಾದರಸ ಶುದ್ಧವಾಗುವುದು. ಇಂಗಳೀಕ ಅರಶಿಣ ಪುಡಿಯೊಳಗೆ ಹಾಕಿ ಅರೆದರೆ ಶುದ್ಧಿಯಾಗೋದು. ಇಷ್ಟು ಶುದ್ಧ ಮಾಡಿಕೊಂಡ ಮೇಲೆ ಹಾಕುವ ಜೀನಸಿನ ಕ್ರಮ—ಪಾದರಸ 1 ಟಾಕ, ಗಂಧಕ 1 ಟಾಕ, ವತ್ಸ ನಾಭಿ 1 ಟಾಕ, ಇಂಗಳೀಕಾ 1 ಟಾಕ, ದತ್ತೂರಿಬೀಜ 5 ಟಾಕ, ಇವೆಲ್ಲವನ್ನು ಕಾಡಿಗ್ಗರಗಿನ ರಸದಲ್ಲಿ ಮೂರು ದಿವಸ ಅರೆಯಬೇಕು, ಆಮೇಲೆ ತುಲಸಿ ರಸ ದಲ್ಲಿ ಮೂರು ದಿವಸ ಮರ್ದಿಸಿ ಅರೆಯಬೇಕು, ಆಮೇಲೆ ಹೆಸರಕಾಳ ಪ್ರಮಾಣ ಗುಳಿಗಿಯ ಮಾಡಿ ಒಣಗಿಸಬೇಕು, ಆಮೇಲೆ ಅನುಪಾನದೊಡನೆ ಕೊಡುವುದು. ಅದೇನೆಂದರೆ ತುಪ್ಪ, ಮೆಣಸಿನಪುಡಿ ಸಂಗಾತ ಕೊಟ್ಟರೆ ವಾತಶೂಲಿ ನಾಶ ; ಜೀರಿಗಿ ಜಾಯಫಲದ ಸಂಗಾತ ಕೊಟ್ಟರೆ ಅತಿಸಾರ ಹೋಗುವುದು ; ತ್ರಿಕಟುಕ ಜೇನುತುಪ್ಪದ ಸಂಗಾತ ಕೊಟ್ಟರೆ ಹೊಟ್ಟೆಶೂಲಿ ಮಾಣ್ಗು ; ಹಿಪ್ಪಲಿ ಜೇನು ತುಪ್ಪದ ಸಂಗಾತ ಕೊಟ್ಟರೆ ಕೆಂಮು ಹೋಗುವುದು ; ಹಾಲಾಗೆ ಕೊಟ್ಟರೆ ವೀರ್ಯವೃದ್ಧಿಯಾದೀತು ; ಬರೆ ಸಕ್ಕರಿ ಸಂಗಾತ ತಕ್ಕೊಂಡರೆ ನೆಗಡಿ ಹೋಗು ವುದು ; ಅಲ್ಲದೆ ರಸದೊಳಗೆ ಕೊಟ್ಟರೆ ಅಜೀರ್ಣ ಹೋದೀತು ; ಅಕ್ಕಿಕಚ್ಚು ಚಿನ್ನಿಸಕ್ಕರಿ ಕೂಡಿಸಿ ತಕ್ಕೊಂಡರೆ ಕುಸುಮರೋಗ ಹೋದಿತು ; ಹಾಲು ತುಪ್ಪ ಕೂಡಿಸಿ ಕೊಟ್ಟರೆ ಗುಟಕಾ ಪ್ರಮಾಣ ವೀರ್ಯವೃದ್ಧಿಯಿಂದ ಕಾಮಾಲಿ ಇದ್ದರೆ ಕರಗುವುದು ; ನಿಂಬೆಹುಳಿಯಲ್ಲಿ ಉತಾರ ; ಶುಂಠಿ, ಲವಂಗ ಕಷಾಯ ಸಂಗಾತ ಕೊಟ್ಟರೆ ಜ್ವರನಾಶ ಈ ಪ್ರಕಾರ ಅನುಪಾನಗಳು ಮಾಡಿಸಿಕೊಟ್ಟರೆ ಸಕಲ ರೋಗಗಳು ಪರಿಹಾರವಾಗುವವು. ಸರ್ವಕ್ಕೂ ಯಂಣಿ ಕೊತಂಬರಿ ಹಸಿಮೆಣಶಿನ ಕಾಯಿ ಮೊದಲಾದ ನಂಜಿನ ಪದಾರ್ಥ ಬಿಡಬೇಕು.

ಅಥ ಖರ್ಜೂರಲೇಹ್ಯ : ಉತ್ತತ್ತಿ 1 ಶೇರು, ಶುಂಠಿ 1 ಪಾವು, ಮೆಣಸು 1 ಪಾವು, ಲವಂಗ 6 ಟಾಕ, ನೆಲ್ಲಿಚೆಟ್ಟು 6 ಟಾಕ, ಪಂಚಲವಣ ನುತ್ತು ಸೈಂಧವ ಲವಣ 3 ಟಾಕ, ಗಂಧವಿಡಿ 3 ಟಾಕ, ಕಾಜಿಷ ಲವಣ 3

ಟಾಕ, ಸಮುದ್ರ ಲವಣ 3 ಟಾಕ, ಕಲ್ಲುಪ್ಪು 3 ಟಾಕ, ಅಂತು 15 ಪೈ ತೂಕ, ಸಕ್ಕರಿ 1 ಶೇರು, ನಿಂಬೆಹಂಣು 10 ಈ ಜೀನಸು ಪುಡಿಮಾಡಿ ಉತ್ತತ್ರಿ ವಳಗೆ ತುಂಬಿ ಮೇಲೆ ಸಕ್ಕರಿ ಹಾಕಿ ಅದರ ಮೇಲೆ ನಿಂಬೆಹಣ್ಣಿನ ರಸವ ಹಿಂಡುವುದು. ದಿನ ಮುಂಜಾನೆ ಒಂದು ಸಂಜೇಲಿ ವಂದು ಉತ್ತತ್ರಿ ತಿಂದರೆ ಪೈತ್ಯ ರೋಗ ಪರಿಹಾರವಾಗುವದು. ನಂಜಿನ ಪದಾರ್ಥ ಬಿಡಬೇಕು.

ಮತ್ತೊಂದು ಪ್ರಕಾರ ಕೂಷ್ಮಾಂಡಪಾಕ : ಅಸ್ತಿಗತಜ್ವರ, ಕ್ಷಯು, ಮೂಲವ್ಯಾಧಿ, ಗರ್ಭಿಣಿರೋಗ, ಮೂತ್ರಕೃಛ್ರ, ಉರಿಮೂತ್ರ, ಧಾತುನಷ್ಟ, ಪಾಂಡುರೋಗ, ಇಷ್ಟಕ್ಕು ಅವುಷಧ ಕುಷ್ಮಾಂಡ ಹೆರದೂ ನೀರು ತೆಗೆದು ವುಳದದ್ದು ವಜನದಂತೆ ಹತ್ತು ಶೇರು, ಆಕಳ ಹಾಲು 10 ಶೇರು, ಜೀರಿಗಿ 1 ಶೇರು, ಮೆಣಸು ಪಾವಶೇರು, ದಾಲಚಿನ್ನಿ 6 ಟಾಕ, ವತ್ರಜ 6 ಟಾಕ, ಲವಂಗ 3 ಟಾಕ, ಯಾಲಕ್ಕಿ ಪಾವಶೇರು, ಜಾಯಫಲ 3 ಟಾಕ, ಪತ್ರಿ 3 ಟಾಕ, ನಾದಕೇಸರಿ 3 ಟಾಕ, ಖಜೋರ ಅರ್ಧ ಶೇರು, ದೀಪ ದ್ರಾಕ್ಷ ಅರ್ಧಶೇರು, ಖರ್ಜೂರ 9 ಟಾಕ, ನೆಗ್ಗಲ ಅರ್ಧ ಶೇರು, ಬಿಳಿಕರಿಕಿ ಅರ್ಧ ಶೇರು, ಜೇಷ್ಟ ಮಧು ಪಾವಶೇರು, ಕಬಾಬ ಚಿನ್ನಿ 1 ಶೇರು, ಕರ್ಪಶಿಲಾಜಿತು 9 ಟಾಕ, ಶಾಲಿ ಮಖಾನೆ 9 ಟಾಕ, ಇಸಬಗೋಲು 1 ಶೇರು, ಉಪ್ರಾಣಿಬೀಜ ಪಾವಶೇರು, ಕಸಕಶಿ ಪಾವುಶೇರು, ಹೊನ್ನಾವರೀ ಬೀಜ 1 ಶೇರು, ಬೆಲವಂತರಬೀಜ ಅರ್ಧ ಶೇರು, ಆಕಳತುಪ್ಪ 5 ಶೇರು, ಬಿಳೀ ಗಣಜಲಿ ಬೇರು ಪಾವಶೇರು, ಬಾದಾಮು ಅರ್ಧ ಶೇರು, ಚೋಪಚಿನ್ನಿ ಪಾವಶೇರು, ಅಶ್ವಗಂಧಿ ಪಾವಶೇರು, ಈ ಜೀನಸನ್ನೆಲ್ಲಾ ಪುಡಿಮಾಡಿ ಕುಷ್ಮಾಂಡ ತುಪ್ಪದೊಳಗೆ ಕರೆದ ಹಾಲು ಖೋವೆ ಮಾಡಿ, ಸಕ್ಕರಿ ಹಾಕಿ ಪಾಕಮಾಡಿ ತುಪ್ಪ ಹಾಕಬೇಕು. ಪಾಕ ಇಳಿದ ಮೇಲೆ ಕುಷ್ಮಾಂಡ ಮತ್ತೆ ಹಿಂದಾಗಿ ಚೂರ್ಣಗಳೆಲ್ಲಾನು ಆ ಪಾಕದೊಳಗೆ ಹಾಕ ಬೇಕು. ಸರ್ವವು ಮಿಶ್ರವಾದ ಮೇಲೆ ಇಳಿಸಬೇಕು. ಪಥ್ಯ ಹುಳಿ ಬಾಳೆಕಾಯಿ ಕರೆಕುಂಬಳಕಾಯಿ, ಮೆಣಸಿನಕಾಯಿ, ಎಂಣೆ ಬದನೆಕಾಯಿ, ಇವಷ್ಟು ಬಿಡ ಬೇಕು. ಸರ್ವ ರೋಗಗಳು ನಾಶವುಕ್ಕು.

ಸರ್ವರೋಗಕ್ಕೆ : ಶುಂಠಿ ಗದ್ಯಾಣ 1, ಮೆಣಸು ಗ 1, ಪಿಪ್ಪಲಿ ಗ 1, ಇಂಗೂ ಗ 3, ಸೈಂಧವ ಲವಣ ಗ 1, ಅಜವೋದ ಗ 1, ಸಥಕ್ಷರ ಅಂದರೆ ಭಿದರಸುಂಣ ಗ 1, ಕರೇಜೀರಿಗಿ ಗ 1, ಜ್ಯೇಷ್ಟಮಧು ಗ 1, ಇಸರಿ ಬೇರೂ

ಗ 1, ಚಿತ್ರಮೂಲ ಗ 1, ಬೇವಿನಯೆಲಿ ಗ 1, ಅಣಲಿಕಾಯಿ ಗ 1, ತಾರಿಕಾಯಿ ಗ 1, ಬೆಳ್ಳೊಳ್ಳಿ ಗ 1, ನೆಲ್ಲಿಚೆಟ್ಟು ಗ 1, ವಾಯಿ ವಡಂಗ ಗ 1, ಅಜವಾನದ ಹೊಟ್ಟು ಗ 1, ಬಜೀ ಗ 1, ಮುತ್ತಲಬೀಜ ಗ 1, ಮೋಡಿ ಗ 1, ಇಷ್ಟು ಜೀನಸುಗಳನ್ನು ಹಣಿದು 23 ಸಾರಿ ಸೋಸಿದ ಪುಡಿ ಸೋರಿ ತುಂಬಿ ಇಡುವುದು. ಊಟ ಮಾಡುವಾಗ ಮೂರು ಬೆರಳಿಗೆ ಬಂದಷ್ಟು ಮುಂಚಿನ ತುತ್ತಿನವಳಗೆ ಇಟ್ಟು ಮೂರು ತುತ್ತು ನುಂಗುವುದು. ಪಥ್ಯ ಅಕ್ಕಿವಾಗರ ಹಳೀ ಹುಳಿ ತುಪ್ಪ ನುಂಗುವುದು. ಇದರಿಂದ ಸರ್ವರೋಗ ಮಾಣ್ಗು.

ಜಿವ್ಹೆರೋಗಕ್ಕೆ : ಹವಳ, ಜ್ಯೇಷ್ಟಮಧು, ಜೇನುತುಪ್ಪದ ಸಂಗಾತ ಲೇಹಮಾಡಲೂ ನಾಲಗಿಯ ರೋಗಗಳು ಬೀಳುವವು.

ನಾಲಗಿ ಬಿದ್ದವರಿಗೆ : ಹಶೀಶುಂಠಿಯ ರಸ, ದಷ್ಟಮಧುಕ, ಪಚ್ಚ ಕರ್ಪೂರ, ಸಕ್ಕರಿ ಇವನ್ನು ಮೊಲೆಹಾಲಿನಲ್ಲಿ ಅರೆದು ಕುಡಿಯಲು ಬಿದ್ದ ನಾಲಗಿ ಸರಳವಾಗಿ ಬಾಹುದೂ, ತಪ್ಪದು.

ನಾಲಗೀ ರೋಗಕ್ಕೆ : ಉತ್ತಮ ಜೇನುತುಪ್ಪ ತಂದು ನಾಲಿಗೀಗೆ ಹಚ್ಚುತ್ತಿರಲು ನಾಲಿಗಿ ನೆಟ್ಟಗಾಗುವುದು. ನಾಲಿಗೆ ನೆಟ್ಟಗಾದ ಮೇಲೆ ಚೂರ್ಣಮಾಡುವ ಕ್ರಮ—ಶುಂಠಿ 9 ಟಾಕ, ಅಶ್ವಗಂಧಿ 9 ಟಾಕ, ಕಾರೀಕ 1 ಪಾವು, ದೀಪದ್ರಾಕ್ಷ 1 ಪಾವು, ಯಾಲಕ್ಕಿ 3 ಟಾಕ, ಈ ಪ್ರಕಾರ 5 ಜೀನಸು ; ಕಾಲಪಿಕಲ ಸಕ್ಕರಿ 9 ಟಾಕ, ಆಕಳ ಹಾಲು ಅರ್ಧ ಶೇರು ಇದರಲ್ಲಿ ಪಾಕಮಾಡಿ ಎರಡು ಸಪ್ತಕ ಅಥವಾ 14 ದಿವಸ ತಕ್ಕೊಳ್ಳಲು ನಾಲಗಿಯ ರೋಗನಾಶನ. ಪಥ್ಯ ಹುಳಿ ಮೊದಲಾದ ನಂಜಿನ ಪದಾರ್ಥ ಬಿಡುವದು.

ಗಂಟಲೊಳಗೆ ಕಸವು ಬಿದ್ದಿದ್ದರೆ: ನೀರಾಗಿನ ಹಂಸಿಯ ತಂದು ಒಣಗಿಸಿ ಚೂರ್ಣ ಮಾಡಿ ಅದರಲ್ಲಿ ಇಂಗಳೀಕ ಹಾಕಿ ಹೊಗಿಯ ಶೇದಬೇಕು. ಚುಟ್ಟಿಯುಪಳಗೆ ತುಂಬಿ ಶೇದಿದರೆ ಗಂಟಲಾಗಿನ ಕಸರು ಹೋಗುವದು, ಪಥ್ಯ ಗೋಧಿರೊಟ್ಟಿ ತುಪ್ಪ ಉಣಬೇಕು.

ಸರ್ವರೋಗಕ್ಕೆ : ಕೊಟ್ಟಕೋಳಂಜ್ರಿನ, ಚಿತ್ರಮೂಲ, ತ್ರಿಕಟುಕ, ಸೈಂಧವ, ಹಿಂಗು ಇವಿಷ್ಟು ಸಮಾನಂಗೊಂಡು ವಸ್ತ್ರಗಳಿತ ಚೂರ್ಣಮಂ

ಮಾಡಿ ಬಿಸಿನೀರಿನಲ್ಲಿ ತಕ್ಕೊಳ್ಳಲು ಸಕಲ ರೋಗಗಳು ಮಾಣ್ಗು. ಯಾವು ವೆಂದರೆ—ತಲೆಶೂಲಿ, ವಾತ, ಗುಲ್ಮ, ಪಾಂಡುರೋಗ, ಮೂಲವ್ಯಾಧಿ, ಶ್ವಾಸ, ಖಾಸ, ಈ ರೋಗಗಳು ನಿವಾರಣವಾಗುವವು.

ಪಿತ್ತದ ಲಕ್ಷಣ : ಹೊಟ್ಟೆವುರಿಯೋದು, ಜ್ವರ ಬರುವದು, ಶೂಲಿ, ವಮನ ಅಡಿಗಡಿಗೆ ಆಗುವುದು, ಹಸ್ತಪಾದಂಗಳು ಹರಿವದು—ಇದು ಪಿತ್ತ ಲಕ್ಷಣ. ಇದಕ್ಕೆ ಔಷಧ—ಹಳೇನೀರು, ಜೇನುತುಪ್ಪ ಸಮಾನ ತಕ್ಕೊಳ್ಳಲು ಪಿತ್ತಪ್ರಶಮನ. ಅಕ್ಕಿ, ಅರಳಿನ ಹಿಟ್ಟು, ಜೇನುತುಪ್ಪ ಸಮಾನ ತಕ್ಕೊಳ್ಳಲು ಪಿತ್ತ ನಾಶವಾಗುವದು. ಪ್ರಯತ್ನದಿಂದ ಪಥ್ಯವ ತೊಡುವದು ಮತ್ತೆ ಪಥ್ಯಕ್ಕೆ, ವಂದೆಲಗ, ಅಮರದ ಬಳ್ಳಿ, ಹೊನ್ನಗನ್ನಿ, ಗೊಳಗೊಳಕಿ, ಸಮೂಲ ಚೂರ್ಣ ಮಾಡಿ ಸಕ್ಕರಿಯಲ್ಲಿ ಕುಡಿಯೇ ಪೈತ್ಯಹಾರವು. ಮತ್ತೆ ಅಗಿವಾನವ ಎಕ್ಕಿ ಹಾಲಲ್ಲಿ ಕಲಶಿ ನೆರಳಿನಲ್ಲಿ ಒಣಗಿಸಿ ಮತ್ತೆ ಬಿಸಲಾಗೆ ಇಟ್ಟು ಅರ್ಧ ಗದ್ಯಾಣ ತೂಕ ಹಂಚಿನ ಮೇಲೆ ಬೆಚ್ಚಗೆಮಾಡಿ ತೆಗೆದುಕೊಳ್ಳಲೂ ಪಿತ್ತ ತಿರುಗುವದು. ಮಜ್ಜಿಗಿ ಪಥ್ಯ. ಮತ್ತೊಂದು ಉತ್ರಾಣಿಯ ಬೀಜ 1 ನೀರಲ್ಲಿ ಕೊಳ್ಳಲೂ ಪಿತ್ತಹಾರ. ಹಂಣಿಬೇರೂ ಹಳೇನೀರ ಸಂಗಾತ ಅರೆದು ಕುಡಿಯೇ ಪಿತ್ತ ಹಾರವು. ಮತ್ತೊಂದು ಹಾಲಿಯೇ ಬೇರು, ತುಂಬಲದ ಯಲಿಯ ರಸ ದಲ್ಲಿ ಸೇವಿಸೇ ಪಿತ್ತ ಪರಿಹಾರವಾಹುದು. ಮತ್ತೆ ಶುಂಠಿ 9 ಟಾಕ, ಕಾರಿಖಾ 9 ಟಾಕ, ಚಿನ್ನಿಸಕ್ಕರಿ 9 ಟಾಕ ಇವು ಮೂರು ಕೂಡಿಸಿ ಕೊಡಲು ಪಿತ್ತ ಪರಿಹಾರ.

ಭ್ರಮರಪೈತ್ಯಕ್ಕೆ : ಹುಣಸಿಹಂಣಿನ ರಸಾ ಅರೆ ಟಾಕ ತೆಗದು ಇದರ ಎರಡರಷ್ಟು ಬೆಲ್ಲ ಹಾಕಿ ಯಾಲಕ್ಕಿ ಬುಡ್ಡಿ 1 ಪಾವು, ಸ್ವಲ್ಪ ಉಪ್ಪು ಹಾಕಿ ಇರಬಟ್ಟೆ ತಲೆಗೆ ಹಾಕಿದರೆ ಶಮನವಾದೀತು. ಮತ್ತೆ ಶುಂಠಿಯಾಗಲೀ ಖಾರ ಗೆಣಸಾಗಲಿ ಒಂದು ನಿಂಬೆಯ ಹಂಣಿನ ರಸದಾಗೆ ಕಲಸಕ್ಕರಿಯ ಹಾಕಿ ಕೊಟ್ಟರೆ ಪೈತ್ಯ ನಾಶವಾಗುವದು. ಮತ್ತೆ ರಾತ್ರಿಯಲ್ಲಿ ಕಡಲಿಯ ಹಿಡಿ ತುಂಬಾ ನೆನಿಹಾಕಿ ಇಡಬೇಕು. ಪ್ರಾತಃಕಾಲಕ್ಕೆ ನೀರಾಗೆ ಜೀರಗಿ, ಯಾಲಕ್ಕಿ, ಸಕ್ಕರಿ ಹಾಕಿ ಕುಡಿಸಬೇಕು, ಪೈತ್ಯ ನಾಶವಾಗುವದು. ರಾತ್ರಿಯಲ್ಲಿ ಕಬ್ಬು ಸುಟ್ಟು ರಸವ ತೆಗದೂ ಮಾಳಗಿಯ ಮ್ಯಾಲೆ ಇಬ್ಬನಿಯಲ್ಲಿರಿಸಿ ಮರುದಿವಸ

ಯಾಲಕ್ಕಿ, ಕಲಸಕ್ಕರಿಯು ಹಾಕಿ ತೆಗೆದುಕೊಳ್ಳತಕ್ಕದ್ದು. ಪಥ್ಯ : ಹುಳಿ ತಿನ್ನ ಬಾರದು. ಪೈತ್ಯಹಾರವು.

ಪೈತ್ಯ ತಲಿಗೆ ಏರಿದರೆ : ಕರೆಹೆಸರು ತಂದು ಕಟ್ಟಿ ತೆಗದೂ ಆಕಳ ಹಾಲಾಗೆ ಸಕ್ಕರಿಯು ಹಾಕಿ ಕುಡಿಯಬೇಕು. ನಂಜಿನ ಪದಾರ್ಥ ಬಿಡಬೇಕು.

ಮೂಲವ್ಯಾಧಿಗೆ : ಶುಂಠಿ, ಹಿಪ್ಪಲಿ, ಮೆಣಸು ಐದುಭಾಗ, ನಾಗಕೇಸರಿ ನಾಲ್ಕು ಭಾಗ, ಲವಂಗ ಎರಡು ಭಾಗ, ಪತ್ರಿ ಎರಡು ಭಾಗ, ಯಾಲಕ್ಕಿ ಒಂದು ಭಾಗ, ಈ ಪ್ರಕಾರ ಕ್ರಮದಿಂದ ತೆಗೆದುಕೊಂಡು ವಸ್ತ್ರಗಳಿತ ಚೂರ್ಣದ ಸಮ ಸಕ್ಕರಿ ಕಲಸಿ 4 ತೂಕ ದಿನಂಪ್ರತಿ ಭಕ್ಷಿಸಲು ಮೂಲವ್ಯಾಧಿ, ಮಂದಾಗ್ನಿ, ಅರುಚಿ, ಶ್ವಾಸಕಾಸ, ಹೃದಂಗ ಈ ರೋಗಗಳು ನಾಶವಾದಾವು. ಎಂಣಿ ಬದನಿ ಕಾಯಿ ನಂಜು ಬಿಡಬೇಕು.

ಮೂಲವ್ಯಾಧಿ ಮೊದಲಾದ್ದಕ್ಕೆ : ಶೋಧಿಸಿದ ಅಷ್ಟ ಲೋಹದ ಚೂರ್ಣ, ಶುಂಠಿ, ಹಿಪ್ಪಲಿ, ಮೆಣಸು, ಬಾರಿಬೀಜದ ತಿರಳು ಅಥವಾ ಹಿಪ್ಪಲಿ, ಬೆಲ್ಲ, ಅಣಲಿಕಾಯಿ ಅಥವಾ ದಾಳಿಂಬರದ ಬೀಜ, ಅಳಲೆಕಾಯಿ ಬೆಲ್ಲಾ ಇಷ್ಟನ್ನೂ ಸರಿಯಾಗಿ ತಕ್ಕೊಂಡು ಈ ಹೇಳಿದ ಮೂರು ಪ್ರಯೋಗಗಳೂ, ಅನುಗೂಡಿದ ಪ್ರಯೋಗ ತಕ್ಕೊಂಡು ವಸ್ತ್ರಗಳಿತಚೂರ್ಣ ಮಾಡಿ 4 ಗದ್ಯಾಣ ತೂಕ ತಗೊಂಬುವದು. ಅಜೀರ್ಣ, ಮೂಲವ್ಯಾಧಿ, ಮಲನಿಗ್ರಹ ಈ ರೋಗ ಗಳು ಹೋಗುವವು. ಮತ್ತು ಹುಣಸಿಹಂಣು, ನಷ್ಟಮಧುಕ, ಬೋನಗರಿ ಕಾಯಿ, ಹಿಪ್ಪಲಿ, ಬಿಡಲವಣ, ಇಲ್ಲಣ, ಕೋಷ್ಟ ಇವು ಸರಿಯಾಗಿ ಚೂರ್ಣವ ಮಾಡಿ, ಗೋಮೂತ್ರದಲ್ಲಿ ಅಷ್ಟು ಕಲಕವ ಮಾಡಿ, ಒಂದು ಅರವಿವಳಗೆ ಹಾಕಿ ಕೈಹೆಬ್ಬೆಟ್ಟಿನ ಪ್ರಮಾಣ ಬತ್ತಿಯಂ ಮಾಡಿ ಆ ಬತ್ತಿಯನ್ನು ಆಸನದಲ್ಲಿ ಇರಿಸಿ ಕೊಂಡರೆ ಆ ಮೂಲವ್ಯಾಧಿ ಅಂಕುರವೆಲ್ಲವೂ ಕರಗಿಹೋಗುವವು ; ಎಂದಿಗೂ ಹುಟ್ಟದು. ಮತ್ತೊಂದು—ಒಂದು ಸೇರು ಉದ್ದಿನವಳಗೆ ಹತ್ತು ಶೇರು ಕತ್ತರಿಸಿ ಹಾಕಿ, ಹಕ್ಕರಿಯ ಸಮೂಲವ ಆದರೊತ್ತರವನಿಕ್ಕಿ, ಬೊಳತರದ ರಸ ದಿಂದ ಗುಗ್ಗರಿಯು ಕುದಶಿ, 21 ದಿವಸ ಸೇವಿಸಲೂ ಗುಣವಹುದು.

ರಗತಮೂಲವ್ಯಾಧಿಗೆ : ಇಸುಬಗೋಲು 1 ಪಾವುತೂಕ, ಕಲ್ಲಸಕ್ಕರಿ 1 ಪಾವುತೂಕ, 2 ಜೀನಸನ್ನೂಕೂಡಿಸಿ ಪುಡಿಮಾಡಿ, ಮೂರುಬಟ್ಟಿಗೆ ಬಂದಷ್ಟು

ತೆಗೆದುಕೊಳ್ಳಬೇಕು. ಮತ್ತೊಂದು-ಎಕ್ಕಿಯ ಹಾಲು, ಕಳ್ಳಿಯ ಕುಡಿ, ಕೈಯಿಕುಂಬಳಕುಡಿ, ಹುಲಗಲಕುಡಿ ಈ ಜೀನಸಗಳ ಆಡಿನ ಮೂತ್ರದಿಂದ ಲೇಪನವ ಮಾಡಲು ಮೂಲವ್ಯಾಧಿ ನಾಶನವೂ.

ಧಾತು ಮೂಲವ್ಯಾಧಿನಾಶ : ತಪಶಿಯ ಕುಡಿ, ಎಕ್ಕಿಯ ಕುಡಿ, ಲಕ್ಕಿಯ ಕುಡಿ, ಜಾಜಿಯ ಕುಡಿ, ಗೋಮೂತ್ರದಿಂದ ಅರೆದು ಲೇಪವ ಮಾಡಲು, ಧಾತುಮೂಲವ್ಯಾಧಿನಾಶ ; ತದ್ದಿ ಗಾದರು ಬರುತ್ತದೆ. ಮತ್ತೊಂದು-ಯಾಲಕ್ಕಿ, ಸಕ್ಕರಿ ಚೂರ್ಣ ಮಾಡಿ ಎಮ್ಮಿಯ ಬೆಂಣೆಯಲ್ಲಿ ಕಲಸಿ ಸೇವಿಸಲು ಮೂಲನಾಶ ಮತ್ತು ಬಿಳೆ ಎಳ್ಳು, ಬೆಲ್ಲ 21 ಸೇರು ಇಷ್ಟುಕೂಡಿ ಎಳ್ಳೆಂಣೆಯಲ್ಲಿ ಕಲಸಿ ಕುಡಿವದು, ತುಪ್ಪಾ ಹುಳಿ ಮುಟ್ಟಲಾಗದು. ಹೊರಗಿನ ಮೊಳಿ ಮಾವುದು. ಮತ್ತೊಂದು-ಅಕ್ಕಿ ಗೋಧಿ ತಿರಿವಿ ತುಪ್ಪದಲ್ಲಿ ಕೊಡಲು ನಾಶ. ಮತ್ತೆ-ತ್ರಿಫಲ ಆಡಿನ ಮೂತ್ರದಲ್ಲಿ ಅರೆದು ಕೊಡಲು ಮೂಲವ್ಯಾಧಿ ಮಾಣ್ಗು. ಮತ್ತೆ ಅವುಡಲದ ಕೊನಿ ಅರೆದು ಎಣ್ಣೆಯಲ್ಲಿ ಕೂಡಿಸಿ ಕೊಡಲು ನಾಶ. ಮತ್ತೆ ಅಜಿವಾನಾ ಬಿಸಿ ಮಾಡಿ, ಚೂರ್ಣವ ಮಾಡಿ, ಬಿಳಿಯೆಳ್ಳು, ತುಪ್ಪ ಒಂದು ಸೇರು ಇಷ್ಟು ಕೂಡಿಸಿ ಉದಯದಲ್ಲಿ ನಿಂಬೆಹಣ್ಣಿನಷ್ಟು ತಕ್ಕೊಂಬುವದು. ಮತ್ತೆ ಕಾಕಿರಸ ಸುಣ್ಣದಾಗೆ ತೊಡೆದು ಹಚ್ಚೋದು ; ಕರಗಿಹೋದೀತು. ಕಲಗಲಗಡಲೀರಸ ಮೂಲದ ರಸ ತೆಗೆದು ಆಕಳ ಹಾಲೊಳಗೆ ಕೊಡಲು ನಾಶ. ಮೂಲವ್ಯಾಧಿಗೆ ಲೇಪನ-ತವಕ್ಷಾರ, ಚಿತ್ರಮೂಲ ಮುಳಗಳ್ಳಿ ಹಾಲಲ್ಲಿ ಅರೆದು ಎಳ್ಳೆಂಣೆಯಲ್ಲಿ ಕಲಸಿ ಮೂಲವ್ಯಾಧಿ ಮೊಳಕಿಗೆ ಹಚ್ಚಿದರೆ ಮೊಳಕೆ ಕತ್ತರಿಸುವದು. ಮತ್ತೆ ಹೊಟ್ಟೆಗೆ ತಕ್ಕೊಂಬುವ ಔಷಧ-ಅಳಲಿಕಾಯಿ, ಚಿತ್ರಮೂಲ, ಶುಂಠಿ, ಇದರ ಕಷಾಯುಮಾಡಿ ತವಕ್ಷಾರ ಚೂರ್ಣಹಾಕಿ ಪಾಲ್ಲಿ ಮಾಡುವದು. ಇದಕ್ಕೆ ಬತ್ತಿ ಎಕ್ಕಿ ಹಾಲಿನಲ್ಲಿ ಅರವಿಯ ತೊಯಿಸಿ ಗುದದಲ್ಲಿ ಇಡಲು ಮೂಲ ನಾಶವಾಗುವದು ; ಮತ್ತು ಉಪ್ಪು, ವತ್ಸನಾಭಿ, ತುತ್ತೆ, ಮೂರು ಜೀನಸು ತಂದು ಚೂರ್ಣವ ಮಾಡಿ ನಿಂಬೆರಸದಿಂದ ಮರ್ದಿಸಿ ಗುದಕ್ಕೆ ಲೇಪವಮಾಡಲು ಮೊಳಕಿ ಮೂಲನಾಶ.

ಗೂದಿ ಹಾದದ್ದಕ್ಕೆ: ಹಣಚಿ ತಿಕ್ಕಿ ರಸ ತೆಗೆದು ಗುದಕ್ಕೆ ಪಿಡಿದರೆ ಒಳಗೆ ಸೇರುವದು. ಮತ್ತು ಸಬಖಾರ 3 ಟಾಕ, ಸಜ್ಜಿಕಾರ 3 ಟಾಕ, ಬಿಳಿ

ಗಾರ 3 ಟಾಕ, ನಿಂಬೆಹುಳಿಯಲ್ಲಿ ಚೆನ್ನಾಗಿ ಮರ್ದಿಸಿ ಸಕ್ಕರಿಯಲ್ಲಿ ಗುಂಜೆಪ್ರಕಾರ ಮಾತ್ರೆ ತಕ್ಕೊಳ್ಳಬೇಕು, ಒಂದು ಸಪ್ತಕ.

ರಗತಮೂಲವ್ಯಾಧಿಗೆ: ಬೇಲಪತ್ರಿ 9 ಟಾಕ, ಅಚ್ಚಯಳ್ಳೆಣ್ಣೀ 9 ಟಾಕ, ಮೆಣಸು 7, ಬೆಳ್ಳುಳ್ಳಿ 7, ಇವಷ್ಟು ಮರ್ದನಿಯ ಮಾಡಿ ತಿಂಬೋದು. ಒಂದು ಸಪ್ತಕಕ್ಕೆ ಪರಿಹಾರವಾಗೋದು. ಮತ್ತೆ ಚಿತ್ರಮೂಲ, ಸೈಂಧವಲವಣ, ವೈಲತುತ್ತ, ಅರದಾಳ, ಹಿಂಗು ಇವೆಲ್ಲವು ವರಹತೂಕ, ಮೂಲಂಗಿಗೆ ಒಂದು ಪಳ್ಳಮಾಡಿ ಈ ಜೀನಸಾ ತುಂಬಿ ಕೆಮ್ಮಣ್ಣು ಮೆತ್ತುವದು, ಮತ್ತು ಕಪಠದಿಂದ ಪುಟವ ಹಾಕುವದು, ನಿತ್ಯ ಅಂಗುಲ ಪ್ರಮಾಣ ಒಂದು ಸಪ್ತಕ ಕೊಡಬೇಕು ; ಮೂಲವ್ಯಾಧಿ ನಾಶ. ಆಸನಕ್ಕೆ ಹೊಗಿ : ರಸ, ಶೀಸ, ಕೈಹೀರುಕಾಯಿ, ಕಂಬಳಿಯಚೂರು, ಹುಣಸಿಚಕ್ಕಿ ತಂದು ಬೆಂಕಿಮಾಡಿ ಬೆಟ್ಟಬೇನಕಿನ ಅಸ್ತಿಗಳ ತಂದು ಒಂದು ತೆಗ್ಗುಮಾಡಿ ಅದರಲ್ಲಿ ಬೆಂಕಿಹಾಕಿ ಆಮ್ಯಾಲೆ ಈ ಜೀನಸುಗಳನ್ನೆಲ್ಲಾ ಹಾಕಿ, ಮ್ಯಾಲೆ ಬೀಸುಕಲ್ಲು ಹೋಳು ಇಟ್ಟು, ಆ ಕಲ್ಲಿನ ಬಾಯಿಯಲ್ಲಿ ಗುದವನ್ನಿಟ್ಟು ಹೊಗಿಯು ತಾಕಿಸುವದು. ಮೂಲವ್ಯಾಧಿ ನಾಶಹೊಂದುವದು. ಮತ್ತೊಂದು, ಅಡವಿ ಅವುಡಲವ ಕುಟ್ಟಿ, ಚೂರ್ಣಮಾಡಿ ಹೊಗಿಯು ಹಾಕುವದು, ಅಂದರೆ ಮೂಲವ್ಯಾಧಿ ಪರಿಹಾರವಾಗುವದು.

ಇರಳಗಂಣಿಗೆ : ಸಮುದ್ರಫಲ, ಸಕ್ಕರಿ ಇವೆರಡನ್ನು ಸರಿಯಾಗಿ ನೀರಲ್ಲಿ ಅರೆದು, ಕಣ್ಣಿಗೆ ಹಚ್ಚಲು, ಅರ್ಬುದವೆಂಬ ಕಣ್ಣುರೋಗವು ಹೋಗುವದು. ಅದಂ ಹಿಪ್ಪಲಿ ಗೋಮೂತ್ರದಲ್ಲಿ ತೇದು ಹಚ್ಚಲು ಇರಳುಕಣ್ಣು ಕಾಣುವದು. ಅರಗು, ರಸಾಂಜನ, ಶುಂಠಿ, ಹಿಪ್ಪಲಿ, ಮೆಣಸು, ಇವುಗಳನ್ನು ಸರಿಯಾಗಿ ತೆಗೆದುಕೊಂಡು ಅಂಜನವ ಮಾಡಿ ನೀರಲ್ಲಿ ತೇದು ಹಚ್ಚಲು ಪಿಚ್ಚಕಣ್ಣು ಮಾಣ್ಗು.

ಹಿಮಮಾಕ್ಷಕವನ್ನೂ ಜೇನುತುಪ್ಪವನ್ನೂ ತೇದುಹಚ್ಚಲು ವೃಣಶುಕ್ಲವೆಂಬುವ ರೋಗವು ಮಾಣ್ಗು. ತಿಮಿರಗಂಣಿಗೆ—ರಕ್ತಚಂದನವನ್ನು ಉದಕದಲ್ಲಿ ತೇದು ತಾಂಬ್ರದ ಬಟ್ಟಲೊಳಗೆ ಏಳು ದಿನ ಮರ್ದಿಸಿ ಹಚ್ಚಲು ತಿಮಿರಗಂಣು ವಾಸಿಯಾಗುವದು. ನಿಲವು ಕಣ್ಣಿಗೆ—ಕುರಿಯ ಹತ್ತಿಯ ಬೇರನ್ನು ನೀರಲ್ಲಿ ತೇದು ಹಚ್ಚಲು ನಿಲವುಕಣ್ಣು ಮಾಂಬುದು. ಹಾಗಲಬೇರು, ಕುದುರೆಯ ಮೂತ್ರದಲ್ಲಿ ತೇದು ಹಚ್ಚಲು ಗುಣವಾಗುವದು.

ಕಣ್ಣಿನ ರೋಗಕ್ಕೆ : ಬಿಳಿಗಣಜಲಿಕಲ್ಪ (ಬಿಳಿಗಣಜಲಿಬೇರು), ಆಡಿನ

ಮೂತ್ರದಲ್ಲಿ 7 ದಿವಸ ನೆನಸಿ, ನಿಂಬೆರಸದಲ್ಲಿ 7 ದಿವಸ ನೆನಸಿ ಜೇನುತುಪ್ಪದಲ್ಲಿ ತೇದು ಹಚ್ಚಲು ಕಣ್ಣಿನ ಎಲ್ಲಾ ರೋಗಗಳೂ ವಾಸಿಯಾಗುವವು. ತಿಮಿರ ಗಣ್ಣಿನವರಿಗೆ–ಗರಗದ ರಸದಲ್ಲಿ ತೇದು ಹಚ್ಚಬಹುದು. ಮಂಜುಗಣ್ಣಿನವರಿಗೆ ನಿಂಬೆರಸದಲ್ಲಿ ಹಚ್ಚಬಹುದು. ಸಕ್ಕರಿ ಮೊಲೆಹಾಲಲ್ಲಿ ತೇದು ಹಚ್ಚಲು ಎಲ್ಲಾ ರೋಗಗಳು ವಾಸಿಯಾಗುವವು. ಸೈಂಧವಲವಣ ಅಂಬಿಲದಲ್ಲಿ ಅರೆದು ಹಚ್ಚಲು ಇರಳುಗಂಣು ವಾಸಿಯಾಗುವದು.

ಮತ್ತೆ ಇರಳುಗಂಣಿಗೆ : ಇಂಗಳ ಮೇಣವ ತಂದು ಗಂಡಸಿಗೆ ಇದ್ದರೆ ಹೆಂಗಸಿನ ಮೂತ್ರದಲ್ಲಿ, ಹೆಂಗಸಿಗೆ ಇದ್ದರೆ ಗಂಡಸಿನ ಮೂತ್ರದಲ್ಲಿ ತೇದು ಹಚ್ಚಲು ಇರಳುಗಂಣು ಮಾಣ್ಗು. ಚಾಳಿಸಗಂಧಿಗೆ–ನುಗ್ಗಿಯುಬೇರು, ಗರಗದ ರಸದಲ್ಲಿ ತೇದು ಹಚ್ಚಿದರೆ ವಾಸಿ ; ಕರಿಕರ್ಣಿಕಿಯ ಬೀಜಾ ಮೊಲೆಹಾಲಲ್ಲಿ ತೇದು ಹಚ್ಚಲೂ ಬಹುದು. ಇರಳುಗಂಣಿಗೆ 2ನೇ ಉಪಾಯ—ನೆಲ್ಲಿಯ ಕಾಯಿಯ ಬೀಜವನ್ನು ಅಂಬಿಲದಲ್ಲಿ ತೇದು ಹಚ್ಚಲು ವಾಸಿಯಾಗುವದು.

ಇರಳುಗಂಣಿಗೆ 3ನೇ ಉಪಾಯ : ಸಮುದ್ರಫಲ, ಜೇನುತುಪ್ಪದಲ್ಲಿ ತೇದು ಹಚ್ಚುವದು. ಹೂವುಕರ್ಲಗಣ್ಣು ಹರನೀರು ಸೋರುವ ಕಣ್ಣಿಗೆ–ಸಮುದ್ರಫಲ, ಆಕಳತುಪ್ಪದಲ್ಲಿ ತೇದು ಹಚ್ಚುವದು.

ಕಂಣುಹೂವಿಗೆ : ಕುರುಟಿಗೆಬೇರು ಲಕ್ಕಿಯ ರಸದಲ್ಲಿ ತೇದು ಹಚ್ಚಲು ಹೂವು ಹಾರುವದು.

ಕಂಣುಹೂವಿಗೆ 2ನೇ ಉಪಾಯ : ಸಮುದ್ರದ ನೊರೆ, ಶಂಖದ ಮುರುಕು, ಚಿಲ್ಲಬೀಜ, ಮನುಷ್ಯರ ಡೌಗಿ, ಕೋಳಿಯ ತತ್ತಿಯೊಳಗಿನದು ತೆಗೆದು ಮೇಲಿನ ಕವಚ, ಮನಶಿಲ, ಹಿಪ್ಪಲಿ ಇವೆಲ್ಲಾ ಸಮನಾಗಿ ಪುಡಿಮಾಡಿ ನಿಂಬೆಯ ರಸದೊಳಗೆ ಶುಚಿರ್ಭೂತಿಯಿಂ ಗುಳಿಗಿಯಂ ಮಾಡಿ ಹೂವು ಇದ್ದಲ್ಲಿ ಕಡ್ಡಿಯಿಂದ ಹಚ್ಚಬೇಕು. ಪಥ್ಯ–ಉಪ್ಪು ಇಲ್ಲ. ಅನ್ನ ತುಪ್ಪ ಉಣಬೇಕು, ಗಾಳಿಗೆ ತಿರುಗಬಾರದು, ನಂಜು ತಿನ್ನಬಾರದು, ತಣ್ಣೀರು ಸ್ನಾನಮಾಡ ಬಹುದು. ತಣ್ಣೀರೊಳಗೆ 2 ಸಪ್ತಕ ಹಚ್ಚಬೇಕು, ಅಂದರೆ ಕಣ್ಣುಹೂವು ಇಲ್ಲದಂತೆ ಹೋಗುವದು.

ಕಂಣುಹೂವಿಗೆ 3ನೇ ಉಪಾಯ : ಭದ್ರಮುಷ್ಟಿಯಂ ಆಡಿನಮೂತ್ರದಲ್ಲಿ ತೇದು ಹಚ್ಚಲು, ಜನ್ಮಾಂತರ ಇದ್ದ ಹೂವು ಮಾಣ್ಗು. ಕಣ್ಣಮಂದವಾದರೆ,

ಜಾಪಾಳದ ಬೀಜವನ್ನು ನೀರಲ್ಲಿ ತೇದು ಹಚ್ಚಲು ಕಣ್ಣು ಪ್ರಕಾಶವಕ್ಕು, ನಂಜಿನ ಪದಾರ್ಥವನ್ನು ಸೇವಿಸಬಾರದು.

ಕಣ್ಣೊಳಗೆ ಕಳ್ಳಿ ಬಿದ್ದರೆ: ಕಂಗೊರಿಯ ಬೀಜವಂ ಕಣ್ಣಿಗೆ ಹಾಕಿ ಮೆಲ್ಲಗೆ ಮರ್ದಿಸಿದರೆ ಗುಳಿಗೆ ಆಗಿ ಬೀಳುವದು; ಆ ಬೀಜಗಳು ನುಣುಪಾಗಿರುತ್ತವೆ.

ಕಂಣಶೂಲಿಗೆ: ಕರಕಿಬೇರು ಕಪ್ಪಮಾಡಿ ಪರದೊಳಗೆ ಹಚ್ಚುವದು. ಕರಕಿಯ ಬೇರಿನ ರಸ ಹಚ್ಚಿದರೂ ಒಳ್ಳೇದು.

ಉಷ್ಣಕ್ಕೆ: ನೆಗ್ಗಿಲದ ಸಮೂಲ ರಸ ಒಂದು ಪಾವು, ಅದರಷ್ಟೆ ಆಕಳ ಹಸಿಹಾಲು, ಸಕ್ಕರಿ ಬೆರಸಿ, ಪ್ರಾತಃಕಾಲಕ್ಕೆ ತೆಗೆದುಕೊಳ್ಳಲು ಬಳಿಯಕೆಂಪಿನ ಉಷ್ಣ ಮಾಣ್ಗು. ಪಥ್ಯ ಮಧುರಾನ್ನ.

2ನೇದು: ತ್ರಿಫಲ, ಮರದರಿಶಿನ, ಹಾವುಮೆಕ್ಕೆಯ ಬೇರು, ಭದ್ರಮುಸ್ತಿ ಇದರ ಕಷಾಯದೋಳ್ ಆಡಿನ ತುಪ್ಪ ಪ್ರತಿಪಾಕವಿಕ್ಕಿ ಕುಡಿದರೆ ಇಪ್ಪತ್ತು ಪ್ರಕಾರದ ಉಷ್ಣನಾಶ.

3ನೇದು: ತ್ರಿಕಟುಕ, ತ್ರಿಫಲ, ಯಾಲಕ್ಕಿ, ವಾಯಿವಡಂಗ, ಜೇಷ್ಠಮಧು, ಸೋರುಪ್ಪು, ಇವೆಲ್ಲಾ ಪ್ರತ್ಯೇಕ ಒಂದೊಂದು ಗದ್ಯಾಣ, ಅವರೇ ಹೂವು ಗ 10, ರಾಯಪುಡಿ ಸಕ್ಕರಿ ಗ 20, ಇವೆಲ್ಲಾ ಕುಟ್ಟಿ ಪುಡಿಮಾಡಿ ಇಟ್ಟು ಅಕ್ಕಿಯ ಕಚ್ಚಿಯಲ್ಲಿ ಮೂರು ಗದ್ಯಾಣ, ಪುಡಿ ತೆಗೆದುಕೊಳ್ಳುವದು. ಪಥ್ಯ ಮಧುರಾನ್ನವ ಉಂಬುವದು. 7 ದಿನ, 14 ದಿನ, 21 ದಿನಕ್ಕೆ ಯಾವತ್ತೂ ಉಷ್ಣವು ಪರಿಹಾರವಾಗುವದು.

4ನೇದು: ಕೇದಗಿಯ ಮೊಲಯ ರಸ ಅರ್ಧ ಸೇರು ಅರೆದು, ಶೋಧಿಸಿದ ತುಪ್ಪ ಅರ್ಧಸೇರು, ಸಕ್ಕರಿ 4 ಟಾಕ ಕಲಸಿ ತೆಗೆದುಕೊಂಡರೆ, ಉಷ್ಣ ಪರಿಹಾರವು.

5ನೇದು: ಮೂಗುತಿಯ ತೊಪ್ಪಲದ ರಸ ಅರ್ಧ ಸೇರು, ಜೀರಿಗೆ 3 ಟಾ, ರಾಯಪುಡಿ ಸಕ್ಕರಿ 4 ಟಾ, ಕೂಡಿಸಿ ಕುಡಿದರೆ 3 ದಿವಸದಲ್ಲಿ ಗುಣ. ಪಥ್ಯ ದಧ್ಯಾನ್ನ.

6ನೇದು: (ಪ್ರಮೇಹಕ್ಕೆ) ಯಾಲಕ್ಕಿ, ಅಡಸಾರ, ನೆಗ್ಗಿಲಬೇರು, ಜ್ಯೇಷ್ಠಮಧು, ಹಿಪ್ಪಲಿ, ಹಿಟ್ಟಲಕ್ಕಿ ಇವುಗಳನ್ನು ಸಮಭಾಗ ತೆಗೆದುಕೊಂಡು

ಕಷಾಯುವ ಮಾಡಿ ತೆಗೆದುಕೊಂಡರೆ ಗುಣವಾಗುವದು.

7ನೇದು : ತುಂಬಿಬೇರಿನ ರಸ 1 ಟಾ, ತೆಂಗಿನಹಾಲು 6 ಟಾ, ದುಗ್ಗಾಣಿ ತೂಕ ಸಕ್ಕರಿ–ಈ ಪ್ರಕಾರ 7 ದಿವಸ ತೆಗೆದುಕೊಳ್ಳಲು ಗುಣವಾಗುವದು.

8ನೇದು : ಹೊನ್ನವರಿರಸ 1 ಟಾ, ಮದರಂಗಿಬೀಜ ಯಲಿ ರಸ 1 ಟಾ, ತೆಂಗಿನಹಾಲು 6 ಟಾ, ಇವಲ್ಲಾ ಕೂಡಿ 7 ದಿವಸ ತೆಗೆದುಕೊಂಡರೆ ಗುಣ. ಪಥ್ಯ–ಉಪ್ಪು ಇಲ್ಲವು.

9ನೇದು : ಮಜ್ಜಿಗೆ 1 ಸೇರಿನಲ್ಲಿ ಶರೀತುಂಬ ಉಪ್ಪುಹಾಕಿ ರಾತ್ರಿಯಲ್ಲಿ ಇಬ್ಬನಿಗೆ ಇಟ್ಟು ಮೂರುದಿನ ಪ್ರಾತಃಕಾಲಕ್ಕೆ ಕುಡಿಯುವದು.

10ನೇದು : ರಕ್ತಉಷ್ಣಕ್ಕೆ ರಕ್ತಗಾಂಧಾರಿಯು ತೊಪ್ಪಲು ಹಿಡಿ ತುಂಬ ಅರೆದು, ಹೊಲದೊಳಗಿನ ಅನಂತಚಂಡು 5 ಇವೆರಡನ್ನು ಮಜ್ಜಿಗೆಯೊಳಗೆ ಕೊಡುವದು. 7 ದಿವಸ ಪಥ್ಯ ಮೊಸರು ಅನ್ನ; ಉಳ್ಳಾಗಡ್ಡಿಯನ್ನು ಸೇವಿಸ ಬಹುದು.

11ನೇದು (ಮೋಹಉಷ್ಣಕ್ಕೆ) : ಬನ್ನಿತೊಪ್ಪಲು 1 ಮುಷ್ಟಿ, ಕರಿಹತ್ತಿ ತೊಪ್ಪಲು 1 ಮುಷ್ಟಿ, ಸರ್ವಸಿದ್ಧಿ ತೊಪ್ಪಲು 1 ಮುಷ್ಟಿ, ಮೂರನ್ನು ಕೂಡಿಸಿ ಅಚ್ಚೇರು ರಸ ತೆಗೆದು ಅದರಲ್ಲಿ ಸಕ್ಕರೆ 3 ಗದ್ಯಾಣ ಕೂಡಿಸಿ ಮೂರು ವ್ಯಾಳೆ ಕೊಡುವದು. ಪಥ್ಯ ಬೆಂಣೆ ಯಾಲಕ್ಕಿ ಮೊಸರು ಅನ್ನ ಮೂರು ದಿವಸ, ಆಮೇಲೆ ಎಂಟು ದಿವಸ ಅನ್ನ ತುಪ್ಪ ಉಣಬೇಕು.

1 ಮತ್ತೆ ತೊಟ್ಟಿಲಮುಗಳು 7, ಬೇವಿನಮುಗಳು 7, ಗಜಗಿನ ಮುಗ ಗಳು 7, ಬೆಳ್ಳುಳ್ಳಿಬ್ಯಾಳಿ 7, ಮೆಣಸಿನಕಾಳು 7, ಇಷ್ಟನ್ನು ಅರೆದು ಮುದ್ದೆಯು ಮಾಡಿ ಕೆಳಗೆ ಮೇಲೆ ತುಪ್ಪವ ಹಾಕಿ ನುಂಗುವದು. ಪಥ್ಯ ಅನ್ನ, ತುಪ್ಪ ಮೂರು ದಿವಸ ಉಂಬುವದು.

2 ಮತ್ತೆ ಹೊಸ ಸುಣ್ಣ ಏಳು ಸಾರಿ ಪ್ರತ್ಯೇಕ ಅರವಿಯಿಂದ ಶೋಧಿಸಿ ಆರಿದ ಮೇಲೆ ಕಡ್ಲಿಕಾಳ ಪ್ರಮಾಣ ಗುಳಿಗೆಮಾಡಿ ಕೆನೆಮೊಸರಲ್ಲಿ ತಕ್ಕೊಂಬು ವದು.

3 ಮತ್ತೆ ದೊಡ್ಡನೆಗ್ಗಿಲಮುಳ್ಳಿನ ಚೂರ್ಣ ತುಪ್ಪ ಸಕ್ಕರೆಯಲ್ಲಿ ಕೊಡು ವದು ; ಉಷ್ಣ ಪರಿಹಾರವಾಗುವದು.

4 ಮತ್ತೆ ನೆಲ್ಲಿಕಾಯಿ ರಸದಲ್ಲಿ ಅರಿಶಿನದಪುಡಿ ಹಾಕಿ ಜೇನುತುಪ್ಪವ ಕೂಡಿಸಿಕೊಡಲು ಉಷ್ಣಪರಿಹಾರವಾಗುವದು.

5 ಮತ್ತೆ ಲಕ್ಕೀತೊಪ್ಪಲು ಆಕಳ ಮಜ್ಜಿಗೆಯಲ್ಲಿ ಅರೆದು ತಕ್ಕೊಳ್ಳುವದು. ಪಥ್ಯ ಮಜ್ಜಿಗಿ ಅನ್ನ ಅಥವಾ ರಾತ್ರಿಯಲ್ಲಿ ಜೀರಿಗಿ ನೆನೆಯಿಟ್ಟು ಪ್ರಾತಃಕಾಲಕ್ಕೆ ಆ ನೀರು ತೆಗೆದುಕೊಂಡು ಅದರೊಳಗೆ ಸಕ್ಕರಿ ಹಾಕಿ 7 ದಿವಸ ತಕ್ಕೊಂಬುವದು.

12 ನೇದು : ಪಾರಜವ ಉಷ್ಣ ವಡದದ್ದಕ್ಕೆ : ಉಷ್ಣ ಕೈಯಲ್ಲಿ ವಡೆದರೆ ಪಾರಿಜಾತದ ಕಟ್ಟಿಗೆ ಸಣ್ಣಾಗಿ ಕಡಿದು ತಮ್ಮ ಕೈಯಿಂದ 1 ಹಿಡಿ 2 ಸೇರು ನೀರಿನಲ್ಲಿ ಕುದಿಸಿ 1 ಪಾವಶೇರು ಉಳಿದ ನಂತರ ಸಕ್ಕರೆಹಾಕಿ ಕುಡಿಯುವದು. ಪಥ್ಯ 1 ಸಪ್ತಕ ಹಾಲು ಅನ್ನ ತಕ್ಕೊಂಬುವದು, ಪಾರಜ ವಡದಿದ್ದರೂ ಹೋಗುವದು.

ಮತ್ತೆ ಸಂಡಿಗ್ಗುಂಬಳಬೀಜ 4 ಪೈ ತೂಕ ಆಡಿನ ಹಾಲಲ್ಲಿ ಅರೆದು ರಾಜಪುರಿ ಸಕ್ಕರಿ ಹಾಕಿ, 21 ಅಥವಾ 48 ದಿವಸ ತಕ್ಕೊಂಬುವದು. ಇಪ್ಪತ್ತೊಂದು ಪ್ರಕಾರದ ಉಷ್ಣ ಪರಿಹಾರವಾಗುವದು.

13ನೇದು : ಮೂತ್ರಹೋಗುವುದಕ್ಕೆ ಆಲಸ್ಯವಾದರೆ, ಸೋರುಪ್ಪು ಅರೆದು ಮೊಸರೊಳಗೆ ತಕ್ಕೋಬೇಕು. ಮೊಸರು ಅನ್ನವನುಂಬುವದು. ಆಮೇಲೆ ಬೇಕಾದ ಪದಾರ್ಥವನ್ನು ಉಂಬುವದು.

ಕಾವಿನಿಂದ ಬದ್ಧಕ ಆದರೆ ಉಷ್ಣದಿಂದ ಹೊರಕಡಿಗೆ ಆಗದಿದ್ದರೆ, ಹುಣಸಿ ಹಣ್ಣಿನ ರಾಡಿಯೊಳಗೆ ಬಾಳೇಹಣ್ಣು ಕಲಸಿ ತಕ್ಕೊಂಬುವದು. ಶೌಚ ಸಾಧಾರಣವಾಗುವದು.

ಮತ್ತೆ ಉಷ್ಣದಿಂದ ಮೂತ್ರ ಕೆಂಪಗೆ ಹೋಗುತ್ತಿದ್ದರೆ, ನೀರಗೋಳಿಯ ಸೊಪ್ಪು 2 ಮುಷ್ಟಿ, ಆಕಳು ಮಜ್ಜಿಗೆಯಲ್ಲಿ ಕುಟ್ಟಿ, ಯಾಲಕ್ಕಿಪುಡಿ, ಜೀರಗಿ, ಸಕ್ಕರೆಯು ಹಾಕಿ ತಕ್ಕೊಂಬುವದು. ನಂಜಿನ ಪದಾರ್ಥ ಬಿಡುವದು, ಮಧುರಾನ್ನ ಉಂಬುವದು.

ಬಿಳೀ ಉಷ್ಣಕ್ಕೆ : ಸೂರ್ಣದ ತಾಟಿ ತಂದು, ಮಜ್ಜಿಗೆ ಅಥವಾ ನೀರೊಳಗೆ ಕುಟ್ಟಿ ರಸವ ತೆಗೆದು, ಒಂದು ಶೇರು ರಸವ ಹೊಟ್ಟೆವಳಗೆ ಕೊಡುವದು.

ಸಪ್ಪನ್ನ ಅನ್ನ ಮಜ್ಜಿಗೆ ಉಣ್ಣುವುದು. ಈ ಪ್ರಾಕಾರ ಏಳು ದಿವಸ ರಸ ತಕೋಬೇಕು. ತಣ್ಣೀರು ಕುಡೀಬೇಕು. ಇದರ ಹೊರ್ತು ಏನೂ ತಿನ್ನಬಾರದು.

1. ಮತ್ತೆ ಹೊನ್ನವರೆಯು ಮುಗಳು ಎಳೇವು ದಿನಾ ಒಂದು ಮುಷ್ಟಿ ಬೆಲ್ಲದ ಸಂಗಡ ಒಂದು ಸಪ್ತಕ ತಕ್ಕೋಬೇಕು: ಉಪ್ಪು ಇಲ್ಲದ ಅನ್ನ ತುಪ್ಪ ಉಣಬೇಕು, ತಂಣೀರು ಕುಡಿಬೇಕು. ಅಂದರೆ ಪರಿಹಾರವಾಗುವುದು.

2. ಮತ್ತೆ ಮೂರು ನಿಂಬೇಹಣ್ಣು ತಂದು, ಅದನ್ನ ಹೋಳಕೀ ಮಾಡಿ, 1 ಹೋಳು ಬೀಜವಂ ತೆಗೆದು, ಅದರಲ್ಲಿ ಬೀಜ ಇಲ್ಲದ ಜೀರಗಿ 1½ ಪೈ ತೂಕ, ಸಕ್ಕರಿ 1 ಪೈ ತೂಕ, ಟಂಕಣಖಾರ 3 ಮಾಶಿ, ಈ ಪ್ರಕಾರ ಕೂಡಿಸಿ ರಾತ್ರಿಯಲ್ಲಿ ಹೋಳಕೆ ತುಂಬಿ ಮಾಳಿಗೆಯು ಮೇಲೆ ಇಟ್ಟು, ಬೆಳಿಗೆ ಎದ್ದು ತಕ್ಕೊಂಬುವದು. ಪಥ್ಯ ಮಜ್ಜಿಗೆ, ಜೋಳದ ಅನ್ನ ಮೂರು ದಿವಸ ತಕ್ಕೊಂಡರೆ ಪರಿಹಾರವಾಗುವದು.

ರಕ್ತ ಸ್ರವಿಗೆ : ದಾಸವಾಳದ ಹೂವಿನ ರಸ ಪಾವು, ಅಂಬಿಲದಲ್ಲಿ ಅರೆದು ಕುಡಿಯುವುದು.

ಮತ್ತೆ, ಧಾತು ಹೋಗದಿದ್ದರೆ, ಟೊಂಕ ಶೂಲಿಗೆ, ಧಾತು ಪುಷ್ಟಿಯಾಗಿ ಟೊಂಕಶೂಲಿ ನಿಲ್ಲುವದಕ್ಕೆ, ಹೀರಾಗುಗ್ಗಳ ದುಡ್ಡ ತೂಕ, ಆಲದ ಹಾಲು ಮೂರು ದುಡ್ಡ ತೂಕ ಆಲದ ಹಾಲಿನೊಳಗೆ ಗುಗ್ಗಳವ ನೆನೆಹಾಕಿ ಮರುದಿವಸ ಅರೆದು, ಕಡ್ಲಿಕಾಳು ಪ್ರಮಾಣ ಗುಳಿಗೆಯು ಕಟ್ಟಿ ಏಳು ದಿವಸ, ದಿನ ವಂದು ಗುಳಿಗೆಯನ್ನ ಸಕ್ಕರಿಯು ಸಂಗಡ, ತಕ್ಕೊಂಬುವದು. ಪಥ್ಯ ಗೋಧಿ ರೊಟ್ಟಿ, ತುಪ್ಪ ತಕ್ಕೊಂಬುವದು. ಹುಳಿ ಮೊದಲಾದ ನಂಜಿನ ಪದಾರ್ಥ ಬಿಡುವದು. ಅಂದರೆ ಧಾತು ಹೋಗುವದೂ ಟೊಂಕಶೂಲಿ ಬಂದ್ ಆಗುವದು.

ಭಂಗುಹತ್ತಿದರೆ ಜೇರಗಿ, ಕರಿಜೀರಗಿ, ಬಿಳೀಸಾಸುವೆ, ಕರೆಯೆಳ್ಳು ಇವುಗಳನ್ನು ಆಡಿನ ಮೂತ್ರದಲ್ಲಾಗಲಿ ಅಥವಾ ಹಾಲಿನಲ್ಲಾಗಲಿ ಅರೆದು ಹಚ್ಚುವದು. ಭಂಗು ಮಾಣ್ಗು. ಮತ್ತು ಶಂಕದ ವಡಕು ಗೋಮೂತ್ರದಲ್ಲಿ ಅರೆದು ಹಚ್ಚಲೂ ಭಂಗು ಮಾಣ್ಗು.

ವೀರ್ಯ ಹೆಚ್ಚುವದಕ್ಕೆ : ಅಶ್ವಗಂಧಿ (ಅಂದರೆ ಅಂಗರದಗಡ್ಡಿ) ಸಮೂಲ ಅದರ ಪತ್ರ ಫಲಗಳನ್ನೆಲ್ಲಾ ಸಹಿತ ನೆರಳಲ್ಲಿ ವಣಗಿಸಿ ಹಿಟ್ಟು ಮಾಡಿ, ಹಾಲಿನಲ್ಲಿ

ಕುಡಿಯಲು, ವೃದ್ಧನು ಹದಿನಾರು ವರ್ಷದ ಪ್ರಾಯದವನಂತೆ ಆಗುವನು. ಪಥ್ಯ ಮಧುರಾನ್ನ ಭೋಜನ ; ವೀರ್ಯ ಹೆಚ್ಚುವದು.

ಇಂದ್ರಿಯ ಸ್ತಂಭನಕ್ಕೆ : ಅಪು 1 ಗದ್ಯಾಣ ತೂಕ, ಜಾಯಫಲ 1 ಗ, ಲೋದ್ರ 1 ಗ, ಈಸು–ಪಂಚಾಂಗ ಅಂದರೆ ಪತ್ರ, ಪುಷ್ಪ, ಫಲ, ತಾಟಿ, ಮೂಲ, ಬೆಂಣಿಬಾಳಾಯಿ 1 ಗ, ಗುಗ್ಗಳ 1 ಗ, ಬೆಲ್ಲ 7 ಗ, ಇವಂ ಕೂಡಿಸಿ ರಾಯಪುಡಿ ಸಕ್ಕರೆ 1 ಗ ಹಾಕಿ ತಕ್ಕೊಳ್ಳಲು ಇಂದ್ರಿಯ ಸ್ತಂಭನ. ಇದಕ್ಕೆ ನಿಂಬೆಹಣ್ಣು ಉತಾರ.

ಮತ್ತೆ ಜೀವಂತಿಯಪುಡಿ 3 ಗ, ಕರೇ ಆಕಳಹಾಲು 1 ಪಾವು ಕಲಿಸಿ ಕೊಳ್ಳಲು ವೀರ್ಯವೃದ್ಧಿ. 3 ದಿವಸ ಲವಣ, ಆಮ್ಲ ವರ್ಜ್ಯ. ಪುರುಷತ್ವ ಹೋದದ್ದು ಬರುವದು.

ಮತ್ತೆ ಮದನ ಕಾಮೇಶ್ವರಿಯ ಚೂರ್ಣ : ಕೂಗರಿಯ ಬೀಜ, ಗೊಳಗೊಳಿಕೆಯಬೀಜ, ನೆಗ್ಗಿಲ, ನೆಲದಾಳ, ಆಸಾಡೀ (ಅಂದರೆ ಉತ್ರಾಣಿ), ಉದ್ದು, ಭೂಸಕ್ಕರಿ, ಜಾಜಿಕಾಯಿ, ಜಾಯಪತ್ರಿ, ಲವಂಗ ಇವುಗಳ ಪೋಸ್ತ ಕಾಯಿರಸದಲ್ಲಿ ಬೋರೀಬೀಜ ಪ್ರಮಾಣ ಗುಳಿಗೆಯ ಕಟ್ಟಿ, ದಿನ 1ಕ್ಕೆ ಮೂರು, ಜಾವಕ್ಕೆ 1 ಗ ತೂಕ ತಕ್ಕೊಂಬುವದು ; ಮೇಲೆ ಹಾಲು ಸಕ್ಕರೆ ತಕ್ಕೊಂಬುವದು ; ಲವಣ, ಆಮ್ಲ ವರ್ಜ್ಯ.

ಮಹಾವೀರ್ಯ ಸ್ತಂಭನಕ್ಕೆ : ನೆಗ್ಗಿಲಬೇರು, ನೆಲ್ಲಿಯಚೆಟ್ಟು, ಆಮರದ ಬಳ್ಳಿ ಮೂರನ್ನೂ ಸಮಭಾಗ ಚೂರ್ಣವ ಮಾಡಿ, ಅದರಷ್ಟು ಎಳ್ಳು ಹಾಕಿ ನಾಲ್ಕನ್ನೂ ಸಕ್ಕರೆ ವೆರಸಿಕೊಳ್ಳಲು ಸ್ತಂಭನವಹುದು.

ಮತ್ತೆ ಗೊಳಗೊಳಕಿಯ ಬೀಜ 9 ಗ ತೂಕ, ಕಾರಿಕ ಪಾವು ಬೀಜವ ತೆಗೆದು, ಅದರೊಳಗೆ ಆ ಬೀಜವ ತುಂಬಿ ದಾರವ ಬಿಗಿದು ಒಂದೊಂದು ಸುತ್ತು ವದು, ಗೋಧೀಹಿಟ್ಟು 3 ಶೇರು ನಾದಿ ಎರಡು ರೊಟ್ಟಿಯ ಮಾಡಿ ಒಂದು ರೊಟ್ಟಿಯ ಮೇಲೆ ಈಸು ಉತ್ತೊತ್ತಿಗಳನ್ನು ಇಟ್ಟು ಮೇಲೆ ಒಂದು ರೊಟ್ಟಿ ಮುಚ್ಚಿ, ಇದನ್ನು ಕುರೀಗೊಬ್ಬರದಲ್ಲಿ ರೊಟ್ಟಿಯ ಸುಟ್ಟು ವಳಿತಾಗಿ ಬೆಂದು ಕರಕಾದ ಮೇಲೆ ತಗಿದು ವಡದು ಅದರೊಳಗಿದ್ದ ಉತ್ತೊತ್ತಿಯ ತಕ್ಕೊಂಡು ಜೇನುತುಪ್ಪ ಶೇ $\frac{1}{2}$ ಆಕಳತುಪ್ಪ ಶೇ $\frac{1}{2}$ ಈ ಎರಡೂ ತುಪ್ಪದಲ್ಲಿ ಉತ್ತೊತ್ತಿಯ ಹಾಕುವುದು. 5 ದಿವಸ ಇಟ್ಟು, ಒಂದನೇ ದಿನ 1, ಎರಡನೇ ದಿನ 2

ಇದರಂತೆ ವೃದ್ಧಿಯು ಮಾಡಿ ತಕ್ಕೊಂಬುವದು. ಇವೇ ತುಪ್ಪ, ಗೋಧೀ ರೊಟ್ಟಿ, ಸಕ್ರಿ ಪಾವು, ತುಪ್ಪ ಪಾವು, ಈ ಪ್ರಕಾರ ಆಗುವ ತನಕ ತಿನ್ನುವದು. ನಿಂಬೆಹಣ್ಣು ಉತಾರ. ಇದರಿಂದ ವೀರ್ಯವೃದ್ಧಿ.

ಸ್ತ್ರೀಯರ ಜೈಸುವದಕ್ಕೆ : ಕರೆಮದ್ದ ಗುಣಿಕೇಕಾಯಿ ಸಮನಾಗಿ ಕೊಯಿದು ಎರಡು ಹೋಳು ಮಾಡಿ, ವಳಗಿನ ಬೀಜ ಮುಂತಾದ್ದು ತೆಗೆದು, ಬಟ್ಟಲಹಾಗೆ ಮಾಡಿ, ಅದರೊಳಗೆ ಒಂದು ಜಾಜಿಕಾಯಿ ತುಂಬ ರಂಧ್ರವನ್ನು ಮಾಡಿ ಇಟ್ಟು, ಲವಂಗ 2 ಮಾಶಿ, ಪತ್ರಿ 2 ಮಾಶಿ, ಕಸ್ತೂರಿ 1 ಮಾಶಿ, ಮೊಗಲಾಯಿ ಔಡಲದ (ಅಂದರೆ ಮರ ಅವುಡಲ ಮುಗಳು, ಚಿವಟಿದರೆ ಹಾಲು ಬರುತ್ತದೆ), ಆ ಹಾಲು ಹಾಕಿ ಎರಡು ಬಟ್ಟಲೂ ಕೂಡಿಸಿ ಮೇಲೆ ಕಣಕವ ಹಚ್ಚಿ ಅರವಿ ಸುತ್ತಿ, ಕಾಕುರಳತಾಳಿ ಹಾಕಿ, ನಡುವೆ ಇಟ್ಟು ಸುಟ್ಟು, ಆಮೇಲೆ ತೆಗೆದು ಅರೆದು, ಉದ್ದಿನಕಾಳು ಪ್ರಮಾಣ ಗುಳಿಗೆ ಮಾಡಿ ಇಡ ಬೇಕು. ಒಂದು ಗುಳಿಗೆ ಬಾಯೊಳಗೆ ಹಿಡಿದು, ಸ್ತ್ರೀಯರ ಭೋಗಿಸುವದು ಉತಾರ ನಿಂಬೆಹುಳಿ. ಬೆಳ್ಳುಳ್ಳಿ ಬ್ಯಾಳಿಯನರೆದು ಕುಡಿಸುವದು.

ಮತ್ತೆ ಜಾಜಿಕಾಯಿ 1 ತೂಕ ಮಾಡಿ, ಪಕ್ಕಾ ಪಾವು ಹಾಲಿನವಳಗೆ ಹಾಕಿ ಕಾಸಬೇಕು. ಹಾಲಷ್ಟು ಆಟ್ಟಿಸಿದ ಮೇಲೆ ಕಾಯಿ ತೆಗೆದು ಇಟ್ಟಿರ ಬೇಕು. ಅದನ್ನ ವಡೆದು ಒಂದೊಂದು ಚೂರು ಬಾಯೊಳಗೆ ಹಿಡಿದರೆ ಸ್ತ್ರೀಸಂಯೋಗ ಒಂದಾವರ್ತಿ ಮಾಡತಕ್ಕಂಥಾದ್ದು ನಾಲ್ಕಾವರ್ತಿ ಮಾಡ ಬಹುದು. ಉತಾರ ನಿಂಬೇಹುಳಿ ತಕ್ಕೊಂಬುವದು.

ಧಾತುಪುಷ್ಟಿಗೆ : ಹಿರೆಮದ್ದಿನಗಡ್ಡಿ $1\frac{1}{2}$ ಶೇರು, ಜೇನುತುಪ್ಪ 5 ಶೇರು, ಖಾರೀಕ 3 ಶೇರು, ಜಾಯಿಫಲ ಶೇರು, ಪತ್ರಿ $\frac{1}{4}$ ಶೇರು, ಯಾಲಕ್ಕಿ 9 ಪೈ ತೂಕ, ಹಿಪ್ಪಲಿ 9 ಪೈ ತೂಕ, ಮೋಡಿ 9 ಪೈ ತೂಕ, ಬಡೆಸೋಪು 3 ಪೈ ತೂಕ, ಅಜವಾನ 3 ಪೈ ತೂಕ, ಅಂಟು 9 ಪೈ ತೂಕ, ದಾಲಚಿನ್ನಿ 9 ಪೈ ತೂಕ ಇವಷ್ಟನ್ನು ಕೂಡಿಸಿ ಗುಳಿಗೆಯಾಗಲಿ ಅಥವಾ ಚೂರ್ಣವಾಗಲಿ ಮಾಡಿ ನಿತ್ಯ ತುಪ್ಪದ ಸಂಗಡ ಸೇವಿಸಲು, ಧಾತುಪುಷ್ಟಿ ಆಗುವದು. ಪಥ್ಯ—ಮಧುರಾನ್ನ ಉಂಬುವದು, ನಂಜಿನ ಪದಾರ್ಥ ಬಿಡುವದು.

ಮತ್ತೆ ತಾಲಮುಖಾನಬೀಜ 3 ಪೈ ತೂಕ, ಬೀಜಬಂದು 3 ಪೈ ತೂಕ ರಾತ್ರಿ ನೀರೊಳಗೆ ನೆನೆಹಾಕಿ ಕಲ್ಲುಸಕ್ಕರೆ ಹಾಕಿ ತಕ್ಕೊಂಬುವದು. ಮೂರು

ದಿವಸ ನಿತ್ಯ ಒಂದು ರುವಿತೂಕ ತಕ್ಕೊಂಬುವದು. ನಂಜಿನ ಪದಾರ್ಥ ಬಿಡುವದು.

ಪುರುಷತ್ವಹೋದ್ದಕ್ಕೆ : ಕುರಟಗಿಬೇರಿನ ಪುಡಿ 1 ಶೇರಿಗೆ ಹಾಕುವ ಜೀನಸು — ಜಾಕಾಯಿ 3 ಪೈ ತೂಕ, ಪತ್ರಿ 3 ಪೈ ತೂಕ, ಗೋಟಡಿಕಿ 3 ಪೈ ತೂಕ ಸಮಾನ ಒಂದೊಂದು ತೊಲಿ ಪುಡಿ ಮಾಡಿ ಹಾಕಿ ಹಳೆ ಬೆಲ್ಲದಲ್ಲಿ ಕಲಸಿ ಗುಳಿಗೆಯು ಮಾಡಿ ಮೂರು ದಿನ ಅಹೋರಾತ್ರಿ ತಕ್ಕೋಬೇಕು. ಪುರುಷತ್ವ ಬಂದೀತು. ಹುಳಿ ವರ್ಜ್ಯ.

ಮತ್ತೆ ನಪ್ಪುಮಧುಕ 3 ಶೇರು, ಪೋಸ್ತಕಾಯಿ 3, ಎಕ್ಕಿನಹಾಲು 1 ಪೈ ತೂಕ, ಗಿರಿಕರ್ಣಿಕೆ 1 ಶೇರು, ಭಂಗಿ 1 ಶೇರು, ಗೋಳಗೊಳಕಿಬೀಜ 1 ಶೇರು, ಬ್ರಹ್ಮದಂಡಿಯು ತಾಟಿಯುಚೂರ್ಣ 1 ಶೇರು, ತುಲಸಿಯುಬೀಜ 1 ಶೇರು, ವತ್ಸನಾಭಿ 1 ಗದ್ಯಾಣ, ಆಡಿನಹಾಲಲ್ಲಿ, ಪುನಃ ಆಕಳ ಹಾಲಲ್ಲಿ ಈ ಎರಡು ಹಾಲಿನೊಳಗೆ ಅಟ್ಟು, ಬೋರಿಬೀಜ ಪ್ರಮಾಣ ಮಾತ್ರೆ ನಾಲ್ವತ್ತುದಿನ ಸೇವಿಸೋದು. ಹೋದಂಥಾ ಪುರುಷತ್ವ ಬರುವದು. ಪಥ್ಯ ಕಣಕತುಪ್ಪ.

ವೀರ್ಯ ಬಂದ್ ಆಗುವದಕ್ಕೆ : ವಿಷ್ಣುಕಾಂತಿಯು ಸಮೂಲ ಚೂರ್ಣವ ಮಾಡಿ ಹಾಲೊಳಗೆ ಸಕ್ಕರಿ ಪುಡಿ ಹಾಕಿ ತಕ್ಕೊಂಬುವದು, ಪಥ್ಯ ಕ್ಷೀರಾನ್ನ. ವೀರ್ಯ ಬಂದ್ ಆಗುವದು.

ಲವಂಗ 3 ಪೈ ತೂಕ, ಬಜಿ 3 ಪೈ ತೂಕ, ಕಟಕರೋಹಿಣಿ 3 ಪೈ ತೂಕ, ಕೃತಾಂಜಲಿ (ಅಂದರೆ ಮುಟ್ಟಿಲಮುರಕಿ) 3 ಪೈ ತೂಕ, ಅರಶಿನ 3 ಪೈ ತೂಕ, ಸಮಾನಗೋಡು ಮಾತ್ರೆಯು ಮಾಡಿ ಆಕಳ ತುಪ್ಪ ಅಥವಾ ಎಮ್ಮಿಯು ತುಪ್ಪ ದೊಳಗೆ ಇಪ್ಪತ್ತೊಂದು ದಿವಸ ಕೊಡಲು ವೃದ್ಧನು ಪ್ರಾಯಸ್ಥನಾಗುವನು.

ಸಣ ಹುಡುಗರ ಭೂತಜ್ವರಕ್ಕೆ : ಶುಭದಿವಸ (ಅಂದರೆ ಪುಷ್ಯಾರ್ಕ, ಅಂದರೆ ಗುರುವಾರ ಪುಷ್ಯನಕ್ಷತ್ರ ಬಂದ ದಿವಸ) ಮಯೂರಶಿಖಿಯ ಬೇರು ತೊಟ್ಟಿಲ ಮೇಲೆ ಕಟ್ಟಲು ಅಥವಾ ಕೊರಳಿನಲ್ಲಿ ಕಟ್ಟಲು ಭೂತಗ್ರಹ ದೋಷ ಹರವು. ಆ ಮಯೂರಶಿಖಿಯ ಧೂಪವ ತೋರಿಸಿದರೆ ಜ್ವರ ಪರಿಹಾರ. ಆ ಬೇರನ್ನ ಎಡಗೈಯಲ್ಲಿ ಕಟ್ಟಲು ವಿವಾದ ಜೈಸುವನು. ಆ ಬೇರನ್ನ ಶತ್ರುವಿನ ಬಾಗಿಲಲ್ಲಿ ಹೂಳಲು ಶತ್ರುಮುಖ ಬಂಧನ. ಆ ಬೇರು ತಲೆಯಲ್ಲಿದ್ದರೆ ಶಸ್ತ್ರ

ನಿವಾರಣ. ಆ ಬೇರನ್ನ ಪೂಜಿಸಿ ತನ್ನ ಮನೆಯಲ್ಲಿ ಹೂಳಲು ಕಳ್ಳರಂಜಿಕಿ ಇಲ್ಲವು. ಆ ಬೇರನ್ನ ಬಲಗೈಯಲ್ಲಿ ಕಟ್ಟಲು ಅಪಮೃತ್ಯು ಜಯವು. ಆ ಬೇರು ಸ್ತ್ರೀಯರಿಗೆ ಋತುಕಾಲದಲ್ಲಿ ಕೊಡಲು ಗರ್ಭಿಣಿಯಹಳು. ಆ ಬೇರನ್ನ ತೇದು ನಾಭಿಗೆ ಬೊಂಬಿಗೆ ಲೇಪ ಮಾಡಿದರೆ ವೀರ್ಯಸ್ತಂಭನ. ಆ ಬೇರನ್ನ ಹಳೆನೀರಲ್ಲಿ ತೇದು ಕುಡಿಸಿದರೆ ವಾಶಿಸಿದರೆ ಸರ್ಪನ ವಿಷ ಬಿಡುವದು. ಆ ನೀರು ತುಪ್ಪ ದೊಳಗೆ ಕೊಡಲು, ಅಂದರೆ ತಿಂಡಿ ಪರಿಹಾರ. ಆ ಬೇರನ್ನ ತುಪ್ಪ, ಜೇನುತುಪ್ಪ ದೊಳಗೆ ಕುಡಿಯಲು ದೂರಶ್ರವಣ. ಆ ಬೇರನ್ನ ಎಂಣಿಯಲ್ಲಿ ತಕ್ಕೊಂಡರೆ ವಾತ ಶೂಲಿ ಪರಿಹಾರವಾಗುವದು.

ವಮನವಾಗುವದಕ್ಕೆ ಉಪಶಮನ : ಮೆಣಶಿಲೆ 1 ಭಾಗ, ಹಿಪ್ಪಲಿ 1 ಭಾಗ, ಮೆಣಸು 1 ಭಾಗ, ಬೆಳವಲತಿಳಲು 1 ಭಾಗ, 4 ಗದ್ಯಾಣ ಅಕ್ಕಿ ಅರಳು ಇಷ್ಟನ್ನು ಚೂರ್ಣವ ಮಾಡಿ ಸಕ್ಕರಿಯು ಕಲಸಿ ದಿನ 4 ಗದ್ಯಾಣದಂತೆ ಭಕ್ಷಿಸಲು ಸಂತತವಾಗಿ ಹಂಥಾ ಛರ್ದಿ ರೋಗ ಮಾಣ್ಗು.

ನೀರಡಿಕಿಗೆ : ಆಲದ ಜಡಿ, ಸಕ್ಕರಿ, ಕೋಷ್ಟ, ನೈದಿಲಪುಷ್ಪ, ಅಕ್ಕಿ ಅರಳು ಇಷ್ಟನ್ನು ಸರಿಯಾಗಿ ಅಟ್ಟು ಮೆತ್ತಗಾದರೆ ನೆಲ್ಲಿಕಾಯಿ ಪ್ರಮಾಣ ಗುಳಿಗೆಯು ಮಾಡಿ ಬಾಯೊಳಗೆ ಇಟ್ಟುಕೊಂಡರೆ ಅತ್ಯಂತವಾದ ನೀರಡಿಕೆ ಮಾಣ್ಗು.

ಚಿಬ್ಬಿಗೆ : ನೆಲ್ಲಿಕಾಯಿರಸ, ಸಜ್ಜಿಯುರಸ (ಅಂದರೆ ರಾಳ), ಬೀಡಲವಣ ಈಸನ್ನು ಸರಿಯಾಗಿ ಕೊಂಡು ಅದರೊಳಗೆ ಆ ಮರದ ಬಳ್ಳಿಯು ಕಷಾಯುವನ್ನು ಅಂಬಿಲದಲ್ಲಿ ಹಾಕಿ ವಳಿತಾಗಿ ಮರ್ದಿಸಿ ಆ ಕಲಕವನ್ನು ಚಿಬ್ಬಿಗೆ ಪೂಸಿಕೊಂಡರೆ ಚಿಬ್ಬು ಮಾಣ್ಗು.

ತದ್ದು ತೀಟೆಗೆ : ಕರಕಿಯು ಬೇರಿನ ರಸ, ಅಣಲಿಕಾಯಿ ಚೂರ್ಣ, ಸೈಂಧವಲವಣ, ತಗರಿಚಿ (ಅಂದರೆ ನಸಗುಂನಿ ಬೀಜ), ಕುರುಟಿಗಾ ಈಸನ್ನು ವಳಿತಾಗಿ ಮರ್ದಿಸಿ ಮೈಗೆ ಪೂಸಲು ತದ್ದು ತೀಟೆ ಎಲ್ಲವು ನಾಶವಹುದು.

ಮಂಡಲತದ್ದು ಕುಷ್ಟಕ್ಕೆ : ಕಳ್ಳಿಯಕೊನಿ, ಚಿತ್ರಮೂಲ, ಕಾಡಿ ಗರ್ಗುರ, ಎಕ್ಕಿಬೇರಿನ ತಾಟಿ, ಕೋಷ್ಟ, ಕೊಂಡಶೀಗನ ಬೇರಚಕ್ಕಿ, ಸೈಂಧವ ಲವಣ, ಸಂವತ್ಸರಲವಣ, ಬೀಡಲವಣ, ಇಂದ್ರಜವಿ ವಸ್ತ್ರಗಳಿತ ಚೂರ್ಣವ ಮಾಡಿ ಒಂದು ಮಡಕಿಯೊಳಗಿಕ್ಕಿ ಆ ಚೂರ್ಣವ ಚತುರ್ಗುಣ ಉದಕ,

ಎಳ್ಳಯಂಣಿ ಹಾಕಿ ಎಳ್ಳಯಂಣಿಯ ನಾಲ್ಕು ಗುಣ ಗೋಮೂತ್ರ ಹಾಕಿ ಮಂದಾಗ್ನಿಯಲ್ಲಿ ಅಟ್ಟು ಪಾಕಾದ ಮೇಲೆ ಇಳುಹಿಕೊಂಡು ಆ ತೈಲವ ಪೂಸಲು ಮಂಡಲತದ್ದು, ಕೋಷ್ಟ, ದುಷ್ಟವ್ರಣ ಈಸು ರೋಗಗಳು ಮಾಣ್ಬು.

ಮಲಮೂತ್ರಾದಿಗಳಿಗೆ, ಇಂಗು, ಬಜಿ, ಅಳಲಿಕಾಯಿ, ಬಾಳಿಯಬೀಜ, ದಾಡಿಂಬರದ ಬೀಜ, ಅಜವಾನ, ಕೊತ್ತುಂಬರಿ, ಕಮಲದ ಗದ್ದಿ, ಬಿಳೀಯ ಅಜ್ಜಿಗಿ (ಎಂದರೆ ಕಾಮಕಸ್ತೂರಿ), ಖಜೋರ, ಬೆಳೆವಂತರ, ಚಿತ್ರಮೂಲ, ದ್ಯಸಕ್ಷಾರ, ತ್ರಿಕಟುಕ, ಸೈಂಧವ, ಸಂವತ್ಸರಲವಣ, ಜೀರಗಿ, ಕಾಡಮೆಣಸು, ಹುಣಶಿಯ ಬೀಜ, ಹೂಲಿ ತೊಪ್ಪಲು ಈಸನ್ನು ಸರಿಯಾಗಿ ಕೊಂಡು ಚೂರ್ಣವ ವಸ್ತ್ರಗಳಿತವ ಮಾಡಿ 4 ಗದ್ಯಾಣವ ಕೊಂಡರೆ ವಾಯುಗುಲ್ಮಗಳು, ಮೂತ್ರನಿಗ್ರಹ, ಮಲನಿಗ್ರಹ, ಕಂಠ ನಿರೋಧ, ಅರುಚಿ, ಬಹುಮೂಲವ್ಯಾಧಿ, ಬಿಕ್ಕು, ಹೊಟ್ಟೆ ಉಬ್ಬೋಣವು, ಶ್ವಾಸ, ಖಾಸ, ಮಂದಾಗ್ನಿ ನಾಶವಾಗಿ ಅಗ್ನಿ ದೀಪನವಾಗಿ, ಪಚನವಾಗುವದು.

ನೆಗಡಿಗೆ : ಕಾಡಮೆಣಸು, ಹೂಲಿಯ ತೊಪ್ಪಲು, ಶುಂಠಿ, ಹಿಪ್ಪಲಿ, ಮೆಣಸು, ಹುಣಸಿಹಣ್ಣು, ಚಾಳೀಸಪತ್ರಿ, ಜೀರಗಿ, ತವಕ್ಷಾರ (ಎಂದರೆ ಬಿದರ ಸುಂಣಾ), ಚಿತ್ರಮೂಲ ಇವೆಲ್ಲವನ್ನು ಸಮಾನಕೊಂಡು ಯಾಲಕ್ಕಿ, ಲವಂಗ, ಪತ್ರಿ ಈ ಮೂರನ್ನು ಕೂಡಿಸಿ ಚೂರ್ಣ ಮಾಡಿ ಅದರ ಮೂರು ಪಾಲು ಬೆಲ್ಲ ಹಾಕಿ ಮೆತ್ತಗೆ ಮಾಡಿ ದಿನಂಪ್ರತಿ ನಾಲ್ಕು ಗದ್ಯಾಣ ಭಕ್ಷಿಸಿದರೆ ವೈಶ್ವರಿಯೆಂಬ ರೋಗ, ನೆಗಡಿ, ಪೀನಶಿ, ಶ್ಲೇಷ್ಮ, ಅರುಚಿ, ಈಸು ರೋಗಗಳು ನಾಶವಾಗುವವು.

ಕರೆಹುಗಳು ಆಗಿ ಹುಚ್ಚು ಹಿಡಿದರೆ : ನಂಜಿನಚಕ್ಕಿ $1\frac{1}{2}$ ಗುಂಜಿ, ಇಸರಿಬೇರು 1 ಮಾಶಿ, ಬಿಳೆಗಣಜಲಿ ಬೇರು 1 ಮಾಶಿ, ಸುಗಂಧಿ ಬೇರು (ಅಂದರೆ ಶೋರಿಮದ್ದು) 1 ಮಾಶಿ, ಕರೆಲಕ್ಕಿ ಬೇರು 1 ಮಾಶಿ, ತುಳಶಿಕಾಷ್ಟ 1 ಮಾಶಿ, ಶುಂಠಿ 1 ಮಾಶಿ, ಮೊಡೀ 1 ಮಾಶಿ, ಹಿಪ್ಪಲಿ 1 ಮಾಶಿ, ಮೆಣಸು 1 ಮಾಶಿ, ಲವಂಗ 4 ಮಾಶಿ, ಬಾಲಹರಡಾ 1 ಮಾಶಿ, ಅಜವಾನ 2 ಮಾಶಿ, ವಿಷ್ಣುಕಾಂತಿ 1 ಮಾಶಿ, ಕಟಕರೋಹಿಣಿ 1 ಮಾಶಿ, ಬ್ರಹ್ಮದಂಡಿ ಬೇರು 1 ಮಾಶಿ, ಈ ಹದಿನಾರು ಜೀನಸು ಕಾಡೆಮಾಡಿ ಕೊಡಬೇಕು. ಪಥ್ಯ— ನವಣಿ ಅನ್ನ, ಹುರಳಿಕಟ್ಟು ; ಲವಣ ವರ್ಜ್ಯ.

ಮತ್ತು ತಲೆಗೆ ಹಾಕುವ ಜೀನಸು : ಬೆಳ್ಳುಳ್ಳಿ, ಅಜವಾನ, ನುಗ್ಗಿ ತೊಪ್ಪಲ, ಈ ಮೂರೂ ಕೂಡಿಶಿ ತುಪ್ಪವ ಹಚ್ಚಿ ಹಂಚಿನ ಮೇಲೆ ಬೇಯಿಸಿ, ಬೆವರ ಪಡೆದ ಮೇಲೆ, ನೆತ್ತಿಗೆ ಹಾಕಿ, ರಾಗಿ ರೊಟ್ಟಿ ಒಂದು ಮಗ್ಗಲ ಬೇಯಿಸಿ, ಅದರ ಮೇಲೆ ಹಾಕಿ ತಲೆಗೆ ಕಟ್ಟುವುದು. ಈ ಪ್ರಕಾರ ಮೂರು ದಿವಸ, ಅಥವಾ ಏಳು ದಿವಸ ಹಾಕಿ ಕಟ್ಟಬೇಕು ; ಸಂನಿಯಿಳಿವದು.

ಮತ್ತು ಉಷ್ಣದಿಂದ ಸಂನಿಯಾದರೆ : ಸದರೀ ಜೀನಸಿನ ಕಾಡೆಮೂಡಿ, ಜಾನ ಅರ್ಧಮಾಶಿ, ತ್ರಿಪರಾಕ ಅರ್ಧಮಾಶಿ ಹಾಕಿ ಸಂಜೇಲಿ, ಮುಂಜಾನೆ ಕೊಡಬೇಕು ; ಉಷ್ಣ ಸಂನಿ ಇಳಿಯುವುದು. ಪಥ್ಯ ನವಣಿ ಅನ್ನ, ಹುಳಿ ಕಟ್ಟು.

ಶಿಟಬ್ಯಾನಿ ಮತ್ತು ಬಿಲ್ಲು ಕುತ್ತಿರೋಗಕ್ಕೆ : ಕತ್ತೆಹಾಲು ಪಾವು, ಮಗ್ಗಿತಪ್ಪಲ ರಸ ನವಟಾಕ, ಗೋರೋಜಿನ 1 ಗುಂಜಿ ತೂಕ, ಕಸ್ತೂರಿ ಅರ್ಧ ಗುಂಜಿ ತೂಕ, ಸದರಿ ರಸದಲ್ಲಿ ತೇದು ಕುಡಿಸಲುಬೇಕು. ಹಾಗೂ ಆಕಳ ಬೆಂಣಿ ಸರ್ವಾಂಗಕ್ಕೆ ಸಂದುಸಂದಿಗೆ ತಿಕ್ಕಬೇಕು ; ಮತ್ತು ತಲೆಗೆ ಹಾಕುವ ಜೀನಸು ನುಗ್ಗಿ ತೊಪ್ಪಲ, ಕರೇಲಕ್ಕಿ ತೊಪ್ಪಲ, ಬೆಳ್ಳುಳ್ಳಿ, ಅಜವಾನ ಒಂದೊಂದು ಹಿಡಿ ಕುಟ್ಟಿ ಸ್ವಲ್ಪ ತುಪ್ಪ ಆ ತುಪ್ಪಲಕ್ಕೆ ಹಚ್ಚಿ ಹಂಚಿನ ಮೇಲೆ ಬೇಯಿಸಿ, ಬೆವರ ಬಂದ ಮೇಲೆ, ತಲೆಗೆ ಹಾಕಿ ಕಟ್ಟಬೇಕು. ಪಥ್ಯ ಸದರಿ ಪ್ರಕಾರ.

ಉಷ್ಣಕ್ಕೆ : ಅರಶಿಣ 1 ಮಾಶಿ, ಸುರವರ ಅಳಲಿಕಾಯಿ 1 ಮಾಶಿ, ಈ ಪ್ರಕಾರ ಎರಡು ಜೀನಸು ಪುಡಿ ಮಾಡಿ ದಿನಂಪ್ರತಿ ಜೇನುತುಪ್ಪದಲ್ಲಿ ಕಲಸಿ ಏಳು ದಿವಸ ಅಥವಾ ಹದಿನಾಲ್ಕು ದಿವಸ ತೆಗದುಕೋಬೇಕು. ಪಥ್ಯ ಹಾಲು ಅನ್ನ.

ಮತ್ತು ಕರೇಗುಗ್ಗಳ ನಿತ್ಯ 1 ಮಾಶಿ, ಪಾವುಶೇರು ನೀರೊಳಗೆ ಹಾಕಿ ಕಷಾಯುವ ಮಾಡಿ, ದುಡ್ಡತೂಕ ತೆಗದುಕೊಳ್ಳಬೇಕು. ಸಪ್ಪನ್ನಹಾಲು ಉಣಿಸಬೇಕು.

ಸರ್ವ ಉಷ್ಣಕ್ಕೆ : ಶುಂಠಿ 3 ಮಾಶಿ, ಕುರಡಿ ಕುಠಾರದ ಮನಿ 1 ತೊಲಿ, ಹಿಪ್ಪಲಿ 3 ಮಾಶಿ, ಅಜವಾನ 1 ಪಾವಶೇರು, ಅರಿಶಿಣ 6 ಮಾಶಿ, ಲವಂಗ 3 ಮಾಶಿ, ಶೇರು 3, ಬಡೆಸೋಪು 1 ತೊಲಿ, ಈ ಪ್ರಕಾರ 10 ಜೀನಸು ಚೂರ್ಣವಮಾಡಿ, 3 ಬೆರಳಿಗೆ ಬಂದಷ್ಟು 7 ದಿವಸ ತೆಗದುಕೊಳ್ಳ

ಬೇಕು ; ಉಷ್ಣನಾಶ. ಪಥ್ಯ ಹಾಲು ಅನ್ನ.

ಮತ್ತು ಉಷ್ಣಕ್ಕೆ : 1 ಹಿಡಿ ಜ್ಯಾಲಿವಳನಾರು, 1 ಹಿಡಿ ಜಾಲಿ ಮುಗಳು, 1 ಹಿಡಿ ಜ್ಯಾಲಿಕಾಯಿ, 1 ಹಿಡಿ ಜ್ಯಾಲಿಅಂಟು, 1 ಹಿಡಿಜ್ಯಾಲಿ ಹೂವು, ಈ ಪ್ರಕಾರ ಐದು ಜೀನಸು ನೆರಳೊಳಗೆ ಒಣಗಿಸಿ, ಕಾಯಿವಳಗಿನ ಬೀಜಾ ತೆಗದು ಚೂರ್ಣವಮಾಡಿ, ಪಾವಶೇರು ಜೀರಗಿ, ಪಾವಶೇರು ಚಿನ್ನಿ ಸಕ್ಕರಿ, ಕೂಡಿಸಿ 7 ದಿವಸ ತೆಗದುಕೊಳ್ಳಬೇಕು. ಸರ್ವಉಷ್ಣ ಹೋದೀತು. ಪಥ್ಯ ಹಾಲು ಅನ್ನ.

ಉಷ್ಣದಿಂದ ಧಾತು ಹೋಗುತ್ತಿದ್ದರೆ : ಜೇನುತುಪ್ಪ 9 ಪೈ ತೂಕ, ಅಡವಿ ಬೆಂಡಿಬೇರಿನ ರಸ 9 ಪೈ ತೂಕ, ಅಲ್ಲದರಸ 9 ಪೈ ತೂಕ, ಮೊಗದುಮಿ ಸಕ್ಕರಿ 9 ಪೈ ತೂಕ, ತುಪ್ಪ ಅಚ್ಛೇರು ಈ ಪ್ರಕಾರ ಐದು ಜೀನಸುಗಳು ಕಲಶಿ 5 ದಿವಸ ತೆಗೆದುಕೊಳ್ಳಬೇಕು. ಪಥ್ಯ ಗೋಧಿ ರೊಟ್ಟಿ ; ತುಪ್ಪ ಸಕ್ಕರಿ ಉಣಬೇಕು. ಧಾತು ಹೋಗುವ ಉಷ್ಣ ಹೋಗುವದು. ಇದು ನಿಶ್ಚಯ ವಾದದ್ದು.

ಗಜಿ ಇಸಬಿಗೆ ಮತ್ತು ಹಾಗೆ ಇಸಬಿಗೆ : ಬಜಿ 1 ತೊಲಿ, ಯಾಲಕ್ಕಿ 1 ತೊಲಿ, ಹಿಪ್ಪಲಿ 1 ತೊಲಿ, ಬಾವಂಜಿಬೀಜ 1 ತೊಲಿ, ಖಜ್ಜೂರ 1 ತೊಲಿ, ಗೌಳ 1 ತೊಲಿ, ಶ್ರೀಗಂಧದಚಕ್ಕಿ 2 ತೊಲಿ, ಕೇರಹರಳ ಮೂರು, ಹವಳ ರಸಗಂಧಕ 3 ತೊಲಿ, ಅರದಾಳ 4 ತೊಲಿ, ಮುಡದಾರಶಿಂಗಿ 1 ಮಾಶಿ, ಇಂಗಳೀಕ 1 ಮಾಶಿ, ತುತ್ಯೆ 1 ಮಾಶಿ, ಚಂದ್ರ 1 ಪಾವಶೇರು, ಅಜವಾನ 2 ತೊಲಿ, ಇವನ್ನೆಲ್ಲಾ ಕುಟ್ಟಿ ವಸ್ತ್ರಗಳಿತ ಮಾಡಿ 3 ಶೇರು ನೀರು, 1 ಪಾವ ಶೇರು ಎಳ್ಳೆಯಂಣಿ ಹಾಕಿ ಕುದಿಸಿ, ನೀರಿನ ಮೇಲೆ ಹೊಯಿದು ಅದು ಮೇಲೆ ಬಂದು ತೆಪ್ಪ ನಿಂತಾಗ ಅದನ್ನು ತೆಗೆದು ಹಚ್ಚುವದು. ಇಸಬು, ಗಜಿ ಇಸಬು ಖಜ್ಜಿ ಸಹಿತ ಹೋಗುವವು.

ಸರ್ವನಂಜಿಗೆ : ಉಷ್ಣದಿಂದ ಸನ್ನಿ ಆದರೆ, ಹಾಗೂ ನಂಜಿನ ಎಲ್ಲಾ ಜ್ವರಕ್ಕೆ, ಬಾಣಂತಿ ನಂಜಿಗೆ, ಇದೇ ಅವುಷದ ಬರುತ್ತದೆ. ಇದಕ್ಕೆ ಜೀನಸು ನಂಜನಚಕ್ಕಿ 3 ಗುಂಜಿ, ಸುಗಂಧಿಬೇಲ (ಅಂದರೆ ತೊರೆಮದ್ದಿನ ಬೇರು) 2 ಮಾಶಿ, ಬಿಳಿಗಣಜಲಿಬೇರು 2 ಮಾಶಿ, ಕರಲಕ್ಕಿಬೇರು 2 ಮಾಶಿ, ಬಾಲ ಹರಡಾ 2 ಮಾಶಿ, ಬ್ರಹ್ಮದಂಡಿಬೇರು 2 ಮಾಶಿ, ಮೋಡಿ 2 ಮಾಶಿ, ಹಿಪ್ಪಲಿ

2 ಮಾಶಿ, ಮೆಣಸು 2 ಮಾಶಿ, ಶುಂಠಿ 2 ಮಾಶಿ, ಅಜವಾನ 4 ಮಾಶಿ, ಲವಂಗ 3 ಗುಂಜಿ, ತುಳಶಿಕಾಷ್ಟ 2 ಮಾಶಿ, ಇಪ್ಪೆಬೇರು 2 ಮಾಶಿ, ಕಟಕ ರೋಹಿಣಿ 2 ಮಾಶಿ, ವಿಷ್ಣುಕಾಂತಿ 2 ಮಾಶಿ, ಈ 17 ಜೀನಸು ಅಬಡಜೆಬಡ ಕುಟ್ಟಿ ಗಡಿಗಿ ವಳಗೆ ಹಾಕಿ ಪಕ್ಕಾ ಶೇರು ನೀರು ಇಟ್ಟು ನವಟಾಕ ಕಷಾಯ ಇಳಿಸಿ ಇದರಂತೆ 3 ದಿವಸ ಅಥವಾ 7 ದಿವಸ ತೆಗೆದುಕೊಂಬುವದು. ನಂಜಿನವರಿಗೆ ಮತ್ತು ಬಾಣಂತಿ ನಂಜಿನವರಿಗೆ 14 ದಿವಸ ಅಥವಾ 12 ದಿವಸ ಕೊಡುವದು. ಸಂನಿ ಆದವರಿಗೆ 7 ದಿವಸ ಕೊಡುವದು. ಸಂನಿ ಆದವರ ತಲಿಗೆ ನುಗ್ಗಿ ತೊಪ್ಪಲ, ಅಜವಾನ, ಬೆಳ್ಳುಳ್ಳಿ, ಹಂಚಿನ ಮೇಲೆ ಬೇಯಿಸಿ ತಲಿಗೆ ಹಾಕಿ ಕಟ್ಟೋದು, ಸಂನಿ ಇಳಿಯೋದು. ಇದು ರೇವಣಸಿದ್ಧೇಶ್ವರರ ವೈದ್ಯ. ಇದಕ್ಕೆ ಪಥ್ಯ ನವಣಿ ಅನ್ನ, ಹುರಳಿಕಟ್ಟು.

ರೇವಣಸಿದ್ಧೇಶ್ವರಯೋಗ : ಕಳ್ಳ ಜ್ವರಕ್ಕೆ, ತ್ರಿದೋಷ ಜ್ವರಕ್ಕೆ, ಕಾಳ ಜೀರಗಿ 2 ಗ, ಚಿರಾಯತ 2 ಗ, ಚುಂಚಲಬೀಜ 2 ಗ, ಕಾಜವಾರದ ಚಕ್ಕೆ 2 ಗ, ಶುಂಠಿ 2 ಗ, ಮೆಣಸು 1 ಗ, ನೆಲಯಿಂಗಳ 1 ಗ, ವಿಷ್ಣುಕಾಂತಿ 2 ಗ, ಬ್ರಹ್ಮದಂಡಿ 2 ಗ, ಕಟಕರೋಹಿಣಿ 2 ಗ, ಕಾಡಕ ವಡಿಕಾಯಿ 2 ಗ, ತುಳಶೀ ಕಾಷ್ಟ 2 ಗ, ಇಸರಿಬೇರು 2 ಗ, ಗಜಗದ ವಳಗಿನ ತಿರಳು 1 ಗ, ಕೋಡ ಮುರನಚಕ್ಕಿ 1 ಗ, ಹಿಪ್ಪಲಿ 1 ಗ, ನೆಲಬೇವು 1 ಗ, ಕಲ್ಲ ಸಬ್ಬಸಗಿ 1 ಗ, ಮೋಡಿ 1 ಗ, ಬಾಲಹರಡಾ $\frac{1}{2}$ ಗ, ತಿಗಡಿ $\frac{1}{2}$ ಗ, ಲವಂಗ $\frac{1}{4}$ ಗ, ಸುಗಂಧಿ ಚೀಲ $\frac{1}{2}$ ಗ, ಈ 23 ಜೀನಸು ಕುಟ್ಟಿ ಎರಡು ಶೇರು ನೀರು ಇಟ್ಟು ನವಟಾಕೆ ಕಾಡೆ, ಇಳಿಶಿ ಕಾಡೆ, ನಿಃಕಾಡೆ ಮೂರು ದಿವಸ ತೆಗೆದುಕೋಬೇಕು. ನಂಜಿನ ಜ್ವರಕ್ಕೆ, ವಿಷಮಜ್ವರಕ್ಕೆ, ಹಳೆಜ್ವರಕ್ಕೆ 7 ದಿವಸ ತೆಗೆದುಕೊಳ್ಳಬೇಕು. ಇದಕ್ಕೆ ಪಥ್ಯ ನವಣಿಅನ್ನ, ಹುರಳಿಕಟ್ಟು, ಉಪ್ಪು ಇಲ್ಲದ್ದು.

ಹುಲಿಯು ಕಚ್ಚಿದರೆ, ಸರ್ಪ ಕಚ್ಚಿದರೆ, ಮಾರ್ಜಾಲ ಕಚ್ಚಿದರೆ : ಲವಣ ರಸದಮೂಲ ವ ಚಿತ್ರಮೂಲದ ಬೇರು ಇವನ್ನು ಅರೆದು ಕುಡಿಯೆ, ಸರ್ಪವಿಷ ಮಾಣ್ಗು.

ಸರ್ಪ ಹಳೆಜ್ವರಕ್ಕೆ, ಮಲ್ಲಾಡದ ನೀರು ಹತ್ತಿದ ಜ್ವರಕ್ಕೆ, ರೇವಣ ಸಿದ್ಧೇಶ್ವರರ ವನೌಷಧಿ ಯೋಗ : ಕಾಳಜೀರಗಿ 3 ಪೈ ತೂಕ, ಕಟಕರೋಹಿಣಿ 3 ಪೈ ತೂಕ, ಚಿರಾಯಿತ 3 ಪೈ ತೂಕ, ಇಸರಿಬೇರು 3 ಪೈ ತೂಕ, ಚುಂಚಲ

ಬೀಜ 3 ಪೈ ತೂಕ, ಕಾಡಕವಡಿಕಾಯಿ 3 ಪೈ ತೂಕ, ಬ್ರಹ್ಮದಂಡಿಬೇರು 3 ಪೈ ತೂಕ, ತುಳಶಿಕಾಷ್ಟ 3 ಪೈ ತೂಕ, ವಿಷ್ಣುಕಾಂತಿ 3 ಪೈ ತೂಕ, ಶುಂಠಿ 3 ಪೈ ತೂಕ, ನೆಲಬೇವು 2 ಪೈ ತೂಕ, ನೆಲಯಿಂಗಳ 2 ಪೈ ತೂಕ, ಕಲ್ಲ ಸಬ್ಬಸಗಿ 2 ಪೈ ತೂಕ, ಗಜಗದವಳಗಿನ ತಿರಳು 2 ಪೈ ತೂಕ, ಸೋಡಿ 2 ಪೈ ತೂಕ, ಹಿಪ್ಪಲಿ $1\frac{1}{2}$ ಪೈ ತೂಕ, ಮೆಣಸು $1\frac{1}{2}$ ಪೈ ತೂಕ, ಲವಂಗ $\frac{1}{2}$ ಪೈ ತೂಕ, ಕೋಡಮುರಕೆನಚಕ್ಕಿ $1\frac{1}{4}$ ಪೈ ತೂಕ, ಕಾಜನಾರದಚಕ್ಕಿ 1 ಪೈ ತೂಕ, ಬಿಳಿಗಣಜಲಿಬೇರು $\frac{1}{2}$ ಪೈ ತೂಕ, ಇಷ್ಟನ್ನು ಪಕ್ಕಾಶೇರು ನೀರು ಇಟ್ಟು ನವಟಾಕಕಾಡೆ ಇಳಿಶಿ ಇದರಂತೆ 3 ದಿವಸ ಅಥವಾ 7 ದಿವಸ ತಕ್ಕೊಂಡರೆ ಮೇಲೆ ಹೇಳಿದ ರೋಗಗಳು ಮಾಣ್ಬುವು. ಪಥ್ಯ ಸಪ್ಪಗಿನ ನವಣೆಅನ್ನ, ಹುರಳಿಕಟ್ಟು ತಕ್ಕೋಬೇಕು.

ಪಿನಶಿಗೆ, ಬಂಗಾಲಿಕಾಯನ್ನು ನಿಂಬಿಹಣ್ಣಿನ ರಸದಲ್ಲಿ ತೇದು ಗಂಧವ ಮಾಡಿ ಖಾಸಿಕಾಗದಕ್ಕೆ ಎರಡು ಮಗ್ಗಲಿಗೆ ಲೇಪಿಸಿ ನೆರಳಲ್ಲಿ ಒಣಗಿಸಿ ಆಮೇಲೆ ಆ ಕಾಗದವನ್ನು ಹದಿನಾಲ್ಕು ಪಾಲು ಮಾಡಿ ಹದಿನಾಲ್ಕು ಒಂದೊಂದು ನಿತ್ಯ ಸುರಳಿ ಸುತ್ತಿ ತುದಿಗೆ ಬೆಂಕಿ ಹಚ್ಚಿದರೆ ಒಂದೇ ಕಾಗದ ಸುರಳಿ ಪ್ರಾತಃಕಾಲಕ್ಕೆ ಸಾಯಂಕಾಲಕ್ಕೆ 1 ಶೇದಬೇಕು, ಮೂಗಿನಲ್ಲೆ ಹೊಗೆ ಬಿಡಬೇಕು. ಪಥ್ಯ ನಂಜಿನ ಪದಾರ್ಥ ಬಿಡಬೇಕು.

ದನಗಳು ಗೊಡ್ಡು ಬಿದ್ದರೆ : ಆದಿತ್ಯವಾರ ಉದಯಕ್ಕೆ ತುಳಸಿಬೇರು ತಂದು ತನ್ನ ಮೂತ್ರದಲ್ಲಿ ಮರ್ದಿಸಿ ಮೂತ್ರದಿಂದ ಕಲಶಿ ಯೋನಿಗೆ ಪೂಸಲು ದನಗಳು ಗಬ್ಬನಿಲ್ಲುವವು.

ದನಗಳಿಗೆ ಹಿರೆರೋಗ ಬಂದು ಮಬ್ಬು ಬಂದರೆ : ಕರಿ ಹೂಲಿಯ ಸೊಪ್ಪು, ಹೀಲದಸೊಪ್ಪು, ಮುಳಸದಸೊಪ್ಪು, ಬಾನವರಿಯಸೊಪ್ಪು, ಗಜಿಗಿನತೋಟಿ ಈಸನ್ನು ಅಂಬಿಲದಲ್ಲಿ ಅರದು ಕುಡಿಸಲು, ಹಿರೆ ರೋಗ, ಉಚ್ಚಿ ಕೊಳ್ಳುವುದು ಬಂದ್ ಆಗುವದು. ಅಥವಾ ತುಪ್ಪೀರಿ ಯಲಿ ರಸ, ಎಂಣಿ ಮೂರುಗೊಟ್ಟು, ಗೋಮೂತ್ರ 1 ಪಾವಶೇರು ಹಾಕಲು ರೋಗ ಮಾಣ್ಬುವು. ಇದರಂತೆ 3 ದಿವಸ ಮಾಡಬೇಕು.

ದನದ ಕಾಲಬೇನೆಗೆ : ಹಿರೇಮದ್ದಿನ ಕೊನರು, ಸಾಸವಿ, ಮೆಣಸು 7, ಬೆಳ್ಳುಳ್ಳಿ 7, ಮೂರನ್ನು ನೀರಲ್ಲಿ ಮರ್ದಿಸಿ ಎಡಕ್ಕೆ ಬಂದರೆ ಬಲದ ಕಿವಿ

ಯಲ್ಲಿ, ಬಲಕ್ಕೆ ಬಂದರೆ ಎಡದ ಕಿವಿಯಲ್ಲಿ ಹಿಂಡಲು ಕಾಲಬ್ಯಾನಿ ಮಾಣ್ಬ್ಗ.

ದನಗಳಿಗೆ ಚಕ್ರರೋಗಬಂದರೆ : ಮಾವಿನ ಯಲಿ, ಮಾವಿನ ಬೇರು ಅಂಬಿಲದಲ್ಲಿ ಅರೆದು ಮೂರು ಗೊಟ್ಟವನ್ನು ಮೂರು ದಿವಸ ಎತ್ತಲು ರೋಗ ಮಾಣ್ಬ್ಗ.

ಗೊಡ್ಡು ದನಗಳು ಕಟ್ಟುವದಕ್ಕೆ : ಸಮುದ್ರಪಾಳವ ಬಜಿ ಅತ್ತಿ ಎಲಿಯು ಮೇಲಿನ ಪ್ಯೈಲೆಗಳು, ಬೇವು, ಹಿಪ್ಪಲಿ, ಬಿದರ ಸುಂಣ ಈ ಆರನ್ನು ತುಪ್ಪದಲ್ಲಿ ಅರೆದು ಯೋನಿಗೆ ಪೂಸಲು, ಹೊಟ್ಟವಳಗೆ ಕೊಡಲು ಕಟ್ಟುವವು.

ಪ್ರಮೆಯಾದ ಕಲ್ಲುಬಡಿಯೋದಕ್ಕೆ : ತ್ರಿಫಲಾ, ದೇವದ್ವಾರ, ಎರಡು ಅರಶಿಣ, ಹಾವಮುಕ್ಕಿಕಾಯಿ, ಬೆಲವಂತರ ಬೇರು, ವಜ್ರಮುಷ್ಟಿ ಇವಂ 2 ಗದ್ಯಾಣದಂತೆ ಸಮನಾಗಿ ಹಾಕಿ ಕಷಾಯವ ಮಾಡಿಕೊಂಬುವದು. ಎಲ್ಲಾ ಪ್ರಮೆ ಮಾಣ್ಬ್ಗ.

ಉಷ್ಣಕ್ಕೆ : ಹೊಸಬಾವಿಯೊಳಗೆ ತಂಪುಯಿದ್ದ ಹೊಲದೊಳಗಿನ ಹೊಸ ಹುತ್ತದ ಮಂಣು ತಂದು ನೀರ ಹೊಯಿದು ಬಾನಿಯಲ್ಲಿ ಇರಿಸಿ ಬೆಳಿಗ್ಗೆ ಆ ತಿಳಿ ನೀರು ಬಸಕೊಂಡು ಒಂದು ಶೇರು ನೀರೊಳಗೆ ಜೀರಗಿ ಸಕ್ಕರಿ ಹಾಕಿ 3 ದಿವಸ ಕೊಡಲು ತಂಪು ಆಗುವದು. ಇದು ರಾಜರಿಗಾದರು ಯೋಗ್ಯ.

ಪ್ರಮೆಕಲ್ಲಿಗೆ : ಯಾಲಕ್ಕಿ, ಕರ್ಪೂರ, ಶಿಲಾಜಿತು, ಹಿಟ್ಟಲಕ್ಕಿ, ಅಂದ ರವಿ, ಭುತಿಗಿಡದಬೇರು, ಕಕ್ಕೆಕಾಯಿ ತಿರಳು, ಆಲದ ಬೀಜ, ಬನ್ನಿಕಾಯಿ ತಿರಳು, ಹಿಪ್ಪಲಿ, ಇವಂ ಚೂರ್ಣ ಮಾಡಿ ಸಕ್ಕರಿ ಜೇನುತುಪ್ಪದಿಂದ ಕೊಂಬು ವದು. ಸಮಸ್ತ ಪ್ರಮೆ ಮಾಣ್ಬ್ಗ.

ಪ್ರಮೆಯಿಂದ ಕಲ್ಲು ಆಗಿದ್ದರೆ ಕರಗುವದಕ್ಕೆ : ಕಾಮಕಸ್ತೂರಿ ಬೀಜ ತಂದು ಅಟ್ಟು ನೀರು ಬಸಕೊಂಡು ಅದರಲ್ಲಿ ಜೀರಗಿ, ಸಕ್ಕರಿ ಹಾಕಿಕೊಳ್ಳಲು ಪ್ರಮೆಯಿಂದಾದ ಕಲ್ಲು ಒಡದು ನವಣಿ ನುಚ್ಚಿನಂತೆ ಬೀಳುವವು. ಇದರಂತೆ 21 ದಿವಸ ತಕ್ಕೊಂಬುವದು. ಪಥ್ಯ ಮಧುರ ಆಹಾರ.

ಮತ್ತು, ಮುತ್ತಕದ ಬೇರು (ಅಂದರೆ ಮುತ್ತಲದಬೇರು) ಚೂರ್ಣವಂ ಮಾಡಿ ತುಪ್ಪದವಳಗೆ 3 ದಿವಸ ಕೊಂಬುವದು. ಪ್ರಮೆಯಿಂದಾದ ಕಲ್ಲು ಮಾಣ್ಬ್ಗ.

ಪ್ರಮೆಯಿಂದಾದ ಕಲ್ಲು ವಡಯುವದಕ್ಕೆ : ಹಿಪ್ಪಲಿ, ನಷ್ಟಮಧುಕ, ಪಾಷಾಣಭೇದಿ (ಅಂದರೆ ಕಲ್ಲುಗರಗು), ರೇಣಕಿ (ಅಂದರೆ ಕಾಮಕಸ್ತೂರಿ ಬೀಜ), ನೆಗ್ಗಲು, ಅಡಸರ, ಔಡಲಬೇರು ಈಸನ್ನು ಸಮನಾಗಿ ಕೊಂಡು ಕಷಾಯ ಮಾಡಿ ಅಷ್ಟಮಾಂಶ ಉಳಿಸಿ ಅದರಲ್ಲಿ ಕರ್ಪೂರಶಿಲಾಧಾತು, ಮುಳ್ಳ ಸಂಪತಿಯ ಬೀಜ 2 ಗ, ಸಕ್ಕರಿ ಇವನ್ನು ಪ್ರತಿಪಾಕ ಇಕ್ಕಿ ದಿನಕಷಾಯದಲ್ಲಿ ತಕ್ಕೊಂಬುವದು, ಪ್ರಮೆಯಿಂದಾದ ಕಲ್ಲು ವಡದು ಮೂತ್ರದ್ವಾರದಿಂದ ಉಪ್ಪಿನಂತೆ ಬೀಳುವದು. ಮೂತ್ರನಿಗ್ರಹವಾದಾಗ್ಯೂ ಗುಣವಾಗುವದು.

ಮತ್ತು, ಜೀರಗಿ 2 ಗ, ಸಕ್ಕರಿ 2 ಗ, ಗೋರೋಜನ 2 ಗ, ಆಕಳ ಹಾಲು 1 ಶೇರು, ಈ ನಾಲ್ಕೂನು ದಿನಂಪ್ರತಿ ಪಾವು ಶೇರಿನಷ್ಟು ತಕ್ಕೊಂಬುವದು. ಪ್ರಮೆಯಿಂದಾದ ಕಲ್ಲು ನುಚ್ಚನುಚ್ಚಾಗಿ ಬೀಳುವದು. ಪಥ್ಯ ಅಕ್ಕಿ ಬೋನ ತಕ್ಕೊಳ್ಳುವದು.

ಮತ್ತು, ಅವರೀಕಟ್ಟು 1 ಶೇರು, ಬಸಳೆಸೊಪ್ಪಿನ ರಸ 1 ಶೇರು, ಅವರಿ ಕಾಳಷ್ಟು ಹೊಸ ಸುಂಣ, ತುಪ್ಪ 1 ಶೇರು, ಈ ನಾಲ್ಕು ಕುಡಿಯಲು ರೋಗ ಪರಿಹಾರ. 3 ದಿವಸ ತಕ್ಕೊಂಬುವದು. ಪಥ್ಯ ಅಕ್ಕೀಗಂಜಿ ತುಪ್ಪ ತಕ್ಕೊಂಬುವದು.

ಹುಡುಗರಿಗೆ ಆಸನದಿಂದ ರಕ್ತ ಬೀಳುತ್ತಿದ್ದರೆ : ಹುಲಗಿಲ ಕೊನರು 1 ಹಿಡಿ ಕುಟ್ಟಿ ಬಿಳೀ ಆಕಳ ಹಾಲಲ್ಲಿ ಹಾಕಿ ಆಮುಸರ ತಕ್ಕೊಳ್ಳಲು ರಕ್ತ ಮಾಣ್ಗು.

ಪ್ರಮೆಯಿಂದಾದ ಕಲ್ಲು ಬೀಳೋದಕ್ಕೆ : ಬಿಳೀ ಗಣಜಲಿ ಬೇರು, ನೆಗ್ಗಿಲ ಬೇರು, ಉತ್ರಾಣಿಬೇರು, ಕಿರಿನೆಲ್ಲಿಬೇರು, ಹೊನ್ನವರಿ ಅಂಟು, ಬೆಳ್ಳಡಕಿಲ ಬೇರು (ಅಂದರೆ ಬಿಳೀಗಣಜಲಿಬೇರು) ಈ ಆರು ಸಮವಾಗಿ ಚೂರ್ಣವ ಮಾಡಿ ಆಕಳ ಹಾಲಲ್ಲಿ ಕೊಡಲು ಪ್ರಮೆಯಿಂದಾದ ಕಲ್ಲುಬೀಳುವದು.

ಮತ್ತು ಹೆಸರುಕಟ್ಟು, ಬೆಂಣೆ, ಹುರಳಿಕಟ್ಟು ಇವುಗಳಲ್ಲಿ ಬಿಳಿಗಾರವ ಹಾಕಿಕೊಳ್ಳಲು ಕಲ್ಲು ಬೀಳುವದು.

ಪ್ರಮೆಯಿಂದಾದ ಕಲ್ಲು ಕರಗುವದಕ್ಕೆ : ವಿಭೂತಿ ಗಿಡದ ರಸ, ಸೈಂಧವ ಲವಣ, ಸಮುದ್ರನೊರಿ, ಕಲ್ಲುನಾರು, ಜೀರಗಿ, ಸಕ್ಕರಿ ಈ ಆರನ್ನು ಅಕ್ಕಿ

ಕಚ್ಚಿನಲ್ಲಿ 21 ದಿನ ಕೊಡಲು ಕಲ್ಲು ವಡದು ಬೀಳುವದು. ಪ್ರಮಾಣಿಸಿ ನೋಡಿದ್ದು.

ಮತ್ತು, ಬಾಳಿಹಂಣು ಮೂರು ಭಾಗ ಮಾಡಿ, ಬಿಳಿಗಾರ ಛಲೋದು ಕಡ್ಡಿ ಕಾಳಷ್ಟು 1 ಭಾಗದಲ್ಲಿ ಇಟ್ಟು ನುಂಗಬೇಕು. ಈ ಪ್ರಕಾರ ಮೂರು ದಿವಸ ತಕ್ಕೊಂಡರೆ ಶಿಲುಮೂತ್ರ, ಇಂದ್ರಿಘಟ್ಟಿ ಆದದ್ದು ಕಲ್ಲು ಕರಗುವದು.

ಮತ್ತು ನೆಲ್ಲಿಬೇರು, ಇಂದ್ರಜಿವಿ ಅಂದರೆ ಕೋಡಮುರಕನ ಬೀಜವ ಚೂರ್ಣವಮಾಡಿ, ಜೇನುತುಪ್ಪ ಸಕ್ಕರಿ ಕೂಡಿಸಿ 3 ದಿವಸ ತಕ್ಕೊಳ್ಳಲು ಬಹುಮೂತ್ರ; ಕೃಛ್ರ, ಪ್ರಮೇಕಲ್ಲು ಕರುಗುವವು.

ಬಹುಮೂತ್ರಕ್ಕೆ : ಅತ್ತಿಯಕಾಯಿ, ಅಂಬಿಲದಲ್ಲಿ ಅರೆದು ಕೊಡಲು ಬಹುಮೂತ್ರ ನಿಲ್ಲುವದು.

ಸನ್ನಿಗೆ, ಬಿಲ್ಲುಕುತ್ತಿಗೆ : ಮೈಲತುತ್ತೆ 1 ಗ, ಜಾಬಾಳ 1 ಗ, ವತ್ಸನಾಭಿ 1 ಗ, ಮಕ್ಷಿಕ (ಅಂದರೆ ನೊಣ) $1\frac{1}{4}$ ಗ, ಮೆಣಸು 1 ಗ, ಬಿಳಿಗಾರ $1\frac{1}{4}$ ಗ, ಈ 6 ಜೀನಸುಗಳ ಚೂರ್ಣಮಾಡಿ ಎಕ್ಕಿಹಾಲಲ್ಲಿ ಚೆನ್ನಾಗಿ ಮರ್ದಿಸಿ ಶೀನ ಕರಡಿಗೆಯಲ್ಲಿ ಇಟ್ಟು ಸನ್ನ ಹಿಡಿದು ಬಾಯಿ ತೆಗಿಯದೆ ಇದ್ದರೆ ನೆತ್ತಿಯ ಮೇಲೆ ರಕ್ತವ ತೆಗಿದು ಗುಂಜಿತೂಕ ಔಷಧ ನಿಂಬೀ ಹುಳಿಯಲ್ಲಿ ನೆತ್ತಿಗೆ ಹಾಕಲು ಸನ್ನಿಪಾತಕ ಉನ್ಮಾದದ ಮೋಸ, ಬಿಲ್ಲುಕುತ್ತ, ಕಿವುಡ ಬಿದ್ದವರಿಗೆ ಈ ಪ್ರಕಾರ ಮಾಡಲು ಗುಣವಾಗುವದು.

ಕಿವಿಯಲ್ಲಿ ತೊನಶಿ ಹೋಗಿದ್ದರೆ : ಇಂಗಳದಕುಡಿ ನೀರಲ್ಲಿ ಅರೆದು ವಸ್ತ್ರಗಳಿತ ಮಾಡಿ ಗಾಣದ ಯಂಣಿ ಸವಟಿನೊಳಗೆ ಇರಸಿ ಬೆಚ್ಚಗೆ ಮಾಡಿ ಕಿವಿಯೊಳಗೆ ಇರಿಸಲು ತೊನಸಿ ಮಾಣ್ಬು.

ಲೂತಿಹುಂಣಿಗೆ : ಹಾವಮೆಕ್ಕಿಬೇರು, ಕಣಗಳ ಬೇರು, ಮದಣಿಗುಕಿ ಬೇರು, ಕತ್ತಿಗಿರಿಬಿನಬೇರು, ಕಳ್ಳಿಯಬೇರು, ಕುರಟಿಗನಬೇರು, ನೆಲಬೇವು, ಮಂಗರೊಳ್ಳಿ, ಸಂಕಜೀರಿಗಿ, ಅಣಲಿಕಾಯಿ, ಬಜಿ, ಶುಂಠಿ, ಮಹಾಲಿಂಗನ ಸೊಪ್ಪು, ಸಬ್ಬಸಗಿ, ಮಂಡಲಕೊಂಬಿನ ಅರಶಿಣ, ಕಾಜವಾಲವಣ, ಕಲ್ಲುಪ್ಪು, ಸೈಂಧವಲವಣ, ಗಂಧ ಪೀಡಿವುಪ್ಪು, ಕಟ್ಟುಪ್ಪು, ಇವು 20 ಸಮಾನಗೊಂಡು ಚೂರ್ಣವ ಮಾಡಿ ಎಂಣಿಯಲ್ಲಿ ಅಟ್ಟು ಪೂಸಲು ಲೂತಿ ಹುಂಣು, ಬಾವು, ಬಗದಾಳ ಮಾಣ್ಬು.

ಹೊಲಿಕುಟ್ಟಿಗೆ ಅಂದರೆ ಸ್ತ್ರೀಯರಿಗೆ ರಕ್ತಪ್ರವಾಹಕ್ಕೆ : ಹಳಿಕೊಬ್ರಿ, ಬ್ರಹ್ಮದಂಡಿಬೇರು, ಈ ಎರಡನ್ನು ಸೂತಕ ಆದ ಮೂರು ದಿವಸ ಕೊಡಲು ಹೊಲಿಕುಟ್ಟಿ ಮಾಣ್ಬ್ಗ.

ಬಟ್ಟಿಗೆ : ಮಾಬಳಿ ಅಂದರೆ ನಾಬಳ್ಳಿ ಎಲಿ ಬೇರುಸಹಿತ ತಂದು ಕುಟ್ಟಿ ವಸ್ತ್ರಗಳಿತ ಮಾಡಿ ರಸ ಪಾವ ಶೇರು, ಹಾಲು, ತುಪ್ಪ, ಬೆಳ್ಳುಳ್ಳಿ 7, ಮೆಣಸು 7 ಹಾಕಿ 3 ದಿನ ಕೊಳ್ಳಲು ಬಟ್ಟಿ ಮಾಣ್ಬ್ಗ. ಪಥ್ಯ ಸಪ್ಪನ್ನ ಅನ್ನ ಉಂಬುವದು.

ತೊಟ್ಟಿಲಬೇರು ನಿಂಬೆಹುಳಿಯಲ್ಲಿ ತೇದು ಲಿಂಬಿಕಾಯಿ ಪ್ರಮಾಣ ಉದಯದೊಳು ಸೇವಿಸಲು 9 ದಿವಸಕ್ಕೆ ಎಂಥಾ ಬಟ್ಟಿ ಆದಾಗ್ಯೂ ಮಾಣ್ಬ್ಗ. ಪಥ್ಯ ಸಪ್ಪನ್ನ ಅನ್ನ ಊಟ ಮಾಡುವದು. ಸೋಮನಾಥ ಇಂಗು ಅವರೆ ಕಾಳಷ್ಟು ಅಂಬಿಲದಲ್ಲಿ ಕೊಳ್ಳಲು ಬಟ್ಟಿ ಮಾಣ್ಬ್ಗ. ಪಥ್ಯ ಗೋಧಿರೊಟ್ಟಿ ಉಂಬುವದು. ಮತ್ತು ಕರೆ ಹೂಲಿಯ ಸೊಪ್ಪಿನರಸ ಪಾವು, 7 ಬೆಳ್ಳುಳ್ಳಿ, 7 ಮೆಣಸು, 3 ಗದ್ಯಾಣ ಬೆಲ್ಲವ ಕೂಡಿಸಿ ಅರೆದು ನಿಂಬಿಕಾಯಿ ಅಷ್ಟು 3 ದಿವಸ ತಕ್ಕೊಂಬುವದು. ಪಥ್ಯ ಅಕ್ಕಿಬೋನತುಪ್ಪ ಉಂಬುವದು, ಬಟ್ಟಿ ಮಾಣ್ಬ್ಗ, ಮತ್ತು ಬಟ್ಟಿಗೆ ಕುಟ್ಟಿಗೆ ದೊಡ್ಡ ಹಿಡಿತಲ್ಲಿ ಕೂಗನ ಸೊಪ್ಪು ತಂದು ಬಿಳೀ ಜೋಳವ ಹಾಕಿ ಕೂಡಿ ಹಣಿದು ಸಂಗಟಿಯ ಮಾಡಿ, ಅದರೊಳಗೆ ತುಪ್ಪವ ಹಾಕಿ ಉಂಬುವದು. ಮೂರು ದಿವಸಕ್ಕೆ ಬಟ್ಟಿಗಂಟು ಮಾಣ್ಬ್ಗ.

ಹೊಡೆದ ಪೆಟ್ಟಿನಿಂದ ರಕ್ತ ಘಟ್ಟಿ ಆಗಿದ್ದರೆ : ಚಿತ್ರಮೂಲದ ಬೇರಿನ ತಿಗಡು, ಸುಗ್ಗಿಬೇರು, ಹಿರೆಮದ್ದಿನ ಬೇರು, ಬಜಿ, ಶುಂಠಿ, ಬಾಣಂತಿಬೋಳ, ನವಸಾಗರ, ಕರೆಬಾಳ, ಈ ಎಂಟನ್ನೂ ಸಮನಾಗಿ ಗೋಮೂತ್ರದಲ್ಲಿ ಅರೆದು, ಪೂಸಲು ರಕ್ತ ಘಟ್ಟಿಯಾದದ್ದು ಕರಗುವದು.

ಗಜಕರ್ಣಕ್ಕೆ : ಹವಳದರಸ, ಗಂಧಕ, ಕಾಲಪಿ, ಕಲ್ಲಸಕ್ಕರಿ, ಹಳಕ ಬಳಿಗಾರ, ತರೇದೆ ತೋಟಿರಸ ಈ ಆರು ಜೀನಸು ಸಮನಾಗಿ ತಂಗಳ ನೀರ ವಳಗೆ 1 ಜಾವ ಮರ್ದಿಸಿ ಅದು ವಣಗದಂತೆ ಕಾಜೀನ ತುಪ್ಪೆಯಲ್ಲಿ ಇಡಬೇಕು. ನಿತ್ಯದಲ್ಲಿ ಹಚ್ಚಿಕೊಳ್ಳಬೇಕು, ಗಜಕರ್ಣ ಮಾಣ್ಬ್ಗ.

ಹುಗುಳಾಗಿ ಕೈಕಾಲು ಹರದರೆ : ಹುಚ್ಚುಶೀಗಿ ಬೀಜ ತೋಟಿ ತೆಗಿದು ಮೂರು ಬೀಜ ದೊಡ್ಡವರಿಗೆ, ಸಂಣವರಿಗೆ ಒಂದು ಬೀಜ, ಕೊಡುವ ಕ್ರಮ.

ಉತ್ತ್ರೊತ್ತಿ ದೊಡ್ಡದು ತಂದು ಬೀಜ ತಗೆದು ಶೀಗಿ ಬೀಜದ ಸಮಾನ ಬಡ ಸೋಪು ಹಾಕಿ ಚೂರ್ಣ ಮಾಡಿ ಉತ್ತ್ರೊತ್ತಿವಳಗೆ ತುಂಬಿ ಪುಟಪಾಕ ಮಾಡಿ 3 ದಿವಸ ಕೊಡಬೇಕು. ಹುಗುನು ಮಾಣ್ಣ್ಗ. ಕೈಕಾಲು ಹರಿಯುವದು ನಾಶನವಹುದು.

ಬಾಣಂತಿ ರೋಗಕ್ಕೆ : ಅತ್ತಿತೋಟಿ 2 ದುಡ್ಡತೂಕ, ಕಿರಿನೆಲ್ಲಿ ಗಿಡವಳ ಹಿಡಿ ತಂದು ಕುಟ್ಟಿ ಆಕಳ ಹಾಲಿನಲ್ಲಿ ಕೂಡಿಸಿ ವಸ್ತ್ರಗಳತವ ಮಾಡಿ ಕುಡೀ ಬೇಕು. ಇದರಂತೆ 7 ದಿವಸ ತಕ್ಕೊಽಬೇಕು. ಪಥ್ಯ ಆಕಳ ಹಾಲು ಅನ್ನ ಉಣಬೇಕು. ನೀರು ಕುಡಿಯಬಾರದು, ಉಪ್ಪು ಖಾರ ಯಾವತ್ತು ಬಿಡ ಬೇಕು, ಅಂದರೆ ಬಾಣಂತಿ ನಂಜಿನಜ್ವರ ವಾತ ಹೋಗುವದು.

ಬಹುಮೂತ್ರ ಪರಮರೋಗಕ್ಕೆ : ಸಂಣನೆಗ್ಗಿಲ ಪಾವ ಶೇರು, ನುಗ್ಗಿ ಅಗ್ಗಿ ಅಂಟು ಪಾವ ಶೇರು, ಖಸಖಸಿ ಪಾವ ಶೇರು, ಸಾಲಾಮಿಸ್ರಿ ಪಾವ ಶೇರು, ಮುನಿಕಲ್ಲ ಪಾವ ಶೇರು, ಜವಾರಿರತ್ನ ಪುರುಷ ಅಚ್ಛೇರು, ಬೇದಾಣಿ, ಪಾವ ಶೇರು, ನಸಗುನ್ನಿ ಬೀಜ ಪಾವ ಶೇರು, ಜಾಲಿ ಅಂಟು ನವ ಟಾಕ, ಬೆಳವಲ ಅಂಟು ನವ ಟಾಕ, ಕೊಂಗಾಯಿಬೀಜ (ಅಂದರೆ ಹೊನ್ನಾವರಿಬೀಜ) 4 ಪೈ ತೂಕ, ಬೀಜಬಂದ ನವ ಟಾಕ, ತಾಲಮುಖಾನ ಪಾವ ಶೇರು, ಶುಂಠಿ ನವ ಟಾಕ, ಮೆಣಸು 6 ಪೈ ತೂಕ, ಹಿಪ್ಪಲಿ 6 ಪೈ ತೂಕ, ಲವಂಗ 4 ಪೈ ತೂಕ, ಯಾಲಕ್ಕಿ 1 ತೊಲಿ, ನೀರನೆಗ್ಗಿ ಪಾವ ಶೇರು, ಆನಿನೆಗ್ಗಲ 3 ಪೈ ತೂಕ, ರುಮಾವಸ್ತಕಿ $4\frac{1}{2}$ ಪೈ ತೂಕ, ಸಾಲಾಮಿಶ್ರಿ 1 ಪೈ ತೂಕ, ಸಫೇದಮಿಶ್ರಿ 1 ಪೈ ತೂಕ, ಜಾಜಿಕಾಯಿ 3 ದುಡ್ಡತೂಕ, ಪತ್ರಿ 3 ದುಡ್ಡತೂಕ, ಬಾದಾಮಿ ಪೈ ತೂಕ, ಚಿನ್ನಿಸಕ್ಕರಿ ಥಡೆ ಅಂದರೆ $12\frac{1}{2}$ ಶೇರು, ಈ ಪ್ರಕಾರ ಜೀನಸು ಚೂರ್ಣವ ಮಾಡಿ ಸಕ್ಕರಿ ಪಾಕಿನಲ್ಲೆ ಹಾಕಿ ಹದವರಿತು ಇಳಿಸಿ ಜಾಜಿಕಾಯಿ, ಪತ್ರಿ, ಲವಂಗ, ಯಾಲಕ್ಕಿ ಹಾಕಬೇಕು. ತಿರಿವಿ ವಡಿ ಮಾಡಿ ಇಟ್ಟು, ಮೊದಲು ಜೇನುತುಪ್ಪ ನೆಲವರಿ ದುಡ್ಡತೂಕ ತಕ್ಕೊಂಡು ಮೂರು ದಿವಸ ಜುಲಾಬಿನ ಔಷಧ ತಕ್ಕೊಂಡು ನಿಂತ ಮೇಲೆ ಸದರೀ ಪಾಕ ನಿತ್ಯದಲ್ಲಿ ಆಕಳ ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ ಹುಳಿ ವಗೈರೆ, ನಂಜಿನ ಪದಾರ್ಥ ಬಿಡಬೇಕು. ಇದರಂತೆ 11 ದಿವಸ ಅಥವಾ 14 ದಿವಸ ತಕ್ಕೊಽ ಬೇಕು.

ಶ್ವಾಸಖಾಸಕ್ಕೆ ಮೇಲುಶ್ವಾಸಕ್ಕೆ : $\frac{1}{2}$ ಗುಂಜಿ ಕಸ್ತೂರಿ ತಂದು ನಾಲ್ಕು ಭಾಗ ಮಾಡಿ, ಎರಡು ಗುಂಜಿ ಗೋರೋಜನ ನಾಲ್ಕು ಭಾಗ ಮಾಡಿ, ನವ ಟಾಕ ಅಲ್ಲದ ರಸ ತಿಳಿಯಿಟ್ಟು, ಸುಂಣ ತೆಗೆದು ಅದರೊಳಗೆ ಕಸ್ತೂರಿ ಗೋರೋಜನ ಒಂದೊಂದು ಭಾಗ ಅದರಲ್ಲಿ ತೇದು ಬೆಚ್ಚಗೆ ಮಾಡಿ ಪ್ರಾತಃ ಕಾಲಕ್ಕೆ ಮತ್ತು ರಾತ್ರಿ ಊಟ ಮಾಡಿ ಮಲಗೋ ಕಾಲಕ್ಕೆ ಕೊಡಬೇಕು. ಈ ಪ್ರಕಾರ ಮೂರು ದಿವಸ ಅಥವಾ ಏಳು ದಿವಸ ಕೊಡಬೇಕು. ಸರ್ವ ಶ್ವಾಸಖಾಸ ಮಾಣ್ಬುಗ. ಪಥ್ಯ ಸಪ್ಪನ್ನ, ನವಣಿ ಅನ್ನ, ಹುರಳಿಕಟ್ಟು, ಬೆಳ್ಳುಳ್ಳಿ, ಕೊಡಬೇಕು ; ಸಂಣ ಹುಡುಗರಿಗೆ ಇದನ್ನ ಕೊಡುವದು.

ಪಿನಸಿಗೆ : ಆಲದ ಹಾಲು ಯಂಣಿಯಲ್ಲಿ ರಂಜಿಸಿ ನಸ್ಯಂಗೈಯಲು ಮೂಗಿನೊಳಗಿನ ಹುಳಗಳು ಸತ್ತುಬೀಳುವವು. ಮತ್ತು ಪಿನಿಸಿಗೆ ಸಂಪಿಗೆ ಹೂವಿನ ದಳದ ರಸಾ ಮೂಗಿನೊಳಗೆ ಹಿಂಡುವದು. ಕ್ರಿಮಿನಾಶವಾಗುವವು. ಮತ್ತು ಪಿನಸಿಗೆ—ಕುರುಟಿಗನ ಸೊಪ್ಪು ವಂದು ಹರಳು ಉಪ್ಪು ತಿಕ್ಕಿ ಮೂಗಿ ನೊಳಗೆ ಎರಡೂ ಕಡೆ ಎರಡು ತಟಕು ಹಿಂಡುವದು. ಪಿನಸಿ ಪರಿಹಾರವಾಗು ವದು. ಮೂಗಿನೊಳಗಿನ ಹುಂಣಿಗೆ ಮತ್ತು ಕಜ್ಜಿಗೆ—ಅಮಿಬೆನ್ನು ತಂದು ಸುಟ್ಟು ಬೂದಿ ಮಾಡಿ ಹುಂಣಿಗೆ ಖೊಬರಿಯಂಣಿ ಹಚ್ಚಿ ಅದರ ಮೇಲೆ ಪುಡಿ ಹಾಕಬೇಕು. ಹುಂಣು ಮಾಣುವದು.

ಖಜ್ಜಿ ಮೈ ವಣಗೋದಕ್ಕೆ : ಸಿಂಧೂರ, ಗುಗ್ಗಳ, ರಸಾಂಜನ, ಅಕ್ಕಿ ಕಚ್ಚು, ಅಗಳು ತುಥ್ಯ ಇದಕ್ಕೆ ಸಮ ಕಟಕರೋಹಿಣಿ, ಎಳ್ಳುಯಂಣಿ ಕೂಡಿಸಿ ಲೇಪವ ಮಾಡಲು, ಮಹಾಂತವಾದ ಖಜ್ಜಿ, ಸ್ರವಿಸುವಂಥಾ ಹುಂಣು ಮೈ ಒಣಗುವದು, ಲೇಪಮಾತ್ರದಿಂದಾನೇ ನಾಶವಾಹುದು.

ಮತ್ತು ಆನಿ ಖಜ್ಜಿಗೆ : ಕರೆಂಮದ್ದು ಗುಣಕಿಕಾಯಿವಳಗೆ ಹಾಕುವ ಜೀನಸು ಮುಡದಾರಶಿಂಗಿ, ಪಾದರಸಾ, ಈ ಎರಡನ್ನು ಕಾಯಿವಳಗೆ ತುಂಬಿ ಪುಟಪಾಕ ಮಾಡಿ ಖೊಬ್ಬೂರಿಯಂಣಿವಳಗೆ ಅರೆದು ಹಚ್ಚಲು ನಾಶ. ಅದ ರೊಳಗೆ ಖೊಬ್ಬರಿ ಸಹ ಹಾಕಬೇಕು. ಹುರಕ ಹತ್ತಿದರೆ—ಬಾವಂಚಿಬೀಜವ ತಂದು ರಾತ್ರಿಯಲ್ಲಿ ಮಜ್ಜಿಗೆಯಲ್ಲಿ ನೆನೆಹಾಕಿ ಮರುದಿವಸ ಗೋಮೂತ್ರದಲ್ಲಿ ಅರೆದು ಹಚ್ಚಲು ಹುರಕು ಪರಿಹಾರವಾಗುವದು.

ಸಂದುವಾತಕ್ಕೆ : ಬೋಳಥರವ ಆಡಿನಹಾಲಲ್ಲಿ ಕುಡಿಯಲು ಸಂದು

ವಾತ ಮಾಣ್ಣ್ಗ, ಮತ್ತು ಸರ್ವವಾತಕ್ಕೆ ಇಂಗು 1 ಭಾಗ, ಬಜಿ 2 ಭಾಗ, ಚಿತ್ರಮೂಲ 3 ಭಾಗ, ಅಲ್ಲ 4 ಭಾಗ, ಅಜಾಮೋದ 5 ಭಾಗ, ಅಣಿಲೆಕಾಯಿ 6 ಭಾಗ, ಹಿಪ್ಪಲಿ 7 ಭಾಗ, ಕೋಷ್ಟ 8 ಭಾಗ, ತ್ರಿಫಲ 9 ಭಾಗ, ಇವು ಇಷ್ಟು ಭಾಗ ವೃದ್ಧಿಯಕೊಂಡು ಸಂಣವಾಗಿ ಚೂರ್ಣವಂ ಮಾಡಿ ತ್ರ್ಯಂಗುಲ ಪ್ರಮಾಣ ಪ್ರಾತಃಕಾಲ ಸೇವಿಸಲು ಶ್ವಾಸ, ಖಾಸ, ಮಂದಾಗ್ನಿ, ಕ್ಷಯ, ಪಾಂಡುರೋಗ, ಅರೋಚಕ, ಸನ್ನಿಪಾತ, ಪಂಚ ಗುಲ್ಮಂಗಳು ಈಸುರೋಗ ನಾಶನವಹವು. ಪಥ್ಯ ಮಧುರಾನ್ನ ಭೋಜನ ; ಹುಳಿ, ಉಪ್ಪು, ಖಾರ ವರ್ಜ್ಯ.

ಮತ್ತು ವಾತಕ್ಕೆ : ಕತ್ತಿಗಿರಿಬನ ತೊಪ್ಪಲು ಕುಟ್ಟಿ ಪಾವಶೇರು ರಸವ ತೆಗೆದು ಅದರಲ್ಲಿ ಕಲಸಕ್ಕರಿ ರೂವಿ ತೂಕ ಹಾಕಿಕೊಡಲು, ವಾತಹರ. ಅದೇ ಚರಟ ಮೈಗೆ ತಿಕ್ಕಿ ಕುದುರೆಯ ಲದ್ದಿ ಇಲ್ಲವೆ ಕತ್ತಿಯ ಲದ್ದಿಯಲ್ಲಿ ಬೆಂಕಿಯ ಹೊತ್ತಿಸಿ ಕಾಸಿದರೆ ಮೂರು ದಿವಸಕ್ಕೆ ಪರಿಹಾರ.

ಮತ್ತು ವಾತಕ್ಕೆ—ನೆಲಸಂಪಿಗಿಗಡ್ಡಿ ನಿಂಬೆರಸದಲ್ಲಿ ತೇದು ಹಚ್ಚುವದು, ವಾತನಾಶ. ಮತ್ತು—ನುಗ್ಗಿತಾಟಿ ನಿಂಬಿರಸದಲ್ಲಿ ತೇದು ಹಚ್ಚುವದು ವಾತ ನಾಶ.

ನರವಾತಕ್ಕೆ ಮತ್ತು ಜ್ವರಕ್ಕೆ : ಕೋಣನ ಶೆಗಣಿ ರಾಡಿಮಾಡಿ ಕಾಸಿ, ಕಾಲು ತಾಳೊಹಾಗೆ ಯೆದ್ದುವದು. ಕಾಲಿಗೆ ಬಿಸಿ ಹತ್ತಿದರೆ ರೋಗಹರ. ವಾತಜ್ವರಕ್ಕೆ ಜಯಂತಿ, ತ್ರಿಫಲ, ಲೋಳಿಸರ, ವಿಷ್ಣುಕಾಂತಿ, ಶುಂಠಿ ಇವು ಕಷಾಯ ಮಾಡಿ ಕೊಟ್ಟರೆ ವಾತಜ್ವರನಾಶ.

ಮತ್ತು ವಾತಕ್ಕೆ : ಅಜಿವಾನದ ಎಂಣೆವಳಗೆ ಕರೇ ಕಡಲಿ ನೆನೆಹಾಕಿ ಕೊಡುವದು, ಪಥ್ಯ 1 ಸಪ್ತಕವರೆಗೆ ತುಪ್ಪ ಅನ್ನ.

ವಾತಕ್ಕೆ ತೈಲ : ಶುಂಠಿ, ಮೆಣಸು, ಹಿಪ್ಪಲಿ, ಮೋಡಿ ಅಜಿವಾನ, ಕರಿ ಜೀರಗಿ, ವಾಯುವಡಂಗ, ಗೌಳ, ಖರ್ಜೂರ, ನಖ, ಬಾಳದಬೇರು, ಯಕ್ಕಿಯ ಬೇರು, ಲಕ್ಕಿಯ ಬೇರು ನುಗ್ಗಿಯಬೇರು, ಜೇಕಿನಗಡ್ಡಿ, ಅಂಬಿಹಳದಿ, ಮಂಜಿಷ್ಟ, ಹಾಲಿವಾಳದಚಕ್ಕಿ, ಉತ್ತರಾಣಿ, ಕಾಡಿಗ್ಗರಗು, ತಪಶಿಯಬೇರು, ಮೊಂಡಗಳ್ಳಿ, ಹುಣಿಸಿ, ಮದ್ದಗುಣಕಿ, ಔಡಲ ಎಂಣೆ 3 ಶೇರು, ಈ ಜೀನಸಿ ನಿಂದ ತೈಲವ ತೆಗೆದು ಮೈಗೆ ಹಚ್ಚುವದು. ವಾತಶೂಲಿ ನಾಶ.

ಮತ್ತೆ ವಾತಕ್ಕೆ : ಮಸಿಗುಗ್ಗಳ 1 ಪಾವು, ಯಕ್ಕಹೂವಿನೊಳಗಣ ಲಿಂಗ 20 ಹಳೇಬೆಲ್ಲ 1 ಪಾವು, ಅರೆದು ಗುಳಿಗಿಯ ಕಟ್ಟಿ ತಿಂಬೋದು. ಪಥ್ಯ ತುಪ್ಪ, ಹಾಲುಅನ್ನ, ಉಪ್ಪು ಇವುಗಳನ್ನು ಬಿಡಬೇಕು.

ಮತ್ತೆ ವಾತಕ್ಕೆ : ಯಾಲಕ್ಕಿ, ಲವಂಗ, ಜಾಯಫಲ, ತ್ರಿತ, ಶುಂಠಿ, ಹಿಪ್ಪಲಿ, ಮೆಣಸು, ಅಜಿವಾನ, ಜೀರಗಿ, ಅಳ್ಳಿಕಾಯಿ ಇವು ಸಮ ತೂಕ ; ಬೆಲ್ಲ 16 ಗದ್ಯಾಣ, ಅಲ್ಲದ ರಸ 8 ಗ, ಜೇನುತುಪ್ಪ 4 ಗ, ಇವನ್ನು ಒಲೆಯಮೇಲೆ ಇಟ್ಟು ಮುಚ್ಚಳದಲ್ಲಿ ಕಾಸಿ ಆ ಚೂರ್ಣವನ್ನು ಹಾಕಿ ಕಾಸಿ ಇಳಿಸಿದ ಮೇಲೆ ಅಡಕಿ ಪ್ರಮಾಣ ಗುಳಿಗೆಯ ಮಾಡಿ ದಿನ 1 ಸೇವಿಸುವದು. ವಾತಶ್ವಾಸ ಖಾಸ ನಾಶ.

ಮತ್ತೆ ವಾತಕ್ಕೆ : ನೆಲಗುಗ್ಗಳ, ಶುಂಠಿ, ಕೋತಂಬರಿ, ಪುಷ್ಕರಮೂಲ (ಅಂದರೆ ಔಡಲಬೇರು), ಅಮರದಬಳ್ಳಿ, ಗಂಟುಬಾರಂಗಿ, ಲವಂಗ, ಹಿಪ್ಪಲೀ, ಮೋಡಿ, ಅಳಲಿಕಾಯಿ, ದೀಪದ್ರಾಕ್ಷಿ, ಚೂರ್ಣದ ಕಷಾಯಮಾಡಿ ಕೊಡಲು ವಾತಜ್ವರ ನಾಶ.

ಮತ್ತೆ : ಮೆಂಥೆ 1 ಶೇರು, ತುಪ್ಪ 1 ಶೇರು, ಸಕ್ಕರಿ 1 ಶೇರು, ಮೆಂಥ್ಯಾ ಬೀಸಿ ಹಿಟ್ಟುಮಾಡಿ ಮೂರೂ ಕಲಿಸಿ ಮೂರು ದಿನ ತಕ್ಕೊಳ್ಳಬೇಕು. ಪಥ್ಯ ತುಪ್ಪ ಅನ್ನ.

ಮತ್ತೆ ವಾತಕ್ಕೆ ಲೇಪನ : ಕಳ್ಳಿನಕುಡಿ ಮೊಳವುದ್ದ ತಂದು ಬೆಂಕಿಯ ಮೇಲೆ ಬಿಸಿಮಾಡಿ ಎರಡು ಶೇರು ರಸಾ ತೆಗದು ಅವುಡಲಯಂಣೆ ಕೂಡಿಸಿ ಮರ ಳಿಸಿ, ಪ್ರಾತಃಕಾಲಕ್ಕೆ ಎದ್ದು ಮೈಗೆ ಹಚ್ಚುವದು ; ವಾತಹರವು.

ಮತ್ತೆ ವಾತಕ್ಕೆ : ಲಕ್ಕಿಬೇರಿನ ಚೂರ್ಣ, 5 ಕಾಳು ಮೆಣಸು, ಆಡಿನ ಹಾಲಲ್ಲಿ ಅರೆದು ಅವುಡಲ ಯಂಣೆವಳಗೆ ಕೊಡುವದು ; ವಾತನಾಶ. ಮತ್ತೆ ಅವುಡಲಬೇರು, ಅಮರದ ಬಳ್ಳಿ, ದೇವದಾರು, ಗುಗ್ಗಳ ಇವುಗಳನ್ನು ಗೋ ಮೂತ್ರದಲ್ಲಿ ಕೊಡಲು ಶೋಭಿ, ಪಾಂಡು, ಕ್ರಿಮಿ ನಾಶ : ವಾತನಾಶ.

ಸಂದುವಾತಕ್ಕೆ : ಅಂಗರದ ಬೇರು, ಶುಂಠಿ, ಕರೆಯೆಳ್ಳು ಇವು ಚಿಗಳಿ ಮಾಡಿ ಆಕಳ ತುಪ್ಪದೊಳಗೆ ಕಲಸಿ ತಿಂಬೋದು ; ಸಂದುವಾತ ಪರಿಹಾರ.

ಮತ್ತೆ ಸರ್ವಾಂಗವಾತಕ್ಕೆ : ಕರೆಕುಂಬಿನಕಾಯಿವಳಗೆ ಶೇಗುಡಿಸಿ ಅರೆದು ರಸ ತುಂಬಿ ಕರೆ ಆಡಿನ ಹಾಲು ತುಂಬಿ ತೊಳೆದು ಅದರ ಬಾಯಿ ಮುಚ್ಚಿ ಆ

ಕಾಯಿ ನಡುವೆ ಹೂಳಿ ಎಂಟು ದಿನದ ಮೇಲೆ ತೆಗೆದು ಸರ್ವಾಂಗ ಲೇಪಮಾಡುವದು. ಸರ್ವಜೀನಸಿನ ವಾತ ಪರಿಹಾರ.

ಮತ್ತೆ ಲೇಪನ: ಬಜಿ, ಸೈಂಧವ, ಹಿಪ್ಪಲಿ, ಸಬ್ಬಸಿಗಿ ಇವುಗಳನ್ನು ಅಂಬಿಲದಲ್ಲಿ ಅರೆದು ಲೇಪಮಾಡಿದರೆ ಶೂಲಿ ನಾಶ.

ಸಂದುವಾತಕ್ಕೆ: ಚಿತ್ರಮೂಲ, ಅಮರದಬಳ್ಳಿ, ಸೂರಣ, ಸಾಸಿವಿ, ಕೋಷ್ಟ, ಬಜಿ, ಕೋಡಸಿಗಿ, ಯಕ್ಕಿ, ಜೀರಗಿ, ಪಂಚಲವಣ, ಇಂಗು, ಇಷ್ಟು ಚೂರ್ಣಮಾಡಿ ಮಾದಾಳ ಹಂಣಿನ ರಸದಲ್ಲಿ ಭಾವನೆ ನಾಲ್ಕು ಸಾರಿ ಕೊಟ್ಟು ದಿನಾ 1 ಗ, ಬಿಸಿನೀರಿನಲ್ಲಿ ಕೊಡಲು ಸಂದುವಾತನಾಶ.

ಮತ್ತೆ ಧನುರ್ವಾತಕ್ಕೆ: ಹೊಂನಗಂನೆಯ ಕುಟ್ಟಿ ರಸಾ ತೆಗೆದು ಹಸಿ ಹಾಲಿನೊಳಗೆ ಹಾಕಿ ಕಡೆದು ಬೆಂಣೆಯ ತೆಗೆದು ಆ ಬೆಂಣೆಯನ್ನ ನೆತ್ತಿಗೆ, ಮೈಗೆ ಹಚ್ಚಿ ತಿಕ್ಕುವದು; ತಲೆಯಿಂದ ಬಂದರೆ ಮಾಡಬಾರದು.

ಮತ್ತೆ ಹೃದಯಶೂಲಿ: ಪಕ್ಕಶೂಲಿ, ಹೊಟ್ಟೆಶೂಲಿಗೆ ಸಂವತ್ಸರಲವಣ 1 ಗ, ಹಿಂಗು 1 ಗ, ಶುಂಠಿ 2 ಗ, ಈ ಮೂರನ್ನು ವಸ್ತ್ರಗಳಿತ ಮಾಡಿ ನಾಲ್ಕು ಗದ್ಯಾಣ ಶುಂಠಿ ಉದಕದೊಳಗೆ ಹಾಕಿ ಕೂಡಿಸಲು ಮಲನಿಗ್ರಹವಾದಂಥಾದ್ದು ಹೃದಯಶೂಲಿ, ಬದ್ಧಿಯಶೂಲಿ, ಹೊಟ್ಟೆಶೂಲಿ, ವಿಸೂಚಿಕೆ, ಈಸು ರೋಗ ಮಾಣ್ಗು. ಈ ಚೂರ್ಣವ ಜಾಲಿಯ ಕಷಾಯದೊಳಗೆ ಹಾಕಿ ಕುಡಿಸಲು ಮಲಶೂಲಿ ಬಿಡುವದು.

ಟೊಂಕಶೂಲಿ, ಎದೆಶೂಲಿ, ಬೆನ್ನಶೂಲಿಗೆ: ಅವುಡಲಬೇರು, ಬಿಲ್ಪತ್ರಿಯ ಬೇರು, ಹೆಗ್ಗುಳ್ಳ ನೆಲಗುಳ್ಳದ ಬೇರು, ಮಾವಿನ ಬೇರು, ಪಾಷಾಣಭೇದಿ, ನೆಗ್ಗಿಲಬೇರು, ಈ ಏಳನ್ನು ಕೂಡಿ 12 ಗದ್ಯಾಣ ಕೊಂಡು ಕಷಾಯ ಮಾಡಿ ಸಧ್ಯಕ್ಷರ ಧರಣ ತೂಕ ಚೂರ್ಣವ ಮಾಡಿ ಔಡಲ ಎಂಣಿಯನ್ನು 3 ಗದ್ಯಾಣ ಈ ಕಷಾಯದೊಳಗೆ ಹಾಕಿ ಕುಡಿಸಲು ಟೊಂಕಶೂಲಿ, ತೊಡಿಯೊಳಗಣ ಬ್ಯಾನಿ, ಬೆನ್ನಶೂಲಿ, ಎದೆಶೂಲಿ, ಮತ್ಯಾವ ಶೂಲಿಯಾದರೂ ಪರಿಹಾರವಾಹುದು.

ಸರ್ವರೋಗಕ್ಕೆ, ಸರ್ವವಾತಕ್ಕೆ: ಅಮರದಬಳ್ಳಿ, ಅಡಸೋಗೆ, ನೆಲಗುಳ್ಳ ಇದರ ಕಷಾಯದೊಳು ತುಪ್ಪಹಾಕಿ ಇಟ್ಟು ಯಥಾಕ್ರಮದಿ ಸಂದ ತುಪ್ಪಮಂ

ಕುಡಿಯೆ ಹಳೆಯಜ್ವರ, ಕೆಮ್ಮು, ಶೂಲಿ, ಶ್ವಾಸ, ಮಂದಾಗ್ನಿ, ಗ್ರಾಹಿಣಿ, ಇವೆಲ್ಲ ಕೆಡುವವು.

ಹೊಟ್ಟೆಶೂಲಿಗೆ: ಇಂಗು, ಸೈಂಧವಲವಣ, ಶುಂಠಿ, ಅಣಲಿಕಾಯಿ, ಇವಂ ಚೂರ್ಣವಂ ಮಾಡಿ ಅರ್ಧ ಗದ್ಯಾಣ ಬಿಸಿನೀರಿಂದ ಕೊಳ್ಳಲು ಬದ್ಧಿಯಶೂಲಿ, ನಡಶೂಲಿ, ಮಾಣ್ಗು.

ಮತ್ತೆ ನೆಲಯಿಂಗಳವನರೆದು ತುಪ್ಪದಲ್ಲಿ ಕೊಳ್ಳಲು ಹೊಟ್ಟೆಬ್ಯಾನಿ ಮಾಣ್ಗು. ಮತ್ತೆ ಯಾಲಕ್ಕಿ 1 ಗ ಅಂಬಿಲದಲ್ಲಿ ಅರೆದು ಕುಡಿಯಲು ವಮನ ಮಾಣ್ಗು. ಮತ್ತೆ ಹೊಟ್ಟೆಶೂಲಿಗೆ—ಎಳ್ಳಯಂಣಿ 12 ಗ, ಬೆಳ್ಳುಳ್ಳಿ 9 ಗ, ಕಲಸಿಕೊಳ್ಳಲು ಹೊಟ್ಟೆಶೂಲಿ ನಾಶ. ಬಿಸಿ ಅನ್ನ ತುಪ್ಪ ಉಂಣಬೇಕು. ಮತ್ತೆ ಅಣಲಿಕಾಯಿ 4 ಗ, ಶುಂಠಿ 4 ಗ, ಶೇರು 4 ಗ, ಇವಂ ಹಂಚಿನೊಳಗೆ ಹಾಕಿ ಕರಕಮಾಡಿ ಕುಟ್ಟಿ ಮೊಸರುವಳಗೆ ಹಾಕಿ ಕೊಂಬುವದು ; 3 ದಿನಕ್ಕೆ ಹೊಟ್ಟೆಬ್ಯಾನಿ ಮಾಣ್ಗು. ಮತ್ತೆ ಕಡ್ಲಿಬ್ಯಾಳಿಯಷ್ಟು ಅವೂ ರಾತ್ರಿಯಲ್ಲಿ ಮಲಗುತ್ತಲೆ ಬಾಯಿವಳಗೆ ಇಟ್ಟುಕೊಂಡು ಮಲಗಲು ರಕ್ತಹೊಟ್ಟೆಬ್ಯಾನಿ ಮಾಣ್ಗು. ಪಥ್ಯ ತುಪ್ಪ ಅನ್ನ.

ಹೊಟ್ಟೆಬ್ಯಾನಿ ರುಮ್ಮ ಅಂಬೋದಕ್ಕೆ : ಶುಂಠಿ 3 ಪೈ ತೂಕ, ಇಂಗು 1 ಪೈ ತೂಕ, ಸೈಂಧವಲವಣ 1 ಪೈ ತೂಕ, ಸಂಣನಾಗಿ ಅರೆದು ರೊಟ್ಟೆಮಾಡಿ ಕೆಂಡದ ಮೇಲೆ ಬೇಯಿಸಿ 3 ದಿವಸ ಕೊಳ್ಳಲು ಹೊಟ್ಟೆಬ್ಯಾನಿ ಮಾಣ್ಗು. ಹೊಟ್ಟೆ ನೊಂದು ತೆರಲಿಕೆಗೆ– ದಾಳಿಂಬರದ ತೊಪ್ಪಲರಸ, ಹುಣಸಿಬೀಜ ಅರ್ಧ ಹಸೇದು, ಅರ್ಧ ಸುಟ್ಟಿದ್ದು, ಅರೆದು ನಿಂಬೆಹಂಣಿನ ಪ್ರಮಾಣ 3 ದಿವಸ ಕೊಳ್ಳಲು ಹೊಟ್ಟೆನೋವು ಮಾಣ್ಗು. ಪಥ್ಯ ಅಕ್ಕಿ ಬೋನ ಮೆಣಸಿನ ಹಿಟ್ಟು.

ತಲಿಶೂಲಿಗೆ : ಅರ್ಧಾ ಬೇವಿನ ಯೆಲೆ, ಅರ್ಧಾ ಮೆಣಸು, ಅರ್ಧಾ ಬೆಳ್ಳುಳ್ಳಿ, ಹೊಸ್ತಲ ಬುಡಕಿನ ಮಂಣು, ನಿಂಬೆಹಂಣಿನ ರಸದಲ್ಲಿ ತೇದು, ಬಿಳೀ ಕಾಗದಕ್ಕೆ ಲೇಪನಮಾಡಿ ಬತ್ತಿಮಾಡಿ ಶೇದಲು ತಲಿಶೂಲಿ ಪರಿಹಾರ.

ಹೊಟ್ಟೆಶೂಲಿಗೆ: ಇಂಗು, ಮೆಣಸು ಪುಡಿಮಾಡಿ ಅವುಡಲ ಎಂಣಿ ವಳಗೆ ಕಲಸಿ ವಲೆಮೇಲೆ ಕುದಿಸಿ ಮಂದು ಕುದಿ ಬಂದ ಮೇಲೆ ಇಳಿಸಿ ಎಂಣಿ ಬಸ ಕೊಂಡು, ಆ ಜೀನಸು ಅಮಳಪ್ರಕಾರ (ಅಂದರೆ ನೆಲ್ಲಿಕಾಯಿ ಪ್ರಮಾಣ) ಕೊಡುವದು, ಹೊಟ್ಟೆಶೂಲಿ ನಾಶ. ಮತ್ತೆ ರಂಜಿಕೆಯು ಚೂರ್ಣಮಾಡಿ ಮದುಸೆರಿ

ಪುಡಿ ಹಳೆನೀರಿನ ಸಂಗಡಕೊಳ್ಳಲು ಹೊಟ್ಟೆಶೂಲಿ ಮಾಣ್ಗು. ಮತ್ತೆ ತ್ರಿಕಟುಕ 3 ಗ, ಗಂಧವಿಡಿ 3 ಗ, ಸೈಂಧವಲವಣ 5 ಗ, ಈ ಜೀನಸ ಪುಡಿಮಾಡಿ ಬೆಲ್ಲ ದೊಳಗೆ ಗುಳಗಿಮಾಡಿ ದಿನ 1 ಗುಳಗಿ ತಕ್ಕೊಳ್ಳೇಬೇಕು. ಬಿಸಿನೀರು ಕುಡಿಯುು ವದು. ಮತ್ತೆ ಜಾಜಿಕಾಯಿ, ಕಾಂಚು, ಸಜ್ಜಿಕಾರ ಇವುಗಳನ್ನು ಹಳೇ ನೀರಲ್ಲಿ ಅರೆದು ಗುಳಗಿಮಾಡಿ ಮೊಸರಿನ ಸಂಗಡ ಕೊಳ್ಳಲು ತಕ್ಷಣ ಪರಿಹಾರ. ಗೆಣಸಿನ ಯಲಿ ರಸವ ತೆಗೆದು ಕೆಮ್ಮಣ್ಣಿನ ತಿಳಿನೀರು, ನಿಂಬಿರಸ 1 ಬಿಂದು ಹಿಂಡಿ ಸಮರಸ ಮಾಡಿ ಕುಡಿವದು. ಹೊಟ್ಟೆಶೂಲಿ ಮಾಣ್ಗು.

ಹೊಲಿಕುಟ್ಟೆಗೆ : ಪಟಕಾ ಅರಳುಮಾಡಿ ಪುಡಿಮಾಡಿ ತುಪ್ಪದೊಳಗೆ ಕೊಡೋದು, ಹೊಲಿಕುಟ್ಟೆ ನಾಶವಾದೀತು. ಮತ್ತೆ ಅವು ನಿಂಬೆಹಂಣಿನ ಹೊಳಕಿಯಲ್ಲಿ ತುಂಬಿ ಬಿಸಿಮಾಡಿ ತಿಂಬೋದು, ಹೊಟ್ಟೆಕುಟ್ಟು ನಾಶವಾಗು ವದು. ಆಸನಹಾದ ಶೂಲಿಗೆ– ಇಂಗು, ಶುಂಠಿ, ಮೆಣಸು ಚೂರ್ಣಮಾಡಿ ಬಿಸಿ ಅನ್ನದ ಸಂಗಡ ತುಪ್ಪಕಲಸಿ ಉಂಬುವದು, ಆಮೇಲೆ ಮೊಸರು ಕುಡಿಯುು ವದು, ಆಸನಹಾದಿದ್ದರ ಶೂಲಿ ಇದ್ದರೆ ನಾಶವಾಗೋದು. ಮತ್ತೆ ಶುಂಠಿ ಶೇರು, ಅಳಲಿಕಾಯಿ, ಸೈಂಧವಲವಣ ಇವುಗಳನ್ನು ನೀರಲ್ಲಿ ಅರೆದು ನೆಲ್ಲಿಕಾಯಿ ಪ್ರಮಾಣ ಗುಳಿಗೆಮಾಡಿ ಕೊಡಲು ಶೂಲಿನಾಶ.

ಹೊಟ್ಟೆಶೂಲಿಗೆ : ಸಾಸಿವೆ, ಮೆಣಸು 7, ಇಂಗು ಕಾಸಿನ ತೂಕ, ಇವು ಗಳನ್ನು ಅರೆದು ತುಪ್ಪ ಬಿಸಿಮಾಡಿ ಅದರಲ್ಲಿ ಕೊಡಲು ಶೂಲಿನಾಶ. ಮತ್ತೆ ತೊಟ್ಟಿನ ತೊಪ್ಪಲು ರಸಾ 9 ಪೈ ತೂಕ, ಮೆಣಸು 7, ಬೆಳ್ಳುಳ್ಳಿ ಬ್ಯಾಳಿ 7, ಅರೆದು ಕುಡಿಸಲು ಹೊಟ್ಟೆಶೂಲಿ ನಾಶ. ಮತ್ತೆ ಇಂಗು, ಬಜೆ, ಶುಂಠಿ, ಹಿಪ್ಪಲಿ, ನಾಲ್ಕನ್ನು ಒಂದೊಂದು ರುವಿತೂಕ ; ಅಳಲೆಕಾಯಿ, ಚಿತ್ರಮೂಲ, ಕೊಷ್ಟಾ, ಶೆಗಡಿ, ಇವುಗಳು ದುಗ್ಗಾಣಿ ತೂಕ ಪುಡಿಮಾಡಿ, ತುಪ್ಪ ಬೆರಸಿ ಬೇಯಿಸಿ ಗಜಗದ ಪ್ರಮಾಣ ಮಾತ್ರೆಯಕಟ್ಟೆ, ಎರಡುವ್ಯಾಳೆ ಮೂರು ದಿವಸ ಕೊಡಲು ಹೊಟ್ಟೆಶೂಲಿ ನಾಶ.

ಭಟ್ಟೆ ಗಂಟುಕದಡಿದ್ದರೆ : ತುರಬಿಬೇರಿನ ತಾಟಿ ಪೂಜಿಸಿ ತಂದು ಹೊಸ ದಾಗಿ ದಾರವ ಮಾಡಿ ತೊಡಿಗೆ ಕಟ್ಟಲು ಭಟ್ಟೆ ಹೋದೀತು.

ಗೂದಿ ಹಾದಿದ್ದರೆ : ಹಣಚಿ ತಿಕ್ಕಿ ರಸಾ ತೆಗೆದು ಗುದಕ್ಕೆ ಹಿಂಡಿದರೆ ಒಳಗೆ ಶೇದುವದು.

ಗುಲ್ಮಾದಿಗಳಿಗೆ, ಅಂದರೆ ಎಂಟು ಪ್ರಕಾರದ ಗುಲ್ಮಗಳಿಗೆ : ಕುರಟಿಗೆಯ ಬೇರು, ಹುಣಿಕೆಯ ಹಂಣು, ಚಿತ್ರಮೂಲ, ಸೂರಣಿ ಹುಲಗಿಲಬೇರು, ಇವು ಸರಿಯಾಗಿ ಚೂರ್ಣವಂ ಮಾಡಿ ನಾಲ್ಕು ಗದ್ಯಾಣ ಜೀರಿಗೆ ಹಾಕಿ ಮಜ್ಜಿಗೆಯ ಸಂಗಡ ಕುಡಿಸಲು ಗುಲ್ಮರೋಗ, ಮೂಲವ್ಯಾಧಿ, ಭಗಂಧರ, ಇಷ್ಟು ರೋಗ ಮಾಣ್ಗು.

ಪಂಚಾಗ್ನಿ ಹೋಲುವಂಥಾ ಉದರಾಗ್ನಿಯಾಗಿ ಎಷ್ಟು ಮೃಷ್ಟಾನ್ನವನ್ನುಂಡರೂ ತಕ್ಷಣವೇ ಭಸ್ಮವಾಗುವದು.

ಗುಲ್ಮ ಉದರಬಾವಿಗೆ : ಹುಲಗಿಲಯಲಿ, ಹಾವುಮೆಕ್ಕೆಯ ಬೇರು, ಕಾಡಮೆಣಸು, ಚಿತ್ರಮೂಲ, ಶುಂಠಿ, ಹಿಪ್ಪಲಿ, ಮೆಣಸು, ಇವು ಸರಿಯಾಗಿ ಕೊಂಡು ಮಡಕೆಯೊಳಗಿಕ್ಕಿ ಹರಹಿ ಅದರ ಮೇಲೆ ಒಂದು ಅವುಷಧದ ಸರಿ ಸೈಂಧವಲವಣ ಹಾಕಿ ಆ ಮಡಕೆಯನ್ನು ವಳಿತಾಗಿ ಮುಚ್ಚಿ ಕೆಳಗೆ ಅಗ್ನಿಯ ಹೊತ್ತಿಕ್ಕಿ ಮಸಿಯಾಗುವಂತೆ ಸುಡುವದು. ಬೆಂನಟು ಆಗದಂತೆ ತೆಗೆದು ಚೂರ್ಣಮಾಡಿ ನಾಲ್ಕು ಗದ್ಯಾಣ ಚೂರ್ಣವಂ ಮೊಸರತಿಳಿಯಲ್ಲಿ ಕಲಸಿ ಕುಡಿಯಲು ಗುಲ್ಮ, ಉದರಬಾವು, ಪಾಂಡುರೋಗ, ಮೂಲವ್ಯಾಧಿ, ಈ ರೋಗಗಳೆಲ್ಲ ಹೋಗಿ ಸ್ವಸ್ಥನಹನು.

ಗುಲ್ಮಜಲೋದರಕ್ಕೆ, ಅಜೀರ್ಣಕ್ಕೆ : ಹಿಂಗು 1 ಗದ್ಯಾಣ, ಬಜಿ 2 ಗ, ಬೀಡುಲವಣ 3 ಗ, ಪುಷ್ಕರಮೂಲ 7 ಗ, ಕೋಷ್ಟ 8 ಗ, ಇವುಗಳನ್ನು ಹೇಳಿದ ಭಾಗೋತ್ತರದಲ್ಲಿ ಕೊಂಡು ಚೂರ್ಣಮಾಡಿ ವಸ್ತ್ರಗಳಿತಮಾಡಿ ಆ ಚೂರ್ಣವಂ ನಾಲ್ಕು ಗದ್ಯಾಣ ಬಿಸಿನೀರಲ್ಲಿ ಕಲಸಿ ಕುಡಿಸಲು ಗುಲ್ಮ, ಜಲೋದರ, ಅಜೀರ್ಣ, ವಿಸೂಚಿಕೆ, ಇಷ್ಟು ರೋಗಗಳು ಮಾಣ್ಗು.

ಸಂಣ (ಐದು, ಆರು ವರ್ಷದ) ಹುಡುಗರಿಗೆ : ಕಾಕಿಕಾಯಿ, ಶುಂಠಿ ಎರಡು ಕೂಡಿ ಕಷಾಯಮಾಡಿ ಕೊಡುವದು, ಹೊಟ್ಟೆ ಮೆತ್ತಗಾದೀತು.

ವಾಯುಗುಲ್ಮಕ್ಕೆ ಮತ್ತು ಪಿತ್ತಗುಲ್ಮಕ್ಕೆ : ಹೊನ್ನವರಿ ಗಿಡದ ತಾಟಿ 5 ಶೇರು, ತಪಶಿಯ ಗಿಡದ ತಾಟಿ 5 ಶೇರು, ಎರಡು ಕೂಡಿ 1 ಧಡೆ ಸುಮಾರು ತಂದು ನೆರಳಾಗೆ ಒಣಗಿಸಿ ಸುಟ್ಟು ಬೂದಿಯ ಮಾಡಿ, ವಸ್ತ್ರಗಳಿತಮಾಡಿ ಆಡಿನ ಹಾಲೊಳಗೆ 21 ದಿವಸ ತಕ್ಕೊಳ್ಳಬೇಕು. ಮುಂಚಿತವಾಗಿ ಬಾಯೊಳಗೆ ಹಾಲುಹಿಡುಕೊಂಡು, ಆ ಮೇಲೆ ಎರಡು ಚಿಮಟೀಪುಡಿ ಬಾಯೊಳಗೆ ಹಾಕಿ

ಕೊಂಡು ನುಂಗಬೇಕು. ಮೇಲೆ ಸ್ವಲ್ಪ ಹಾಲು ಕುಡಿಯುಬೇಕು. ಪಥ್ಯ ಎಂಣಿ, ಮೊಸರು, ಮಜ್ಜಿಗೆ ಮುಂತಾದ ಶೀತ ಪದಾರ್ಥ ಬಿಡಬೇಕು. ಹತ್ತು ವರ್ಷದ ಉಪದ್ರವ ಇದ್ದಾಗ್ಯೂ ಹೋಗುವದು. ಮಾತ್ರ ಎರಡು ಸಪ್ತಕ ಹೆಚ್ಚಿಗೆ ತಕ್ಕೊಂಬುವದು. ಇದು ಪ್ರತ್ಯಕ್ಷಮಾಡಿದಂಥಾ ಅವುಷಧವಿದೆ.

ವಾತಗಂಟು ಮೈಮೇಲೆ ಎದ್ದರೆ : ಸೈಂಧವಲವಣ 2 ಗ, ನಿಂಬೆಹಂಣು ಒಂದು ಹೋಳಕಿ ರಸವ ತೆಗೆದುಕೊಂಡು ಅಲ್ಲದರಸ 6 ಗ, ಈ ಮೂರು ಜೀನಸ ಕೂಡಿಸಿ ಇಪ್ಪತ್ತೊಂದು ದಿವಸ ತಕ್ಕೊಂಡರೆ ಕೈಕಾಲುಗಳಲ್ಲಿದ್ದ ಗಂಟುಗಳು ಬಿಡುವವು. ಪಥ್ಯ ಅನ್ನ ತುಪ್ಪ ಉಣಬೇಕು ; ಬಿಸಿನೀರು ಕುಡೀಬೇಕು. ಅನ್ನ ತಕ್ಕೊಳ್ಳೊ ಕಾಲಕ್ಕೆ ಸೈಂಧವಲವಣ ಹಾಕಿಕೊಳ್ಳಬೇಕು.

ಜಲರೋಗವಾಗಿ ಅತಿಶಯ ನೀರು ಕುಡಿದರೆ ಕ್ಯಾದಿಗಿಡದ ಧೂಳಿಯ ಮುಷ್ಟಿತುಂಬ ತಂದು ಜೀರಗಿ, ಸಕ್ಕರಿ ಹಾಕಿ ಅಚ್ಚೇರು ರಸಕೊಡಬೇಕು. ಉಪದ್ರ ನಾಶವಾಗುವದು.

ದೇವಗಣಗಲುಹಾಲು ಹಚ್ಚಿ ಅದರ ಮೇಲೆ ಸೈಂಧವಲವಣ ಪುಡಿ ಹಚ್ಚಿದರೆ ಗಂಟು ಕರಗುವದು.

ಹೊಟ್ಟೆಯೊಳಗಿನ ಗಂಟಿಗೆ ಮತ್ತು ಮೂಲವ್ಯಾಧಿ ಗಂಟಿಗೆ : ಪಂಚಾಗ್ನಿ ವಟಿಕಾಸೂರಣ 16 ಭಾಗ, ಕೇರ 8 ಭಾಗ, ಶುಂಠಿ 4 ಭಾಗ, ಹಿಪ್ಪಲಿ 2 ಭಾಗ, ಅಡವಿಸೂರಣ 1 ಭಾಗ, ಬಾಳರಕ್ಕಸಿಯುಗಡ್ಡಿ 1 ಭಾಗ, ಮಂಗರೋಳಿ 1 ಭಾಗ, ನೆಲ್ಲಿಚೆಟ್ಟು 1 ಭಾಗ, ತಾರಿಕಾಯಿ 1 ಭಾಗ, ಅಳಲಿಕಾಯಿ 1 ಭಾಗ, ಲವಂಗ 1 ಭಾಗ, ಮೆಣಸು 1 ಭಾಗ, ಹುಲಗಲಿ 1 ಭಾಗ, ಚಿತ್ರಮೂಲ 1 ಭಾಗ, ಇವು ಸಮಾನ ಚೂರ್ಣಮಾಡಿ ಬೆಲ್ಲ ಸಮನಾಗಿ ಕೂಡಿಸಿ, ದಿನಾ ಮೂರು ದುಡ್ಡು ತೂಕ ತಕ್ಕೊಂಡು ಮೇಲೆ ಥಂಣೀರು ಮೂರು ಗುಟುಕು ಕುಡೀ ಬೇಕು. ನಂಜು ತಿನ್ನಬಾರದು. ಮೂಲವ್ಯಾಧಿಯು ಗಂಟು, ಸಂಗ್ರಾಣಿ ಗುಲ್ಮಗಂಟು ಮಾಣ್ಗು.

ಸ್ತ್ರೀಯರ ರಕ್ತಸ್ರಾವಕ್ಕೆ : (ಅಂದರೆ ಋತುಕಾಲ ಹೊರ್ತಾಗಿ ರಕ್ತ ಸ್ರವಿಸಿದರೆ) ಶುಂಠಿ 2 ಗ, ಭಾರಂಗಿ 2 ಗ, ಸಂಣವಾಗಿ ಅರೆದು ಅಕ್ಕಿಕಚ್ಚಿನಲ್ಲಿ ಕಲಸಿ ಜೇನುತುಪ್ಪ ಪ್ರತಿಪಾಕವಿಕ್ಕಿ ಕುಡಿಸಲು ಶ್ವಾಸಕಾಸದಲ್ಲಿ ಕೂಡಿದಂಥಾ ಪ್ರದರವೆಂಬ ಹೆಸರುಳ್ಳ ರಕ್ತಸ್ರಾವ ಮಾಣ್ಗು.

ಮತ್ತು ಸೂತಕ ನಿಲ್ಲುವದಕ್ಕೆ : ವಜ್ರನೀಲಿ 4 ಗ, ಅರಿಶಿನ 4 ಗ, ಎಳ್ಳೆಯೆಂಣೆ 4 ಗ, ಇಷ್ಟನ್ನು ಕೂಡಿಸಿ ಮೂರು ದಿವಸ ಕೊಳ್ಳಲು ಸೂತಕ ನಿಲ್ಲುವದು. ಪಥ್ಯ ಅನ್ನ ತುಪ್ಪ. ಮತ್ತು ಚಿತ್ರಮೂಲದರಸ 4 ಗ, ಅರಿಶಿನ 2 ಗ, ಮೆಣಸು 3 ಗ, ಇವಂ ಎಳ್ಳೆಯೆಂಣೆ ವಿದ್ದಿ ಗುಳಿಗೆಯುಮಾಡಿ ಕೊಂಬೋದು ; ಮೂರು ದಿನಕ್ಕೆ ಸೂತಕ ಪರಿಹಾರ. ಪಥ್ಯ ತುಪ್ಪ ಅನ್ನ.

ಪ್ರದರರೋಗಕ್ಕೆ : ಮೆಂಥ್ಯ 1 ಗ, ದೀಪದ್ರಾಕ್ಷಿ 1 ಗ, ಮೆಣಸು 1 ಗ, ಕಿರಿನೆಲ್ಲಿ 1 ಗ, ಜೀರಗಿ 1 ಗ, ಇವು ಸಮಾನ ಚೂರ್ಣಮಾಡಿ ತುಪ್ಪದಲ್ಲಿ ಕರಿದು ಆಕಳ ಮೊಸರು ಹಾಕಿ 5 ದಿವಸ ಕೊಡಬೇಕು. ಪಥ್ಯ ನಂಜಿನ ಪದಾರ್ಥ ಬಿಡಬೇಕು.

ಸ್ತ್ರೀಯರಿಗೆ ರಕ್ತಹೋಗುವದಕ್ಕೆ : ತಿಗಡಿಬೇರು, ಔಡಲಬೇರು, ಅರಿ ಮರದ ಬೇರು, ಈ ಮೂರನ್ನು ತೇದು ಆಕಳಹಾಲಲ್ಲಿ ಕೊಡುವದು. ಮತ್ತೆ ರಕ್ತಘಟ್ಟಿ ಹೋಗುತ್ತಿದ್ದರೆ, ಯಕ್ಕಿಬೇರು, ಕುಸುಂಬಿಹೂವು, ನಾಗಕೇಸರ, ಬಾಳದಬೇರು, ಈ ನಾಲ್ಕು ಜೀನಸು ಸಮನಾಗಿ ಅರೆದು ಹಾಲೊಳಗೆ ಕೊಡು ವದು ಮತ್ತು ರಕ್ತನೀಲವರ್ಣ ಹೋಗುತ್ತಿದ್ದರೆ ಕಮಲದ ಬೇರು 1 ಗ, ತಗ ರದ ಬೇರು 1 ಗ, ಶ್ರೀಗಂಧ 1 ಗ, ಕೋಷ್ಟ 1 ಗ, ಜ್ಯೇಷ್ಟಮಧು 1 ಗ, ಈ 5 ಜೀನಸು ನೀರೊಳಗೆ ತೇದು ಆಡಿನ ಹಾಲೊಳಗೆ 5 ದಿನ ಕೊಡಲು ರೋಗ ಮಾಣ್ಬುಗ.

ಸೊಲ್ಲು ಬೀಳುವದಕ್ಕೆ : ತುಪ್ಪ, ದೇವದಾರು, ಚಂದನ, ಕರೇಭತ್ತದ ಅಕ್ಕಿ ತೀಕೊಂಡಿಬೇರು, ಕರೇಆಕಳ ಹಾಲೊಳಗೆ ತೇದು 21 ದಿವಸ ಕೊಟ್ಟರೆ ಸೊಲ್ಲು ಬೀಳೋದು ಮಾಣ್ಬುಗ.

ಇನ್ನು ಶ್ಲೇಷ್ಮಪ್ರಕೃತಿಯ ಲಕ್ಷಣವ ಪೇಳ್ವೆನು

ಶ್ಲೇಷ್ಮಪ್ರಕೃತಿಯುವನು, ದೊಡ್ಡದೇಹಿ, ಪ್ರಸನ್ನನು, ಶ್ಯಾಮವರ್ಣನು, ಶ್ರೀಮಂತನು, ಮಹಾಜನಪರಿವೇಷ್ಟಿತನು, ಸಿಂಹನಾದನು, ಗೀತವಾದ್ಯ ಪ್ರಿಯನು, ಸ್ಥಿರನು, ಮಧುರಾಲಾಪನು, ಧೈರ್ಯಪರನು, ಕ್ಷಮಾಪರನು, ವಿಚಾರ ಪರನು, ಶೀಕ್ಷಾಚಪಲನು, ಹೇಳಿದ್ದನ್ನು ಶೀಘ್ರದಲ್ಲಿ ಗ್ರಹಿಸುವನು. ಸ್ವಪ್ನದಲ್ಲಿ ತಾವರೆಯುಂ ಕೋಣನಂ ಹಂಸಂಗಳಂ ನದಿಯುಂ ಸಮುದ್ರಮುಂ ಕಾಣ್ಬದು. ಶ್ಲೇಷ್ಮಪ್ರಕೃತಿಯುಂತೆಂದರೆ ಈ ತೆರದಲ್ಲಿ ತಿಳಿಯುಬೇಕು.

ಪಿತ್ತ ಪ್ರಕೃತಿಯೆಂತೆಂದರೆ : ಪಿತ್ತವುಳ್ಳವನು, ಕೋಪಿಯು, ಅತಿ ತೀಕ್ಷ್ಣನು, ಪ್ರಾಜ್ಞನು, ಬೆವರುವವನು, ಪಿತ್ತಶರೀರನು, ನಾಲಗೆಯು ತುಟಿ ಕೈಕಾಲುಗಳು ತಳಕೆಂಪಾಗಿಹನು, ಶೂರನು, ವಿದ್ವಾಂಸನು, ಎಲ್ಲಾ ಕರ್ಮದಲ್ಲಿ ಪ್ರವೀಣನು, ಧರ್ಮಪರನು, ಉಷ್ಣಕಾಯನು, ತೃಷನು, ಸೌಭಾಗ್ಯವಂತನು, ಭೋಜನಪ್ರಿಯನು, ಸದಾ ಶುಚಿಯು. ಸ್ವಪ್ನದಲ್ಲಿ ಸುವರ್ಣವುಂ, ಆಭರಣವುಂ, ರಕ್ತಮಾಂಸಂ ಗಳಂ, ಪದ್ಮಾರಾಗ ಮಾಣಿಕ್ಯಂಗಳಂ ಶಿಡಿಲಂ ಹೊಗೆ ಇಲ್ಲದ ಕಿಚ್ಚು ಮುಳ್ಳು ಮುತ್ತುಕದ ಮೊದಲಾದ ಕೆಂಪುಮರನು ಕಾಣ್ಬನು, ಪಿತ್ತಲಕ್ಷಣವೆಂದರಿಯುವದು.

ಇನ್ನು ವಾತಾಧಿಕನ ಪ್ರಕೃತಿ ಲಕ್ಷಣ : ರಾತ್ರಿಯಲ್ಲಿ ನಿದ್ದೆಗೈಯುವಾಗ ಬಾಯಿ ಬಿಡುವದು, ನಿಃ ಸೌಭಾಗ್ಯನು, ಎಲ್ಲರಿಗೆ ಪ್ರಿಯನು, ಮತ್ಸರಿಯನು, ಗುಣಹೀನನು, ಕೃತಘ್ನನು ; ಕೈಕಾಲು ತಳಬೆಟ್ಟದಂತಿಹವು, ಹಲ್ಲುಗಳ ತಿಂಬುವನು, ಅಸ್ಥಿರನು, ತೊಳಲಿದ ಸ್ವಭಾವನು, ನಿರ್ದಾಕ್ಷಣ್ಯನು, ಕ್ಲೇಶಪರನು, ಅಲ್ಪ ಧೈರ್ಯನು ; ಸ್ವಪ್ನದಲ್ಲಿ ಆಕಾಶಕ್ಕೆ ಹಾರುವದು, ಪರ್ವತದ ಮಸ್ತಕಂಗಳನೇರುವದು, ಇನಿತು ವಾತಾಧಿಕ ಲಕ್ಷಣವು.

ಇನ್ನು ಆನಂದಸಾರವುಂ ಪೇಳ್ವೆ : ಶೀಯೂ, ಕಹಿಯೂ, ವಗರು, ಖಾರವು, ಉಪ್ಪು, ಹುಳಿಯು, ಇಂತು ಆರು ರಸಗಳನ್ನು ಕಾಲವರಿತು ಸೇವಿಸಿದರೆ ಆರೋಗ್ಯವಹುದು, ಅತಿಕ್ರಮಿಸಿ ಸೇವಿಸಿದರೆ ಕ್ರೂರವ್ಯಾಧಿಗಳು ಆಶ್ರೈಸುವವು, ಕಹಿ, ವಗರು, ವಾತವು, ಹುಳಿಯು, ಶೀಯು ಶ್ಲೇಷ್ಮಕರ ; ಲವಣ ಕ್ಷಾರ, ಪಿತ್ತಕರ.

ಇನ್ನು ಋತುಲಕ್ಷಣ—ಮಳೆಗಾಲದಲ್ಲಿ ವಾತ ಹುಟ್ಟುವದು, ಮಾಗಿಯಲ್ಲಿ ಶ್ಲೇಷ್ಮ ಹುಟ್ಟುವದು, ಬೇಸಿಗೆಯಲ್ಲಿ ಪಿತ್ತ ಹುಟ್ಟುವದು, ರಸವುಳ್ಳ, ಸುಗಂಧವಾದ, ಸ್ನಿಗ್ಧವಾದ, ನವಪಾಕವಾದ ಭೋಜನ, ಆರೋಗ್ಯ, ಪರಮ, ಆಯುಷ್ಯ, ಸತ್ಯಪರಮ, ದೈವಜ್ಞನು, ಪುರುಷಾರ್ಥಕಾಮನು, ಅತ್ಯಂತ ಹುಳಿಯೂ, ಅತಿಲವಣವು, ಅತಿಉಷ್ಣವು—ಅಕಾಲಮೃತ್ಯುವಹುದು ; ನಿರಸಂಗಳಂ ಹಳಿವದೂ ತಂಗುಳಿಗೆ ಪ್ರಿಯನಾದವನೂ, ಅನಿರ್ದಯನು, ಅಧರ್ಮನು, ಕಲಹಪ್ರಿಯನೂ, ಕುಚಿತ್ತನು, ಸ್ತ್ರೀರಹಿತನು, ಶಸ್ತ್ರದೂಷಕನು, ಅತಿನಿದ್ರಾತುರನು ಶೂಲೆಯಾದ್ಹಾಂಗೆ ವ್ಯೈಬ್ಯಾನಿಯಹದು, ಇದು ವಾತದ ಲಕ್ಷಣ, ಮತ್ತು

ಬಾಯಿ ಕಹಿ ಆಗುವದು, ಉಷ್ಣವಾಗುವದು, ಮೂತ್ರ ಕೆಂಪಾಗುವದು ಶ್ಲೇಷ್ಮದ ಲಕ್ಷಣ.

ಇನ್ನು ಪ್ರಾಯದ ಪರಿಯಾಯ : ಇನ್ನು ಪ್ರಾಯದ ಮೂರು ವಿಧ-ಬಾಲಪ್ರಾಯದಲ್ಲಿ ಔಷಧವ ಲೇಪನ ಮಾಡುವದು ; ಮಧ್ಯಪ್ರಾಯದಲ್ಲಿ ನಸ್ಯಂಗೈವದು, ಸಲಿಯಬಿಡುವದು, ಕೊಂಬನಿಕ್ಕುವದು, ಜಿಗುಳಿಯಬಿಡುವದು, ಕ್ಷಾರಕರ್ಮವನು ಮಾಡಿಸುವದು ; ವೃದ್ಧಂಗೆ ಕಾಸುವದು, ಪ್ರವೃತ್ತಿ. ವ್ಯದ್ವರ್ತನ, ಕಲ್ಕಷಾಯ ಮೊದಲಾದ ಮೃದುಕ್ರಿಯೆಗಳ ಮಾಡುವದು ಬಾಲಪ್ರಾಯದಲ್ಲಿ ಶ್ಲೇಷ್ಮ , ಮಧ್ಯಪ್ರಾಯದಲ್ಲಿ ಪಿತ್ತವಧಿಕವು, ವೃದ್ಧಂಗೆ ವಾತಾಧಿಕವು, ಈ ಪ್ರಕಾರ ಪ್ರಕೃತಿ ತಿಳಿದು ವೈದ್ಯವ ಕೊಡುವದು.

ಶ್ರೀಗಂಧವಮಂ ಪೂಸುವ ಕ್ರಮುವೆಂತೆಂದರೆ : ಮಾಗಿಯಲ್ಲಿ ಬೇವಿನ ಗಂಧ ವಾತ ಶ್ಲೇಷ್ಮಹರ, ಅವರೆಯಗಂಧ ಬ್ಯಾಸಗೆಯಲ್ಲಿ ಶೈತ್ಯಕರ, ಮಳೆಗಾಲದಲ್ಲಿ ಬಿಲ್ವದಗಂಧ ತ್ರಿದೋಷಹರ. ಅರಳಿ ಹಾಕಿದ ಹಾಸಿಗೆ ಮಂಚ ಮಳೆಗಾಲದ ಮಾಗಿಯಲ್ಲಿ ಲೇಸು, ಯಕ್ಕಿಯಬೂರಲದ ಆರಹಾಕಿದ ಹಾಸಿಗೆ ವಾತಾದಿಕರಿಗೆ ಲೇಸು, ಯಲವದ ಬೂರಲದ ಅರಳಿ ಹಾಸಿದರೆ ತ್ರಿದೋಷಹರ, ಎಲ್ಲಾ ಋತುವಿನಲ್ಲಿಯೂ ಲೇಸು. ಸುವರ್ಣದ ಪಾತ್ರೆಯು ತ್ರಿದೋಷಹರ, ಕಂಚಿನಪಾತ್ರೆಯು ರಕ್ತವರ್ಧನ, ಲೋಹಪಾತ್ರೆ ಸರ್ವಗುಣ. ಜಾಜಿಯ ಹೂವು ಮಲ್ಲಿಗೆ ಪುಷ್ಪ ನಾಲ್ಕು ಘಳಿಗೆ ಪರಿಮಳ ಲೇಸು, ಮೂರು ದಿನ ಕ್ಯಾದಿಗೆಯು ಲೇಸು—ರತಿಗುತ್ಸಹ ಕಸ್ತುರಿಯು ಸಮ. ಈ ರೀತಿ ಭೋಜನ, ತಾಂಬೂಲ, ಅಶನ ಶಯನಂ ಗಂಧ ಮಾಲ್ಯಾದಿ ಸೇವಿಸಿದರೆ ಮತ್ತು ಊಟ ಮಾಡಿ ಶತಪಾದ ಹೆಜ್ಜೆನಡದು ಕುಳಿದರೆ ಡೊಳ್ಳು ಬಾಹದು, ಆರೋಗ್ಯಬಲವಕ್ಕು. ಉಂಡಾಗಲೇ ಓಡುವದು, ಕುದುರೆಯನೇರುವದು, ಸ್ತ್ರೀ ಸಂಭೋಗವಂ ಮಾಡುವದು—ಇನಿತು ಹೊಲ್ಲ ವ್ಯಾಧಿಗಳಿಗೆ ಕಾರಣ. ಒಂದಾವರ್ತಿವುಂಡರೆ ಆರೋಗ್ಯ, ಎರಡಾವರ್ತಿವುಂಡರೆ ಬಲವಕ್ಕು, ಮೂರುಸಾರೆ ವುಂಡರೆ ರೋಗಕ್ಕೆ ಕಾರಣ, ಅಪರಿಮಿತ ಉಂಬುವದು ಹೊಲ್ಲಾ, ವುಂಡಮೇಲೆ ಒಂದೇ ಠಾಂವಿನಲ್ಲೇ ಕೂಡ್ರುವದು ಹೊಲ್ಲಾ. ಉಣ್ಣದ ಮೊದಲೇ ನೀರು ಕುಡಿದರೆ ಮೈ ಬಡವಕ್ಕು, ಊಟದ ನಡುವೆ ನೀರು ಕುಡಿದರೆ ಸಮದೇಹ, ಉಂಡಬಳಿಕ ನೀರು ಕುಡಿದರೆ ಡೊಳ್ಳು ಬರುವದು. ಉಂಡ ಅನ್ನ ಜೀರ್ಣವಾಗೋಕೆ ಕೆಲಸ ಮಾಡುವದು, ತಂಣೀರು

ಕುಡಿವದು, ಇನಿತು ಹೊಲ್ಲಾ. ಉಂಡ ಎಲ್ಲಾ ಕಾಲ ಸುಖವಿಪ್ಪ ಎಡೆಯೊಳು ಪಾದ ನಡೆಯಿಂದ ಚಲಿಸುವದು, ಮೊದಲು 2 ಜಾಂವ ತಂಣನ್ನ ಮೃದುವಾದ ಸ್ಥಾನದಲ್ಲಿ ಯಡಮಗ್ಗಲದಿಂದ ಮಲಗುವದು, ಬಳಿಕ 32 ಶ್ವಾಸ ನಿಶ್ವಾಸಂಗಳ ಕಳದು ಬಲಮಗ್ಗಲದಲ್ಲಿ 17 ಶ್ವಾಸನಿಶ್ವಾಸಂಗಳಂಕಳದು ಈ ರೀತಿ ಕ್ರಮದಲ್ಲಿ ಭೋಜನ ಹಿತಕರ. 2 ಸಾರೆ ಮಲವಿಸರ್ಜನ, 5 ಸಾರೆ ಮೂತ್ರಗೈಯೋಣ ಲೇಸು. ಸೂರ್ಯಾಸ್ತಮಾನದಲ್ಲಿ ಶೀನುವದು, ಸ್ತ್ರೀಸಂಭೋಗ, ತಂಣೀರು, ಇವು ತ್ರಿದೋಷ ಮಾಡುವದು. ಬಿಸಿನೀರು ತ್ರಿದೋಷಹರ, ರೋಗನಾಶನ, ಕಾದಾರಿದ ನೀರು ತ್ರಿದೋಷಹರ, ಹೃದ್ರೋಗಹರ, ಲಘುದೀಪನವು, ನವರುದ್ರಕ್ಕೆ ಲೇಸು. ಮೂತ್ರ ಧರಿಸಿದರೆ ಕಂಣಿಗೆ ಹೊಲ್ಲ, ಮಲ ಧರಿಸಿದರೆ ಕಿವಿಗೆ ಮಂದ, ಛರ್ದಿಯು ಧರಿಸಿದರೆ ತುರಿಕೆರಕು ಕುಷ್ಟಕ್ಕೆ ಕಾರಣ, ಮಲನಿರೋಧ ಗುಲ್ಮಕ್ಕೆ ಕಾರಣ, ಶುಕ್ಲನಿರೋಧ ಪ್ರಮೇಹಮಕ್ಕುಂ. ಕಂಣಿಗೆ ಅಂಜನವ ಹಚ್ಚಲು ದಂತಕ್ಕೆ ಲೇಸು, ದಂತಧಾವನ ಕಿವಿಗೆ ಲೇಸು, ಶಿರೋಭ್ಯಂಗನ ಪಾದಕ್ಕೆ ಲೇಸು, ಪಾದವು ಪೂಸಲು ಕಂಣಿಗೆ ಲೇಸು. ನಿತ್ಯಸ್ನಾನ, 2 ದಿನಕ್ಕೆ ಮೈ ಮರ್ದನ, 3 ಕಾಲಾ ಹೂಸೋಣ, 7 ದಿವಸಕ್ಕೆ ದಂತಧಾವನ, ಪಕ್ಷಕ್ಕೆ ನಖಛೇದನ, ಪಕ್ಷಕ್ಕೆ ವಪನ, ಮಾಸಕ್ಕೆ ಮಲಪ್ರವೃತ್ತಿಯು ಈ ಪ್ರಕಾರ ಮಾಡಲು ಲೇಸು.

ಸ್ತ್ರೀಸಂಭೋಗ: ದುರ್ವ್ಯಾಳಿ, ದುಷ್ಟರೋಗಿಯರ, ರಜಸ್ವಿಯಾದವರ, ಕುಲಹೀನೆಯರ, ತನಗಿಂತ ಹಿರಿಯರ, ಅಧಿಕ ಪ್ರಿಯರುಳ್ಳವಳ, ಇನಿತೇ ವಿರುದ್ಧ ಕಾಲ ಮೃತ್ಯುವಕ್ಕು. ಚಿತ್ತಕಾನಂದಕಾರಿಯುಂ, ಪಂಚೇಂದ್ರಿಯಕ್ಕೆ ಭೋಗಾನಂದವ ಕೊಡಲು ಬಲ್ಲಳುಂ, ಅನುಕೂಲೆಯುಂ, ಕುಲಾಚಾರವಾಲಿಯುಂ, ನಿರ್ಮಲಾಂಗಿಯುಂ, ತುಂಗಸ್ತನೆಯುಂ, ಕೋಮಲಾಂಗಿಯುಂ ಪ್ರಕುಲಸ್ತ್ರೀಯರುಗಳಂ ಭೋಗಿಸಲು ಮಾಂಸವರ್ಧನಕ್ಕೆ ಕಾರಣ. ಪುರುಷನು ಸೌಮ್ಯನಾದವನು, ಸೌಭಾಗ್ಯವಂತನಾದವನು, ಪ್ರಸನ್ನಚಿತ್ತದಯಾಪರನು, ಕಾಮಕ್ರೀಡಾಪರನು, ಧೈರ್ಯವಂತ, ಶ್ರಿಂಗಾರವಂತ, ದೇವಗುರುಭಕ್ತಿವಂತ, ಇಷ್ಟಜನಪರಿವೇಷ್ಟಿತ, ವಂಶವರ್ಧನಕ್ಕೆ ಕಾರಣಾ. ಗ್ರೀಷ್ಮ ಕಾಲದಲ್ಲಿ ಬಿಲ್ಲ ಅಣಿಲೆ, ವರ್ಷಕಾಲದಲ್ಲಿ ಅಜವಾನ ಅಣಿಲೆ, ಶರತ್ಕಾಲದಲ್ಲಿ ಸಕ್ಕರೆ ಅಣಿಲೆ, ಹಿಮಂತಕಾಲದಲ್ಲಿ ಅಲ್ಲ ಅಣಿಲೆ, ಶಿಶಿರಕಾಲದಲ್ಲಿ ಹಿಪ್ಪಲಿ ಅಣಿಲೆ, ವಸಂತಕಾಲದಲ್ಲಿ ಖರ್ಜೂರ ಅಣಿಲೆ ಇಂತು ಪೇಳ್ದ ಕ್ರಮದಲ್ಲಿ ಷಡ್ರುತುವಿನಲ್ಲಿ ಅಣಿಲೆಯ ಸೇವಿಸಲು ಕಲ್ಯಾಣಶರೀರ,

ದೀರ್ಘಾಯುಃ. ಇದು ಜಗದೇವವಿರಚಿತ ವೈದ್ಯದೊಳಗಣ ಅನುಪಾನ ಭೋಗ ಪ್ರಕರಣ.

ಇನ್ನು ವಮನಕ್ಕೆ ವಿಧಾನಮಂ ಪೇಳ್ವೆ : ಜ್ವರದ ಮೊದಲು, ಅತಿಸಾರದ ಮೊದಲು, ಕೆಳಗೆ ನಡವ ರಕ್ತಪಿತ್ತದಲ್ಲಿ, ಕ್ಷಯರೋಗಿಗೆ ಕುಷ್ಟರೋಗ, ಪ್ರಮೇಹ, ಗಂಡಮಾಲೆ, ಮರುಳಗೊಂಡವಂಗೆ, ಕೆಮ್ಮು , ಶ್ವಾಸ, ಪಿತ್ತಬಿಕ್ಕು ಗಳಿಗೆ, ಮೊಳಿಯ ರೋಗ, ಮುಖರೋಗ, ಕೊರಳರೋಗ, ಇಂಥವರಿಗೆ ಔಷದ ಮಾಡುವಾಗ್ಗೆ ಮೊದಲಲ್ಲಿ ವಮನಮಾಡಿಸಿಕೊಡುವದು. ಇನ್ನು ವಮನ ಮಾಡಲಾಗದವರಾರೆಂದರೆ–ಗರ್ಭಿಣಿ, ಅತಿಕಃಸಾರದೇಹಿ, ಅತಿಹಸಿವಿವುಳ್ಳಾತಗೆ, ಬಾಲಗೆ, ವೃದ್ಧಗೆ, ಸ್ಥೂಲಕಾಯಗೆ, ಎದಿಯಲ್ಲಿ ರೋಗವುಳ್ಳವಗೆ, ಎದೆವಡದ ರಕ್ತ ನಡವವಗೆ, ಛರ್ದಿಯಾಹಂಗೆ, ತಿಮಿರವುಳ್ಳವಂಗೆ, ಕ್ರಿಮಿವುಳ್ಳವಂಗೆ, ಧ್ವನಿ ಗೆಟ್ಟವನಿಗೆ, ಮೂತ್ರಕೃಛ್ರವುಳ್ಳವಗೆ, ವಾತದವನಿಗೆ, ಗುಲ್ಮದವಂಗೆ, ಇಂತಿ ವರಷ್ಟರಿಗು ವಮನ ಮಾಡಿಸಲಾಗದು. ವಿಷದೋಷ, ಕೈಮುಸಕ್ಕೆ, ಅಜೀರ್ಣ, ಇವರು ಮಾಡಬಹುದು.

ಮತ್ತೆ, ವಮನವಾಗೋದಕ್ಕೆ : ಅಂಕಲಿಯಬೇರು, ಬೋನಗಾರಿಯ ಬೀಜ, ಹಿಪ್ಪಲಿ ಬಿಸಿನೀರಲ್ಲಿ ಕುಡಿಯೆ ವಮನವಕ್ಕುಂ.

ಗಂಡಮಾಲಿಗೆ ಔಷಧ : ಎಳ್ಳಯಂಣಿವಳಗೆ ಗಿಣಿಮೂಗಿನ ಗಡ್ಡಿಯನ್ನು ಸಂಣಭಾಗ ಮಾಡಿ ಹಾಕಿ ಒಂದು ತಿಂಗಳಿರಿಸಿ ಅಕ್ಕಿಯೊಳಗೆ ಕಡ್ಲಿಬ್ಯಾಳಿ ಹಾಕಿ ಅನ್ನವ ಮಾಡಿ ಮೇಲೆ ಹೇಳಿದ ಎಂಣಿಯ ಸಂಗಡ ಉಣಬೇಕು. ಗಂಡಮಾಲಿ ಮಾಣ್ಗು. ಮತ್ತೆ ಹುಲಗಲಯಲಿ, ಸಾಸಿವಿ, ವಡಾಗರವುಪ್ಪು, ಸಮಾನ ಸಂಣನಾಗಿ ಅರೆದು ಮೂರು ದಿವಸ ಹಚ್ಚಲು ಎಂಥಾ ಗಂಡಮಾಲಿ ಆದಾಗ್ಯೂ ವಡದು ಗಂಟುಗರಗುವದು.

ಗಂಡಮಾಲೆಗೆ : ಹುಲಗಿಲಯಂಣಿ ವ ಹುಲಗಿಲಹಿಂಡಿ ಸಹಿತ ಹುಂಣಿಗೆ ಕಟ್ಟಲು 15 ದಿವಸಕ್ಕೆ ಎಂಥಾ ಗಂಡಮಾಲಿಯಾದಾಗ್ಯೂ ಒಡದು ಮಾವದು. ಮತ್ತೆ, ಭಂಗಿಯಬೀಜ, ಸಾಸವಿ, ನುಗ್ಗಿಯಬೀಜ, ಮುಲಂಗಿಯಬೀಜ, ಮದ್ದ ಗುಣಕೆಯಬೀಜ, ಇವನ್ನರೆದು ಪೂಸಲು ಗ್ರಂಥಿ ಗಂಡಮಾಲೆ ಮಾಣ್ಗು. ಮತ್ತೆ, ಯಕ್ಕಿಹಾಲು ಪೂಸಿ ಕಳ್ಳಿಯ ಕೊನೆ, ಎಕ್ಕಿಯ ಕೊನೆ, ಸಂಣಾಗಿ ಅರೆದು, ಮೇಲೆ ಕಟ್ಟಲು ಮೃದುವಾಗಿ ಕರಗಿ ಹೋಗುವದು,

ಗಜಕರ್ಣಕ್ಕೆ : ಕುರಟಿಗನ ಬೇರು ನಿಂಬಿರಸದೊಳಗೆ ತೇದು ಗಜ ಕರ್ಣಕ್ಕೆ ಹಚ್ಚಲು ಪರಿಹಾರವಾಗುವದು, ಸಂಶಯವಿಲ್ಲಾ. ಮತ್ತೆ ಮುತ್ತಲ ಬೀಜ ನಿಂಬೆರಸದಲ್ಲಿ ತೇದು ಹಚ್ಚಲು ಗಜಕರ್ಣ ಮಾಣ್ಗು.

ವಮನಕ್ಕೆ : ಯಾಲಕ್ಕಿ 2 ಗದ್ಯಾಣ ಅಂಬಿಲದಲ್ಲಿ ಅರೆದು ಕುಡಿಯಲು ವಮನ ನಾಶವಹುದು.

ಸಾರಣಿಗೆ : ಜಾಪಾಳ ಬೀಜದ ತಿರಳು 1 ಗದ್ಯಾಣ, ಮೆಣಸು 1 ಗ, ಇವಂ ಮರ್ದಿಸಿ ಬೆಂಣೆಯಲ್ಲಿರಿಸಿ ಹೊಕ್ಕಳಿಗೆ ಲೇಪನವ ಮಾಡಲು ಸಾರಣಿ ಯಾಗುವದು. ಮತ್ತೆ, ಅಮರದ ಬಳ್ಳಿಯು ಬೇರು, ಅಂಬಿಲದಲ್ಲಿ ಅರೆದು ನೀರಲ್ಲಿ ಕುಡಿಯಲು, ಕುಡಿದವರು ನೀರು ಕಾರುವರು.

ಸುಂಬಳಕಾರ ತಿಂದವರಿಗೆ : ಎಮ್ಮಿ ಶೆಗಣಿಯು ರಸ ಯಾಲಕ್ಕಿ 1 ಗ, ಪುಡಿ ಹಾಕಿ ಕುಡಿಯಲು ನಿರ್ವಿಷವು. ಮತ್ತೆ, ಅರದಾಳ ತಿಂದವರಿಗೆ ಚೊಗಚಿಯು ರಸ ನಿರ್ವಿಷವು. ಮತ್ತೆ, ಯಕ್ಕಿಯು ಹಾಲು ಕುಡಿದವರಿಗೆ ಬೆಂಣೆ ತಿಂದರೆ ನಿರ್ವಿಷವು. ಮತ್ತೆ ಅಫು ತಿಂದವರಿಗೆ ಅಲ್ಲದ ರಸ ಅರ್ಧಗದ್ಯಾಣ ನಿರ್ವಿಷವು.

ಮದ್ದಿಗೆ : ವಿಟ್ಟಲ ಬೇರಿನ ವಳನಾರು ಹಿಡಿತುಂಬ ಕುಟ್ಟಿ ಪುಡಿ ಮಾಡಿ ನೀರಲ್ಲಿ ಕೊಡಲು ವಾಂತಿ ಆದೀತು ; ಆಗದಿದ್ದರೆ, ಮದ್ದು ಬೀಳದಿದ್ದರೆ, ಹಾಲಲ್ಲಿ ನೀರಲ್ಲಿ ನುಚ್ಚನ್ನು ಕಾಸಿ ಗಂಜಿಯು ಕೊಳ್ಳಲು ವಾಂತಿಯಾಗಿ ಗಂಜಿಯು ಸಂಗಡ ಮದ್ದು ಬೀಳುವದು.

ಉರಿಮೂತ್ರಕ್ಕೆ : ಬೆಂಡಿಯು ಬೇರಿನ ರಸ 9 ಗದ್ಯಾಣ, ಸಕ್ಕರಿ 4 ಗ, ಇದಂ ಕೊಳ್ಳಲು ಉರಿಮೂತ್ರನಡವದು ಮಾಣ್ಗು.

ಬಹುಮೂತ್ರಕ್ಕೆ : ಮೊಸರಕಳಲ ಶುಂಠಿಯುಚೂರ್ಣ 3 ಗದ್ಯಾಣ ಕೊಂಬುವದು. ಬಹುಮೂತ್ರ ಮಾಣ್ಗು ಮತ್ತೆ, ಅಣಲಿಕಾಯಿ ಚೂರ್ಣಮಂ ಮಾಡಿ ತಿಲತೈಲದಿ ಕಲಸಿ ಮೆಲ್ಲಲು, ಬಿಸಿನೀರು ಕುಡಿಯಲು ಬಹುಮೂತ್ರ ಮಾಣ್ಗು. ಮತ್ತೆ, ಲೋಳಿಸರದ ತಿರಳು ಅಣಲಿಕಾಯಿ ಚೂರ್ಣ ಮೊಸರಲ್ಲಿ ಕಲಸಿ ಕುಡಿಯಲು ಬಹುಮೂತ್ರ ಮಾಣ್ಗು.

ಕಟ್ಟುಮೂತ್ರಕ್ಕೆ : ಅವರೆಯು ರಸ ಸಕ್ಕರೆವೆರಸಿ ಕುಡಿಯಲು ಕಟ್ಟು ಮೂತ್ರ ಬಿಡುವದು. ಮತ್ತೆ, ಶಿಲ್ಕುಮೂತ್ರಕ್ಕೆ, ಮಲ ಮೂತ್ರಕ್ಕೆ, ಕುಪ್ಪೆಯು ಬೇರು, ವಡೆನೆ ಬೇರು, ಅಂಬಿಲದಲ್ಲಿ ಅರೆದು ಅಂಗೈ, ಅಂಗಾಲಿಗೆ ಪೂಸಲು

ಶಿಲ್ಕುಮೂತ್ರ, ಮಲಮೂತ್ರ ಮಾಣ್ಬ್ಗ. ಮತ್ತೆ ಉರಿಮೂತ್ರಕ್ಕೆ-ಅವರಿಯ ಬೀಜ, ಸಕ್ಕರೆ ಸಮನಾಗಿ ಅರೆದು ಹಳೇನೀರಲ್ಲಿ ಕೊಳ್ಳಲು ಬಹುಮೂತ್ರ ಮಾಣ್ಬ್ಗ. ಮತ್ತೆ, ಉರಿಮೂತ್ರಕ್ಕೆ ವೃಂದಾವನದೊಳಗಣ ಮೃತ್ತಿಕೆ, ಕವಳೀ ಕಾಯುಷ್ಟು, ಗುಳಿಗೆಯ ಮಾಡಿ ನಾಭಿಯಲ್ಲಿಡುವದು, ತನ್ನ ಪ್ರಜಾಪತಿ ಚೇತನದ ಪ್ರತಿ ಪ್ರಮಾಣ ಖಡ್ಡಿ ಅಳತಿ ಮುರದು ಬಲದ ಕಿವಿಯಲ್ಲಿಡಲು ಉರಿಮೂತ್ರ ಮಾಣ್ಬ್ಗ. ಮತ್ತೆ ಮೂತ್ರಕಟ್ಟಿದರೆ—ಇಲಿಯ ಹಿಕ್ಕಿ ಕರ್ಪೂರವನ್ನು ಉನ್ಮತ್ತದ ಹೂವಿನೊಳಗೆ ಹಾಕಿ ಶಿಶ್ನಕ್ಕೆ ಹಚ್ಚಿ ಏರಿಸಿ ತೆಗಿಯಲು ಮೂತ್ರ ಬಿಡುವದು. ಮತ್ತೆ ಬಾಳೆ ಸೊಪ್ಪಿನ ರಸ, ಸಕ್ಕರೆ, ಯಳೆತೆಂಗಿನ ನೀರು, ಇವುಗಳ ಸಂಗಡ ಕುಡಿಸಲು ಕಲ್ಲು ಬೀಳುವದು. ಮತ್ತೆ, ಉರಿದು ತೊಳ ಸೋದಕ್ಕೆ ತ್ರಿಫಲವನರೆದು ಕುಡಿಯಲು ಉರಿದು ತೊಳಸೋದು ವೈಹಾದದ್ದು ಮಾಣ್ಬ್ಗ.

ನೆತ್ತರ ಕಾರುವದಕ್ಕೆ: ಉತ್ತರಾಣಿ ಹಳೇ ನೀರಲ್ಲಿ ಅರೆದು ಕುಡಿಯೆ ನೆತ್ತರಕಾರುವದು ಮಾಣ್ಬ್ಗ.

ಉರಿಮೂತ್ರಕ್ಕೆ: ತಾರಿಯಲಿ ಹಸಿಯ ಹಾಲಲ್ಲಿ ಕೊಳ್ಳಲು ಉರಿಮೂತ್ರ ಹರವು. ಮತ್ತೆ, ಮಲಮೂತ್ರ ಕಟ್ಟಿದರೆ—ಪೂರ್ವದಿಕ್ಕಿಗೆ ಹೋದ ಕಳ್ಳಿಯ ಬೇರು ತಂದು ಬಿಸಿ ಮಾಡಿ ಅದನ್ನ ಕುಟ್ಟಿ ರಸಾ ತೆಗಿದು ಆ ರಸವನ್ನು ಬೆನ್ನ ಹುರಿಗೆ ತಿಕ್ಕಿದರೆ ಮಲಮೂತ್ರ ಪರಿಹಾರ. ಬೇರನ್ನು ಪೂಜಾದಿಂದ ಧೂಪವ ಹಾಕಿ ನಮಸ್ಕರಿಸಿ ತರುವದು.

ಮೂತ್ರಚಿಕಿತ್ಸಾ: ಅಮರದ ಬಳ್ಳಿಯ ರಸದಲ್ಲಿ ಯಾಲಕ್ಕಿ ಚೂರ್ಣವ ಹಾಕಿ ಕೊಡುವದು. ಮತ್ತೆ ತೆಂಗಿನಕಾಯಿ ಎಳೇನೀರು, ಚಿಲ್ಲಬೀಜಪುಡಿ ಮಾಡಿ ಯಾಲಕ್ಕಿ ಪುಡಿ, ಸಕ್ಕರಿ, ಈ ಮೂರು ಅರೆದು ಕುಡಿದರೆ ಮೂತ್ರಕೃಛ್ರ ಪರಿಹಾರ. ಮತ್ತೆ ಉತ್ರಾಣಿಯ ಬೇರು ಬಿಸಿ ನೀರಲ್ಲಿ ಅರೆದು ಕುಡಿಯಲು ಮೂತ್ರಬಾಧೆ ನಾಶ. ಮತ್ತೆ ಶ್ರೀಗಂಧ, ಬೆಲ್ಲ, ನೆಬಲವರಿ, ಸೂನ್ನಿಕಾಂಪಿ, ಶಾವಂತಿಯ ಬೀಜ, ಇವನ್ನು ಅರೆದು ಆಕಳ ಹಾಲಿನೊಳಗೆ ಕೊಡುವದು, ಮೂತ್ರದೋಷ ನಾಶ. ಮತ್ತೆ ಶಾವಂತಿ ಬೀಜವನ್ನು ಸೈಂಧವವನ್ನು ಅಂಬಿ ಹಳದಿ ಕೂಡಿ ಕುಡಿಯಲು ನಾಶ. ಮತ್ತೆ ಅಂದರೆ ಹೂವು, ಮೊಸರು, ಎಂಣಿ ಹಚ್ಚಿ, ವಣಗಿಶಿ, ಚೂರ್ಣ ಮಾಡಿ ತಕ್ಕೊಂಬುವದು. ಮತ್ತೆ ಹೊನ್ನವರಿ

ಸಮೂಲ ಇದರ ಭಸ್ಮ ಉದಕದಲ್ಲಿ ತಕ್ಕೊಂಬುವದು. ಮತ್ತೆ ಹಂಣು ಒಣಗಿಸಿ ಪುಡಿಮಾಡಿ ವಸ್ತ್ರಗಳಿತ ಮಾಡಿ ಹಳೇ ನೀರೊಳಗೆ ಕುಡಿಸೋದು. ಮೂತ್ರ ಸಾಫ ಆದೀತು. ಮತ್ತೆ ಮಾವಿನ ಅಂಟು, ಅಶ್ವತ್ಥ, ನೀರಲ, ಅತ್ತಿ, ಇವುಗಳ ರಸವ ತೆಗೆದು ಸಮ ಸಕ್ಕರೆ ಕೂಡಿಸಿ ತೆಕ್ಕೊಂಬುವದು. ಮತ್ತೆ ಶಾವಂತಿಗಿ ಬೀಜ, ಗಣಜಲಿಬೇರು, ನೆಗ್ಗಿಲಮುಳ್ಳು, ಚಿಲ್ಲಬೀಜ, ಇಸಬಗೋಲು, ಕಿರಕಸಾಲಿ ಬೇರು, ಹಿಟ್ಟಲಕ್ಕಿಬೇರು, ರವಚಿನ್ನಿ, ಸೋರುಪ್ಪು, ಪುಡಿಮಾಡಿ ಆಕಳಮಜ್ಜಿಗೆ 1 ಶೇರು, ಇದರಲ್ಲಿ ಕದಡಿ ಕೊಟ್ಟರೆ ಮೂತ್ರ ಪ್ರವಾಹ ನಿಲ್ಲುವದು. ಮತ್ತೆ, ಮೂರು ದಿವಸದ್ದು ಅಥವಾ ಬಹಳ ದಿವಸದ್ದು ಇದ್ದರೆ ಬಸಳಿಯ ಸೊಪ್ಪು ನೀರಲ್ಲಿ ಕುದಿಸಿಕೊಡಲು ಬಹುಮೂತ್ರ ಪರಿಹಾರವಾಗುವದು.

ಮೂತ್ರಸ್ಥಳದಲ್ಲಿ ಹರಳು ಇದ್ದರೆ : ಪಾಷಾಣ ಭೇದಿಯ ಬೇರು, ಸುಪಕ್ಷಿಜ್ವರ, ಆಡಿನಹಾಲು, ಸಕ್ಕರಿ ಸಮ ಗೊಂಡು ಕೊಡೋದು. ಅರಿಶಿನ ಪಾಷಾಣ ಬೀಳುವದು. ಮತ್ತೆ ಯಾಲಕ್ಕಿ, ಪಾಷಾಣಭೇದಿ, ಶಿಲಾಧಾತು, ಹಿಪ್ಪಲಿ, ಸಮ ಹಾಕಿ ಕಚ್ಚಿನಲ್ಲಿ ಅರೆದು ಕೊಡೋದು. ಮತ್ತೆ ಮೂತ್ರ ಪ್ರಮೇಹಕ್ಕೆ ಪಾಷಾಣಭೇದಿಯ ಬೇರು, ತೊಟ್ಟಲಬೇರು ಅಳ್ಳಿಕಾಯಿ ಸಮ ಗೂಡಿ ಹಾಲೊಳಗೆ ಕಲಸಿ ಕುಡಿಯಲು ನಾಶ. ಮತ್ತೆ ಉರಿಮೂತ್ರಕ್ಕೆ— ಕಸಬಿಯ ತಿಳಲು ಅಕ್ಕಿಕಚ್ಚಿನಲ್ಲಿ ಅರೆದು ಕುಡಿಸಲು ನಾಶ. ಮತ್ತೆ ರಕ್ತ ಮೂತ್ರಕ್ಕೆ - ರುದಂತಿ ಹಾಲು ಸಕ್ಕರೆ ಬೆರಸಿ ಕುಡಿಯಲು ಕಟ್ಟುಮೂತ್ರ, ರಕ್ತ ಮೂತ್ರ ನಾಶ.

ಮತ್ತೆ ಶಿಲ್ಕುಮೂತ್ರಕ್ಕೆ : ಬೆಳ್ಳುಳ್ಳಿಯ ಬೇರು, ಅಂಬಿಲದಲ್ಲಿ ಅರೆದು ಕುಡಿಸಲು ಪರಿಹಾರ. ಮತ್ತೆ ಉರಿಮೂತ್ರಕ್ಕೆ—ಅವರಿ ಮುಗಳು, ಯಮ್ಮಿ ಮಜ್ಜಿಗೆಯಲ್ಲಿ ಅರೆದು ಕುಡಿಯಲು ಪರಿಹಾರ. ಮತ್ತೆ ಮೇಹಮೂತ್ರಕ್ಕೆ— ತೊಗರಿಯಬೇರು, ಕಾಯಿ ಅರೆದು ಕುಡಿಯಲು ಪರಿಹಾರ. ಮೂತ್ರಸ್ಥಾನದಲ್ಲಿ ಕಲ್ಲು ಇದ್ದರೂ ಸಹಾ ಬೀಳುವವು. ಮತ್ತೆ, ಶುಕ್ಲಮೂತ್ರಕ್ಕೆ—ನೆಗ್ಗಿಲ ಸಮೂಲ ಸಕ್ಕರಿ ಕೂಡಿಸಿ ಕುಡಿಯಲು ಪರಿಹಾರ. ಮತ್ತೆ ಮಲಮೂತ್ರಕ್ಕೆ- ಅಲ್ಲದ ರಸದಲ್ಲಿ ಯಂಣಿ ಹಣ ತೂಕ ಮಿಶ್ರಮಾಡಿ ಕುಡಿಯಲು ಪರಿಹಾರ ವಾಗೋದು.

ಉರಿಮೂತ್ರಕ್ಕೆ : ಹೊನ್ನಗನ್ನಿಯ ಬೇರು, ಅಸಡಿಯ ಬೇರು, ಸಮ ಅರೆದು ಆಡಿನ ಹಾಲಲ್ಲಿ ಕುಡಿಯಲು ಪರಿಹಾರ. ಮತ್ತೆ ಶಿಲ್ಕು ಮೂತ್ರಕ್ಕೆ, ಕುಸುಬಿಯ ಬೇರು ಥಂಣೀರೊಳಗೆ ಅರೆದು ಕುಡಿಯಲು ನಾಶ. ಮಲ ಮೂತ್ರಕ್ಕೆ—ಕಿರಕಸಾಲಿ ಸಮೂಲ ಮುಷ್ಟಿ ಒಂದು, ಯಾಲಕ್ಕಿ, ಸಕ್ಕರೆ ಅರೆದು ರಾಡಿಮಾಡಿ ಕುಡಿಯಲು ಮಲಮೂತ್ರ ಸಾಫ ಆಗುವದು. ಮೂತ್ರ ಸಾರಣಿಗೆ ರೇವಚಿನ್ನಿ 1 ದುಡ್ಡುತೂಕ, ಗೋರುಪ್ಪು 1 ದುಡ್ಡುತೂಕ, ಕಲ್ಲು ಸಕ್ಕರಿ ಕಾಲಪಿ ಇದನ್ನ ಕಷಾಯ ಮಾಡಿ ಕೊಡುವದು. ಮತ್ತೆ ಸಣಬಿನ ಬೀಜ 1 ಪೈ ತೂಕ, ದೀಪದ್ರಾಕ್ಷಿ 1 ದುಡ್ಡು ತೂಕ, ಗೊಳಗೊಳಕಿಬೀಜ 1 ದುಡ್ಡು ತೂಕ, ಈ ಕಷಾಯ ಮಾಡಿ, ಅದರಲ್ಲಿ ಸೋರುಪ್ಪು ರುವಿತೂಕ ಹಾಕಿಕೊಡುವದು. ಮೂತ್ರಸಾರಣಿ ಆದೀತು, ಮತ್ತೆ ಇಲಿಹಿಕ್ಕಿ ಅರೆದು ಹೊಕ್ಕಳಿಗೆ ಹಚ್ಚುವದು. ಮೂಗ್ಗೆ ಕೊಳಂಜನವ ಹಚ್ಚುವದು, ಆ ಕ್ಷಣಕ್ಕೆ ಮೂತ್ರ ಪ್ರವಾಹ ಆಗುವದು. ಮಲಮೂತ್ರ ಕಟ್ಟಿ ಬಗೇಂದ್ರಿಯಾದರೆ—ಲಕ್ಕಿಯ ತೋಟಿ ಮುಷ್ಟಿಯ ತಂದು ಕಡಬತ್ತೆನಲ್ಲಿ ಸಣ್ಣವಾಗಿ ಅರೆದು ಮಜ್ಜಿಗೆ ಯಲ್ಲಿ ಕಲಸಿ ಕೊಡೋದು. ಮೂತ್ರ ಸ್ಥಾನದಲ್ಲಿ ಹರಳು ಇದ್ದಾಗ್ಯೂ ಬೀಳು ವವು. ಇದರಂತೆ 1 ಸಪ್ತಕ ತಕೋಬೇಕು. ಪಥ್ಯ ನಂಜಿನ ಪದಾರ್ಥ ಬಿಡು ವದು. ಅಂದರೆ ಬಗೇಂದ್ರಿ ಮಾಯುವದು. ಮತ್ತೆ ಅತಿಮೂತ್ರಕ್ಕೆ—ಹೊನ್ನ ವರಿ ಹೂವಿನ ವಳಗಣ ಅಕ್ಕಿ 1 ದುಡ್ಡು ತೂಕ ಮಜ್ಜಿಗೆಯಲ್ಲಿ ಅರೆದು ಕುಡಿಸು ವದು. ಮೂತ್ರ ಒಂದೇ ದಿನಕ್ಕೆ ನಿಲ್ಲುವದು. ಮತ್ತೆ ಮೂತ್ರ ಕಟ್ಟಿದರೆ—ಮೂಲಂಗಿಯ ತಿಂದರೆ ಮೂತ್ರವಾಗುವದು. ಮತ್ತು ಸೋರುಪ್ಪು ಅರೆದು ನೀರೊಳಗೆ ಕಲಸಿ ಹೊಕ್ಕಳಿಗೆ ಹಚ್ಚಿದರೆ ಮೂತ್ರವಾಗುವದು.

ಉರಿಮೂತ್ರಕ್ಕೆ : ನೆಲದಾಳಿಗಡ್ಡಿ ನಿಂಬಿರಸದಲ್ಲಿ ಅರೆದು ಸಕ್ಕರಿ ವೆರಸಿ ಕುಡಿಸುವದು. ಉರಿಮೂತ್ರ ಪರಿಹಾರ. ಮತ್ತೆ ಸಂವತಿ ಬೀಜ ನೀರಲ್ಲಿ ಅರೆದು ಕುಡಿಯಲು ಉರಿಮೂತ್ರ ಮಾಣ್ಗು.

ಹುಡುಗರ ಹೊಟ್ಟೆ ಉಬ್ಬಿದರೆ : ಮಲಮೂತ್ರವಾದರೆ ಬೆಳ್ಳುಳ್ಳಿಯ ನರೆದು ಮೊಲಿಹಾಲೊಳಗೆ ಮರಳಿಸಿ ಹಾಕಲು ತತ್ಕಾಲ ಮಲಮೂತ್ರವಾದೀತು. ಮತ್ತೆ ಮಲಮೂತ್ರ ಬಂದ್ ಆದರೆ—ಬಾಲಹರಡ ಥಂಣೀರೊಳಗೆ ತೇದು ಕೊಡುವದು. ಬಾಣಂತಿಗೆ ಸಹಿತ ಬರುತ್ತದೆ. ಮತ್ತೆ ಮಲಮೂತ್ರ ಕಟ್ಟಿದ

ವರಿಗೆ ಕಾವಿಯು ಕಲ್ಲು ಬೆಂಣಿಯುವಳಗೆ ಕೊಟ್ಟರೆ ಮಲಮೂತ್ರ ಆಗುವವು.

ಯಾಲಕ್ಕಿ, ಹಿಪ್ಪಲಿ, ಇಷ್ಟಮಧುಕ, ಜೇಷ್ಟಮಧು, ಹಿಟ್ಟಲಕ್ಕಿ, ಇಸಬಗೋಲು, ನೆನಸಿಲು, ಆಡಸೋಗೆ, ಔಡಲ, ಇದರ ಸಮಭಾಗ ಕಷಾಯು ದೊಳಗೆ ಸಕ್ಕರೆ ವೆರಸಿ ಕೊಡಲು ಉರಿಮೂತ್ರ ಮುಂತಾದ ಮೂತ್ರಕೃಛ್ರ ಪರಿಹಾರ.

ಸರ್ವ ಅತಿಸಾರಕ್ಕೆ : ತ್ರಿಕಟುಕ, ಆಲದ ಜಡಿ, ಕೊನೆಯುನರೆದು ಬಿಸಿ ನೀರಿಂದ ಕೊಳ್ಳಲು ಸರ್ವ ಅತಿಸಾರಹರ. ಮತ್ತೆ ಬಜಿ, ಹಿಪ್ಪಲಿ, ಕಿರಗುಳ್ಳ, ಹೆಗ್ಗುಳ್ಳ, ಇವಂ ಅರೆದು ಬಿಸಿನೀರಲ್ಲಿ ಕಲಸಿ ಕೊಳ್ಳಲು ಅತಿಸಾರಹರ. ಮತ್ತೆ ಹಸರಾಣಿಯು ರಸ ನೆಲ್ಲಿಯು ಚೆಟ್ಟು ಮೊಸರಲ್ಲಿ ಕೊಳ್ಳಲು ಶ್ಲೇಷ್ಮಾತಿಸಾರಹರ.

ಮತ್ತೆ, ಸುಖಸಾರಿಣಿಗೆ : 3 ಅವುಡಲ ಪಳಕು, 3 ಗದ್ಯಾಣ ಎಳ್ಳು, ಎರಡನ್ನು ಅರೆದು ತುಪ್ಪದಲ್ಲಿ ಕುಡಿಯೆ ಅಥವಾ ಕೆಳಗೆ ವೆರಗಲೆ, ತುಪ್ಪ ಹಾಕಿ ಮಧ್ಯದಲ್ಲಿ ನುಂಗಲು ಸುಖಸಾರಣಿ ಹರ.

ರಕ್ತ ಆಂವ್ಲ ಬೀಳೋದಕ್ಕೆ : ಬೆಂಣಿಯನ್ನು ಕರಗಲಿಕ್ಕೆ ಇಟ್ಟ ಕರಗೋ ಕಾಲಕ್ಕೆ ಅದರೊಳಗೆ ಅರ್ಧ ಜಾಜೀಕಾಯಿ ಪುಡಿಮಾಡಿ ಹಾಕೋದು. ತುಪ್ಪ ಇಳದ ಮೇಲೆ ಮೂರು ದಿನ ಕೊಡುವದು. ರಕ್ತ ಆಮ್ಲ ಬಂದ್ ಆಗು ವದು. ಮತ್ತು ಸಾರಣಿಗೆ—ಆದಿತ್ಯವಾರ ಮೂಲಿಕಾ ಪೂಜೆಮಾಡಿ ಬಿಳಿ ದಾಶಾಳ ತಾಟೆ, ಕಿರಿನೆಲ್ಲಿ ಎರಡು ಮುಷ್ಟಿ, ಮಜ್ಜಿಗೆಯಿಂ ಅರೆದು, ಶೋಧಿಸಿ ಕುಡಿಸೋದು, ಸಾರಣಿ ಆಗೋದು.

ಜಂತಾಗಿ ಹೊಟ್ಟೆ ನೊಂದರೆ : ಶೇರು 10, ಶುಂಠಿ 1 ಪೈ ತೂಕ, ಮೆಣಸು 1 ಪೈ ತೂಕ, ಅಜಿವಾನ 1 ಪೈ ತೂಕ, ಈ 4 ಜೀನಸು ಕೂಡಿ ಪಾವ ಶೇರು ಆಕಳ ಬೆಂಣಿಯೊಳಗೆ ಕೇರು ಕತ್ತರಿಸಿ ಹಾಕುವದು ; ತುಪ್ಪ ಆಗುವ ಸಮಯುದಲ್ಲಿ ಬಾಕಿ ಮೂರು ಜೀನಸು ಪುಡಿ ಹಾಕಿ ಅದರೊಳಗೆ ನವಪಾಕ ಬೆಲ್ಲ ಹಾಕಿ ಕೊಡುವದು, ಅಂದರೆ ಜಂತು ನಾಶವಾಗುವದು.

ಹೊಟ್ಟೆ ಝಾಡಿಸಿ ಅನ್ನ ಜೀರ್ಣವಾಗದಿದ್ದರೆ : ಮೆಣಸು 1 ಗ, ಜೀರಗಿ 1 ಗ, ಶುಂಠಿ 1 ಗ, ಇಂಗು 1 ಗ, ನೆಲ್ಲಿಚೆಟ್ಟು 1 ಗ, ಮೆಂಥ್ಯ 1 ಗ ಈ 6 ಜೀನಸು ತುಪ್ಪದೊಳಗೆ ಕರಿದು ಅದರೊಳಗೆ ಸೈಂಧವಲವಣ ಹಾಕಿ ದಿನಂಪ್ರತಿ

ಪ್ರಾತಃಕಾಲಕ್ಕೆ ಮೊಸರು ಬಿಸಿಮಾಡಿ ತಕ್ಕೊಂಬುವದು. ಅನ್ನ ಜೀರ್ಣಕ್ಕೆ ಬಂದು ಹೊಟ್ಟೆ ಝಾಡಿಸುವದು.

ವಾಂತಿಗೆ : ಅಜೀರ್ಣದೋಷದಿಂದ ವಾಂತಿಯಾದರೆ ಅದಕ್ಕೌಷಧ— ಶುಂಠಿ 1 ಗ, ಮೆಣಸು 1 ಗ, ಲವಂಗ, ಕರಿಬೇವು, ನೆಲ್ಲಿಕಾಯಿ, ಈ ಜೀನಸು ಗಳು ಗಡಿಗೆವಳಗೆ ಹಾಕಿ 1 ಶೇರು ನೀರು ಇಟ್ಟು ನವಪಾಕ ಇಳಿಸಿ ತಕ್ಕೊಂಬು ವದು, ಅಜೀರ್ಣ ಪರಿಹಾರ. ಇದಿರು ವಾಕರಿಕಿಗೆ—ಹಿರೆಮದ್ದಿನ ಗಡ್ಡಿ, ಬಜಿ ಎರಡನ್ನು ನೀರೊಳಗೆ ಅರೆದು ಕೊಡುವದು. ಬಾಣಂತಿಗೆ ಸ್ತನಕ್ಕೆ, ಮೈಗೆ ಲೇಪನ ಮಾಡುವದು.

ಮಕ್ಕಳಾಗುವದಕ್ಕೆ : ಇಸರಿಯ ಬೇರು, ಮೂಡಲುವರಿದ ಯಲಿಗಳ್ಳಿಯ ಬೇರು, ಚೂರ್ಣಮಾಡಿ ಗಡಿಗೆಯವಳಗೆ ಹಾಕಿ ಅಂಬಿಲದಲ್ಲಿ ಕೊಳ್ಳಲು ಗರ್ಭ ಮಕ್ಕು. ಮತ್ತೆ ಬ್ರಹ್ಮಿಯ ತೊಪ್ಪಲು, ಮೊರತಂದು ಕಂದಿಸಿ ಕೋಣಬಿಗ್ಗ ಸುರಿವಿ ಶುದ್ಧ ನೀರಲ್ಲಿ ಮಿಂದು ಅದರ ಉಸರ ಯೋನಿಗೆ ಕೊಡಲು ಹುಳಗಳು ಬೀಳುವವು. ಇದು ಸತ್ಯ.

ಕಲಕಿಹೋಗುವ ಗರ್ಭ ನಿಲ್ಲುವದಕ್ಕೆ : ಶೀಗುಡಿಸಿಯ ಸೊಪ್ಪು ಹಿಡಿ ತುಂಬ ತಂದು ಮಣಕದ ಮಜ್ಜಿಗೆಯಿಂದರೆದು ರಜಸ್ವಲಿಯಾದಾರಭ್ಯ ಹನ್ನೆರಡು ದಿವಸ ಕುಡಿಸಲು ಗರ್ಭ ಸ್ಥಿರವಾಗಿ ನಿಲ್ಲುವದು. ಪಥ್ಯ ಹಾಲು, ಅನ್ನ ; ಹುಳಿ, ಉಪ್ಪು, ಸಾಸಿವೆ, ಯಂಣಿ ವರ್ಜ್ಯ. ಮತ್ತೆ ಅಂಕಲೆಯ ಬೇರು, ಬಿಳೆಗಣಜಲಿ ಬೇರು, ಆಕಳಹಾಲು, ತುಪ್ಪ, ಸಕ್ಕರಿ ಸಂಗಡ ಕೊಡಲು ಗರ್ಭ ಸ್ಥಿರಮಕ್ಕು. ಮತ್ತೆ ನೆಲ್ಲಿವಳಬೀಜವನರೆದು ಯಂಣಿಯೊಳು ಕೊಡಲು ಗರ್ಭ ಸ್ಥಿರವಾಗುವದು.

ಬಂಜೆ ಸ್ತ್ರೀಯರಿಗೆ ಸಂತಾನವಾಗುವದಕ್ಕೆ : ಕುರಟಿಗನ ಬೇರು, ಆಕಳ ಹಾಲಿಂದರೆದು ಕುಡಿಸಲು ಗರ್ಭ ನಿಲ್ಲುವದು. ಮತ್ತೆ ಅಗಳ ಶುಂಠಿಯನ್ನು ರಜಸ್ವಲಿಯಾದಾರಭ್ಯಾ ಮೂರು ದಿನ ಹಾಲಿನೊಳಗೆ ಕುಡಿಯಲು ಗರ್ಭ ಮಕ್ಕು. ಮತ್ತೆ ಪುತ್ರಂಜೀವಿಯ ಬೀಜದ ತಿರಳು ಹಾಲೊಳಗೆ ಅರೆದು ರಜ ಸ್ವಲಿಯಾದಾಗ್ಯೆ ಮೂರು ದಿನ ಕೊಡುವದು, ಮತ್ತೆ ಅಶ್ವಗಂಧಿಯ ಚೂರ್ಣ ಆಕಳ ಹಾಲೊಳಗೆ ಕೊಡಬೇಕು. ಮತ್ತೆ ಒಂದೆಲಗನಾಸೊಪ್ಪು, ಹಿಪ್ಪಲಿ, ಹಾಲು, ತುಪ್ಪ, ಜೇನುತುಪ್ಪ, ಸಕ್ಕರಿ ಸಂಗಡ ಮಿಂದಾರಭ್ಯ 7 ದಿನ ಕೊಡಲು

ಗರ್ಭವಾಗುವದು. ಪಥ್ಯ, ಹೆಸರಬ್ಯಾಳೆ ಹಾಕಿದ ಅನ್ನ ; ತುಪ್ಪ ಲವಣಾವ್ಲ ವರ್ಜ್ಯ.

ವ್ಯೈನೆರೆಯೋದಕ್ಕೆ : ಅರಳಿ ಚಕ್ಕಿಯು ರಸವ ತೆಗದು ಕಾಂಚನಪುಡಿ ಹಾಕಿಕೊಡಲು ರಜಸ್ವಲಿಯಕ್ಕುಂ.

ಪ್ರಸೂತವಾಗೋದಕ್ಕೆ : ಗುಗ್ಗಳ, ಹಾಂವಿನಹೆರೆ, ಭುಜಪ್ರತಿ ಈ ಮೂರು ಸಮವಾಗಿ ಯೋನಿಗೆ ಉಗವಕೊಡಲು ಪ್ರಸೂತಿಯಾಹಳು. ಮತ್ತೆ ಗುಲಗಂಜಿಯು ಬೇರು ಅಂಬಿಲದಲ್ಲಿ ಅರೆದು ಹೊಟ್ಟೆಗೆ, ಯೋನಿಗೆ ಪೂಸಲು ಕೂಸು ಬೀಳುವದು.

ಮಕ್ಕಳಾಗುವದಕ್ಕೆ : ಹೆಗ್ಗುಳ್ಳದನಾರು, ಜೇಷ್ಟಮಧು, ಮಂಜಿಷ್ಟ ಸಮಾನಂ ಗೊಂಡು ಪುಡಿಮಾಡಿ ಜೇನುತುಪ್ಪದಲ್ಲಿ ಕಲಸಿ ಅರಿವಿಲಿ ಪಟ್ಟಣ ಕಟ್ಟಿ 3 ದಿನ ಯೋನಿಯಲ್ಲಿ ಇಕ್ಕಿ ತೆಗಿದರೆ ಬೀಜವ ತಿಂಬೋ ಹುಳಗಳು ಹತ್ತಿ ಬಾಹೋವು.

ಪ್ರಸೂತವಾಗಬೇಕಾದರೆ : ನಷ್ಟಮಧುಕ, ಥಂಣೀರೊಳಗೆ ಅರೆದು ಒಂದೇ ಬಣ್ಣದ ಆಕಳ ಹಾಲಲ್ಲಿ ಕಲಸಿ ಕುಡಿಸೋದು ; ಜನನವಾಗೋದು. ಮತ್ತೆ ಸಕ್ಕರಿ, ನೀಲೋತ್ಪಲಪುಷ್ಪ, ಹೆಸರು, ಮೊಸರು, ನೀರಲ್ಲಿ ಒಂದೇ ಬಂಣದ ಆಕಳಹಾಲೊಳಗೆ ಕುಡಿಸಲು ಜನನವಾಗೋದು. ಮತ್ತೆ ನಾಗಲೀಕನ ಗಡ್ಡೆ, ಜೇನುತುಪ್ಪದಲ್ಲಿ ಅರೆದು ಹೊಕ್ಕಳಿಗೆ ಇಳೀಪೂಸೆ ಶೀಘ್ರ ಜನನ ವಾಗೋದು. ಮತ್ತೆ ನೆಗ್ಗಿಲಬೇರು ಅಂಬಿಲದಲ್ಲಿ ಅರೆದು ಅಂಗಾಲಿಗೆ ಹಚ್ಚೋದು. ಅಂದರೆ ಜನನವಾಗೋದು. ಮತ್ತೆ, ಇಂಗು ನೀರಲ್ಲಿ ಅರೆದು ಕುಡಿಯೆ ಜನನವಾಗೋದು. ಮತ್ತೆ ಹಾಂವಮೆಕ್ಕಿಯಬೇರು ಅಂಬಿಲದಲ್ಲಿ ಅರೆದು ಯೋನಿಗೆ ಪೂಸಲು ಜನನವಾಗೋದು. ಮತ್ತೆ ತೊಟ್ಟಿಲ ಬೇರು ದಕ್ಷಿಣದಿಕ್ಕಿಗೆ ಹೋದದ್ದು ತಂದು ನೀರಲ್ಲಿ ಅರೆದು ಹೊಕ್ಕಳಿಗೆ ಹಚ್ಚೋದು ; ಜನನ. ಮತ್ತೆ ಹೆಂಣು ಕುದುರೆಯು ಲದ್ದಿಯ ರಸ, ಶುಂಠಿ, ಹಿಪ್ಪಲಿ, ತಾರೀ ಕಾಯಿ ಚೂರ್ಣಮಾಡಿ ಬಿಸಿ ನೀರಲ್ಲಿ ಹಾಕಿ ಕುಡಿಸೋದು ; ಜನನವಾಗುವದು.

ಗರ್ಭವಾಗುವದಕ್ಕೆ : ಕುರುಟಿಗನ ಬೇರು ಅಂಬಿಲದಲ್ಲಿ ಅರೆದು ಹಾಲೊಳಗೆ ಕೂಡಿಸಿ, ಯರಕೊಂಡಮೇಲೆ ತಿಂಬೋದು. ಪಥ್ಯ ಹಾಲು, ಅನ್ನ, ಏಳು ದಿವಸ ತಕ್ಕೊಂಬುವದು.

ಗರ್ಭ ನಿಲ್ಲುವದಕ್ಕೆ : ಪಶ್ಚಿಮದಿಕ್ಕಿಗೆ ಹೋದ ಅತ್ತಿಯಬೇರು ಅಂಬಿಲದಲ್ಲಿ ಅರೆದು ಎರಕೊಂಡಮೇಲೆ ಏಳು ದಿವಸ ಕ್ಷೀರದೊಡನೆ ತಕ್ಕೊಂಬುವದು. ಪಥ್ಯ ಹಾಲು, ಅನ್ನ.

ಬಂಜಿಗೆ ಮಕ್ಕಳಾಗುವದಕ್ಕೆ : ಕಾಡಿಗ್ಗರಗಿನ ರಸ, ಯಕ್ಕಿಹಾಲು ಒಂದು ಬಿಂದು ಹಾಕಿ 48 ದಿನ ತಕ್ಕೊಂಡಬಳಿಕ ತಕ್ಕೋಬೇಕು. ಇದರಂತೆ 48 ದಿವಸ ಪತಿಯು ಸಹಿತ ತಕ್ಕೋಬೇಕು, ಗರ್ಭವಾಗುವಳು. ಮತ್ತೆ ಇಪ್ಪೀ ಬೀಜ 3 ತೇದು ಎರಕೊಂಡಬಳಿಕ 7 ದಿನ ತಕ್ಕೊಂಬುವದು, ಗರ್ಭ ನಿಲ್ಲೋದು. ಮತ್ತೆ ಗರ್ಭಕ್ಕೆ—ಲೋಳಿಸರದ ಹಳಕು ಆಕಳ ಹಾಲೊಳಗೆ ಕಡಿಗಾದ ಮೊದಲ ದಿನಾರಭ್ಯ 7 ದಿನ ಔಷಧವ ತಕ್ಕೊಂಡರೆ ಮಕ್ಕಳಾಗುವವು. ಮತ್ತೆ ಮಾಲಿಂಗನ ಬೀಜ ನೆರಳೊಳಗೆ ವಣಗಿಸಿ ಪುಡಿಮಾಡಿ ತುಪ್ಪದೊಳಗೆ ಮರ್ಧಿಸಿ ಎರಕೊಂಡ ಮೇಲೆ 7 ದಿನ ಸೇವಿಸಲು ಮಕ್ಕಳಾಗುವವು, ಸಿದ್ಧಾಂತ.

ಗರ್ಭನಿಲ್ಲೋದಕ್ಕೆ : ನಾಗಕೇಸರ (ಅಂದರೆ ಖಮಾಬಚಿನ್ನಿ) ಚೂರ್ಣವ ಮಾಡಿ, ಸ್ತ್ರೀ ರಜಸ್ವಲಿಯಾದ 3 ದಿವಸದ ಮೇಲೆ ಹಾಲೊಳಗೆ ಪುಡಿಹಾಕಿ ತಕ್ಕೊಂಬುವದು, ಗರ್ಭನಿಲ್ಲುವದು ಸಂದೇಹವಿಲ್ಲ. ಮತ್ತೆ ಗರ್ಭಕ್ಕೆ ಹಿರೇಮದ್ದಿನ ಗಡ್ಡೆ, ಮರುಗ, ಸತಾವು, ಉಪ್ಪು, ಈ ಕಷಾಯ 4 ದಿನ ಮೂರು ಜೀನಸು ಹಾಕಿ ತಕ್ಕೊಳ್ಳಲು ಸ್ತ್ರೀಗೆ ಗಂಡು ಗರ್ಭ ನಿಲ್ಲುವದು ಸಂಶಯವಿಲ್ಲ. ಮತ್ತೆ ಕುರಟಿಗನ ತೊಪ್ಪಲು ಹಾಲೊಳಗೆ ಕುದಿಸಿ ಕೊಡಲು ಗರ್ಭವಾಗುವದು.

ಗರ್ಭಿಣಿ ಹಡಿಯೋದಕ್ಕೆ ಸಂಕಟಪಡುತ್ತಿದ್ದರೆ : ಕೋಷ್ಟ ಹಾಂವಿನ ಪರೆ, ಕೋಳಿ ಕುಕ್ಕನ ಗಿಡ, ಸಾಸಿವಿ, ಈ ನಾಲ್ಕರ ಹೊಗೆ ಯೋನಿಗೆ ಕೊಡಲು ಶೀಘ್ರವಾಗಿ ಹಡಿಯುವಳು. ಮತ್ತೆ ಪ್ರಸೂತವಾಗಬೇಕಾದರೆ ಉತ್ರಾಣಿ, ಹುತ್ತದ ಮಂಣು ಎರಡೂ ಮರ್ದಿಸಿ ಹೆಡತಲಿಗೆ ಕಟ್ಟಲು ತಾತ್ಕಾಲಕ್ಕೆ ಪ್ರಸೂತಿಯಾಹಳು.

ಕೂಸು ಸತ್ತು ಬಿದ್ದರೆ : ಬಿದರಬೇರು ನೀರೊಳಗೆ ಅರೆದು ಬಾಯೊಳಗೆ ಹಾಕುವದು, ಬದುಕೀತು. ಮತ್ತೆ ಪ್ರಸೂತಕ್ಕೆ ಉತ್ರಾಣಿ ಬೇರು ತಲೆಕೆಳಗೆ ಮಾಡಿ ಕಟ್ಟಿದರೆ ಹಡಿವಳು. ಮತ್ತೆ ಕೋಳಿಕುಕ್ಕನ ಗಡ್ಡಿ ನುಗ್ಗಿರಸದಲ್ಲಿ ಅರೆದು ಹೊಕ್ಕಳದ ಕೆಳಗೆ ತೊಡಿಯಲು ಆ ಕ್ಷಣಕ್ಕೆ ಹಡೆವಳು. ಮತ್ತೆ

ನೀರಲದ ಬೇರು ಅಂಬಿಲದಲ್ಲಿ ಅರೆದು ವೈಗೆ ಪೂಸೆ ಅಡ್ಡಬಿದ್ದ ಕೂಸು ನೆಟ್ಟಗೆ ಬರುವದು.

ಮಾಸು ಬೀಳೋದಕ್ಕೆ : ಔಡಲಯಂಣಿಯಲ್ಲಿ ಅಳಲಿಕಾಯಿ, ತಾರಿ ಕಾಯಿ, ನೆಲ್ಲಿಚಿಟ್ಟು ತೇದು ಕುಡಿಸಲು ಮಾಸು ಬೀಳುವದು.

ಹೆಂಗಸರ ವ್ಯಾಧಿಗೆ : ಅಶ್ವಗಂಧಿಯ ಬೇರು, ಔಡಲದ ಬೇರು, ಮಡಿ ವಾಳ ಹಾಗಲದ ಬೇರು, ಗೊರಟೆಯ ಬೇರು, ಸಮ ಪುಡಿಮಾಡಿ ಹಾಲು ಸಕ್ಕರೆವೆರಸಿ ಮುಟ್ಟಾದ ಮೂರು ದಿನದ ಮೇಲೆ ಮುಂದೆ ಏಳು ದಿವಸ ತಕ್ಕೊಂಬುವದು, ಗರ್ಭನಿಲ್ಲುವದು.

ಗರ್ಭಕ್ಕೆ : ನಾಗಕೇಸರದ ಚೂರ್ಣ 3 ಗ, ಆಕಳ ಹಸಿಹಾಲು ಅಚ್ಚೇರು ಎರಕೊಂಡ ಮೂರು ದಿನಕ್ಕೆ ಕೊಡಲು ಮಕ್ಕಳಾಗುವವು. ಇದಕ್ಕೆ ಚೂರ್ಣ– ರಾಯಪುಡಿ ಸಕ್ಕರಿ 1 ಪೈ ತೂಕ, ಶುಂಠಿ 1 ಪೈ ತೂಕ, ಚೂರ್ಣ ಮಾಡಿ ಸಕ್ಕರೆ ಬೆರಸಿ 8 ದಿನ ಸೇವಿಸಲು ದೇಹಪುಷ್ಟಿ ಆದೀತು.

ಹಡಿಯೋದಕ್ಕೆ : ಸೈಂಧವಲವಣ, ಹಿಪ್ಪಲಿ ನೀರಿಂದ ಅರೆದು ಕೊಡು ವದು, ಕೂಸು ಮಾಸಾ ಕೂಡೆ ಬೀಳುವದು. ಮತ್ತೆ ಗರ್ಭಿಣಿಗೆ ಹಸಿವು ಆಗೋದಕ್ಕೆ ಅಜಾವೋದ, ಅಂಗರದ ಬೇರು, ಜೀರಗಿ, ಹಿಪ್ಪಲಿ, ಇವನ್ನು ಸಮಾನಗೊಂಡು, ಜೇನುತುಪ್ಪ ಬೆಲ್ಲದಲ್ಲಿ ಲೇಹ್ಯಮಾಡಿ ಕೊಡುವದು. ಅಂದರೆ ಹಸಿವು ಆಗುವದು.

ಬಾಣಂತಿ ರೋಗಕ್ಕೆ : ಹಾಲಗಡ್ಡೆ, ಆಕಳಹಾಲಲ್ಲಿ ಅರೆದು ಕೊಳ್ಳಲು ಬಾಣಂತಿರೋಗ ಮಾಣ್ಗು.

ಬಾಣಂತಿ ಸನ್ನಿಗೆ : ಅರಿಶಿಣ 1, ಬೇವಿನ ರಸ 1, ಮೆಣಸು 1, ಲವಂಗ 1, ವನಸಿಲಾ 1, ಈ ಸಮಾನ ಚೂರ್ಣ ಮಾಡಿ ಆಡಿನ ಮೂತ್ರದಲ್ಲಿ ಕಂಣಿಗೆ ಹಚ್ಚೋದು, ಅಂದರೆ ಸನ್ನಿ ಇಳಿವದು.

ಬಾಣಂತಿ ಮೊಲೇಲಿ ಹಾಲು ಬೀಳೋದಕ್ಕೆ : ಅಬ್ಬಿಯ ಸಮೂಲ ಆಡಿನ ಹಾಲಲ್ಲಿ ಅರೆದು ಕುಡಿಯಲು ಮೊಲಿಹಾಲು ಹೆಚ್ಚುವದು.

ಹೆಂಗಸರ ಶೋಭಾ ಶೂಲಿಗೆ : ಕಡಿಗೆ ಆದಾಗ್ಯೆ, ಅಲ್ಲದೆ ತಿಂಗಳು ಎರಡು ತಿಂಗಳಿಗೆ ಏಳುತ್ತದೆ, ಅಂಥಾದ್ದಕ್ಕೆ ಶುಂಠಿ 3 ಪೈ ತೂಕ, ಮೆಣಸು 3 ಪೈ ತೂಕ, ಜೀರಿಗೆ 3 ಪೈ ತೂಕ, ಹಿಂಗು 1 ಪೈ ತೂಕ, ಈ ಪ್ರಕಾರ ಜಿನಸು

ಪುಡಿ ಮಾಡಿ ಕಾಡಿಗ್ಗರಗಿನರಸದೊಳಗೆ ಅರೆದು ಗುಳಗಿಯ ಮಾಡಿ ಕೊಟ್ಟರೆ ಶೂಲಿ ನಿಲ್ಲುವದು. ಮತ್ತೆ ವತ್ಸನಾಭಿಯನ್ನು ಹಾಲೊಳಗೆ ಕುದಿಸಿ ಶುದ್ಧಮಾಡಿ ಹಾಕಬೇಕು. ನಂತರ ಚೂರ್ಣಮಾಡಿ, ಅಲ್ಲದ ರಸದೊಳಗೆ ಗುಳಿಗೆ ಮಾಡಿ ಕೊಡಬೇಕು. ನಂಜಿನ ಪದಾರ್ಥ ಬಿಡಬೇಕು. ಇದರ ಹೆಸರು ಶೂಲಿಕುಠಾರ ವೆನಿಸುವದು.

ಬಾಣಂತಿ ರೋಗಕ್ಕೆ : ಈಶ್ವರಿಬೇರು, ತೊಪ್ಪಲ ಸಹಿತ ತಂದು ಒಂಭತ್ತು ಪೈ ತೂಕ ರಸ ಮಾಡಬೇಕು. 3 ತೊಲ ಹಿಪ್ಪಲಿ ಪುಡಿಮಾಡಿ ನಿತ್ಯ 1 ಪೈ ತೂಕ ಪುಡಿ ಆ ರಸದೊಳಗೆ ಹಾಕಿ, ಗುಳಿಗೆಮಾಡಿ ಕೆಳಗೆ ಮ್ಯಾಲೆ ಚಿನ್ನಿ ಸಕ್ಕರಿ ಹಾಕಿ ತಕ್ಕೊಂಡು ಬಿಸಿನೀರು 1 ಗುಟಕು ತಕ್ಕೋಬೇಕು. ಇದ ರಂತೆ 2 ಸಪ್ತಕ ತಕ್ಕೋಬೇಕು. ನಿತ್ಯ ಬಿಸಿನೀರು ಮೈಗೆ ಆಕಳಬೆಂಣಿ ಅಥವಾ ತುಪ್ಪಹಚ್ಚಿ ಸ್ನಾನಮಾಡಬೇಕು. ಪಥ್ಯ : ತುಪ್ಪಅನ್ನ, ಸೈಂಧವಲವಣ ಬೆಳ್ಳೊಳ್ಳಿ, ಮೆಣಸು ತಕ್ಕೋಬೇಕು. ಮತ್ತೆ ಸ್ನಾನಮಾಡಿ ಮೈಗೆ ವಾಫ ಕೊಡೋ ಜೀನಸು, ಹೊಸಲಕ್ಕಿ ತೊಪ್ಪಲ 1, ಗಜಗಿನ ತೊಪ್ಪಲ 1, ಬೇವಿನ ತೊಪ್ಪಲ 1, ವಾಯಿವಡಂಗದ ತೊಪ್ಪಲ 1, ಬಜಿ 1, ಅರಿಷಿಣ 1, ಈ 7 ಜೀನಸು ಗಡಿಗಿಯೊಳಗೆ ನೀರು ಹಾಕಿ ತುಚ್ಚಿ ವಾಫ ಕೊಡುವದು. ಆಮೇಲೆ ಅದೇ ತೊಪ್ಪಲು ತಲಿಗೆ ಕಟ್ಟುವದು. ಆ ನೀರು ಮೈಗೆ ಹಚ್ಚುವದು, ಆಡಿನ ಹಿಕ್ಕಿ, ಕುರಿಹಿಕ್ಕಿ ತಂದು ಬೆಂಕಿಮಾಡಿ ಕಾಸಬೇಕು. ಮೈಯೊಳಗೆ ಗರ್ವಿ ಆದರೆ ಆಕಳ ಮೊಸರು ಅರವಿವಳಗೆ ಕಟ್ಟಿ, ನೀರು ಹೋದಮೇಲೆ, ಮೊಸರು ಉಂಡರೆ ಚಿಂತೆಯಿಲ್ಲಾ. ಬಾಣಂತಿ ರೋಗ ಮಾಣ್ಯು.

ಬಾಣಂತಿಗೆ ಮೈ ಹೊರಬಿದ್ದರೆ ಸಂಗಜೀರಗಿ 3 ಪೈ ತೂಕ, ಲವಂಗ 3 ಪೈ ತೂಕ, ಜಾಯಿಂಫಳ 3 ತೂಕ, ಪತ್ರಿ 3 ಪೈ ತೂಕ, ಜಾಲಗಿಡದೊಳ ಗಿನ ಕೆಂಪಾದ ತಾಟಿ ತೆಗೆದು ನೆರಳೊಳಗೆ ವಣಗಿಸಿ ಕುಟ್ಟಿ ಪುಡಿಮಾಡಿರಿಸಿ ಈ ಅಯಿದು ಜೀನಸನ್ನು ಪುಡಿಮಾಡಿ ಕೂಡಿಸಿ ಮೂರುಬೆಟ್ಟನಿಂದ ಬಂದಷ್ಟು ತುಪ್ಪದೊಳಗೆ ಕಲಿಸಿ ನುಂಗಬೇಕು. ಇದರಂತೆ 12 ದಿನ ತಕ್ಕೋಬೇಕು. ಪಥ್ಯ ತುಪ್ಪಅನ್ನ ತೊಗರಿಕಟ್ಟು, ಸ್ವಲ್ಪ ಉಪ್ಪು, ಶೀಪದಾರ್ಥ ಉಣಬೇಕು. ನಂಜಿನ ಜೀನಸು ಬಿಡಬೇಕು. ಬಿಸಿನೀರು ಕುಡಿಬೇಕು. ದೇವರ ಕೃಪೆಯಿಂದ ನೆಟ್ಟಗಾಗುವದು,

ಬಾಣಂತಿಗೆ ಎದೆಶೂಲಿ ಬಂದರೆ: ಹಾಲು 1 ಪಾವಶೇರು, ಹಿಪ್ಪಲಿ ಪಾವಶೇರು, ತವಾಕ್ಷರ ಪಾವಶೇರು, ತುಪ್ಪ ಸಕ್ಕರಿ ಹಾಕಿ ಕೊಡಬೇಕು. ಎದೆ ಶೂಲಿ ಪರಿಹಾರ.

ಬಾಣಂತಿಯು ಜ್ವರಕ್ಕೆ: ಅಮರಬಳ್ಳಿ, ಬೇವಿನ ವಳತಾಟ, ಈ ಎರಡು ಜೀನಸು ಸಮತಂದು ಬಿಸಿನೀರೊಳಗೆ ಹಿಪ್ಪಲಿ, ಮೋಡಿ ಹಾಕಿ ಕೊಡುವದು. ಮತ್ತೆ ಕಟಕರೋಹಿಣಿ, ಶುಂಠಿ, ಕೋತಂಬರಿ, ಮೂರು ಪುಡಿಮಾಡಿ ನೀರೊಳಗೆ ಕೊಡುವದು, ಜ್ವರ ನಾಶವಾಗುವದು. ಮತ್ತೆ ಜೇಕಿನಗಡ್ಡೆ, ಶುಂಠಿ, ಕಷಾಯ ಮಾಡಿ ಸಕ್ಕರಿ ಹಾಕಿ ಕೊಡುವದು ; ಜ್ವರ ನಾಶ.

ಬಾಣಂತಿಗೆ ಮೈ ಬಾತರೆ: ಅಳವಿ ಕುಟ್ಟಿ, ಕಷಾಯಮಾಡಿ ಹಾಲು ಬೆಲ್ಲ ಕೂಡಿಸಿ ಹಿಪ್ಪಲಿಹಾಕಿ ಕುಡಿಸಲು, ಶೋಭೆ ಮಾಣ್ಗು. ಮತ್ತೆ ಬಿಳೀ ಗಣಜಲಿ ಕಷಾಯಮಾಡಿ ತುಪ್ಪ ಬೆಲ್ಲದೊಡನೆ ಕೊಡಲು ಶೋಭೆಹರ.

ಬಾಣಂತಿಯು ತಲಿಶೂಲಿಗೆ: ಬಾದಾಮಿ, ಕಲ್ಲುಸಕ್ಕರಿ, ಕೊಟ್ಟರೆ ತಲಿ ಶೂಲಿ ನಿಂದಿರುವದು.

ಬಾಣಂತಿ ಇದರ ವಾಕರಿಗೆ: ಹಿರೆಮದ್ದಿನಗಡ್ಡೆ, ಬಜೀ, ನೀರೊಳಗೆ ಈ ಎರಡನ್ನು ಅರೆದು ಮೇಲಿಗೆ ಮೈಗೆಲೇಪ ಮಾಡುವದು, ವಾಗರಿಗೆ ನಾಶ.

ಬಸರಿದ್ದವರಿಗೆ ಕೆಮ್ಮು ನೆಗಡಿ ಬಂದರೆ: ಅಳಲಿಕಾಯಿ, ಶುಂಠಿ, ಬಜಿ, ಗಂಟುಬಾರಂಗಿ, ಕಟಕರೋಹಿಣಿ, ಇವು ಸಮಭಾಗ ಚೂರ್ಣಮಾಡಿ ಬಿಸಿ ನೀರೊಳಗೆ ಕಲಿಸಿ ಬೆಲ್ಲದೊಳಗೆ ಕೊಡುವದು.

ಬಾಣಂತಿಯು ಮೊಲಿಶೂಲಿಗೆ: ಬೇವಿನಬೇರು, ಬೇವಿನಹೂವು, ಅರೆದು ಲೇಪಿಸಿದರೆ ನೋವು ಹೋಗುವದು. ಮತ್ತೆ ಅಡವಿ ಹುಣಶಿ ಸೊಪ್ಪು, ಹಣ್ಣ ಯಕ್ಕಿಯ ರಸದೊಳಗೆ ಅರೆದು ಹಚ್ಚುವದು. ಮೊಲಿಶೂಲಿ ನಾಶವಾಗುವದು.

ಬಾಣಂತಿಯು ವಾತಕ್ಕೆ: ಕಲ್ಲುಗಡಲಿ ಕಷಾಯ ಮಾಡಿ ತುಪ್ಪವೆರಸಿ ಕೊಡುವದು, ವಾತಹರ.

ಬಾಣಂತಿ ತಲೆ ನೊಂದರೆ: ಕಟಕರೋಹಿಣಿ ಯಂಣಿವಳಗೆ ಹಾಕಿ ಕಾಸಿ ಮಂಡೆಗೆ, ಮೈಗೆ ಪೂಸಿದರೆ ಮೇಲೆ ಬಿಶಿನೀರು ಯರಕೊಂಡರೆ ಪರಿಹಾರ.

ಬಾಣಂತಿ ಪಕ್ಕ ಶೂಲಿಗೆ: ಶುಂಠಿ, ಹಿಪ್ಪಲಿ, ತುಪ್ಪದೊಳಗೆ ಕೊಡು ವದು. ಯೋನಿಶೂಲಿಗೆ–ಮಂಗರೊಳ್ಳಿಯ ಸುಟ್ಟು ಕರಳಮಾಡಿ ಭತ್ತದ

ಅರಳು ಕೂಡಿಸಿ ಚೂರ್ಣವ ಮಾಡಿ ಬಿಸಿನೀರೊಳಗೆ ಕೊಡುವದು. ಶೂಲಿ ನಾಶವಹುದು.

ಬಾಣಂತಿಗೆ ಜಂತು ಆದರೆ: ಹಾಲಿಪಾಳದ ಯಲೆ ಜೀರಿಗೆ ಅರೆದು ಕೊಡುವದು; ಜಂತು ಬೀಳುವವು.

ಬಾಣಂತಿ ಬಿಕ್ಕಿಗೆ: ಬಿಳಿಗಣಜಲಿ ರಸ 9 ಪೈ ತೂಕ, ನಿಂಬೆರಸ ಕೂಡಿಸಿ ಕುಡಿಸಲು ಬಿಕ್ಕು ನಿಲ್ಲುವದು.

ಬಾಣಂತಿಯ ರೋಗಕ್ಕೆ: ಹಾವಮೆಕ್ಕೆಕಾಯಿ ಸಮೂಲ ಸಹಗಡಿಗಿ ವಳಗೆ ಬೇವಹಾಕಿ ಉಪ್ಪು ನೀರಿನಿಂದ ಕೊಡುವದು.

ಕೂಸಿಗೆ ಅಜೀರ್ಣವಾದರೆ: ಶುಂಠಿ, ಅಹಲಿಕಾಯಿ, ಬೆಲ್ಲ, ಮೊಲೆ ಹಾಲೊಳಗೆ ಮೂರು ಸುತ್ತು ತೇದು, ಆಮೇಲೆ ಸಂವಟನಿಂದ ಹಾಕಬೇಕು; ಅಂದರೆ ಪರಿಹಾರವಾಗುವದು.

ಸಣ್ಣಕೂಸು ಗುರುಗುರುಯೆಂದರೆ: ಮೊಲೆಹಾಲೊಳಗೆ ಕೋಷ್ಟ ತೇದು ಹೆಡತಲಿಗೆ, ಕೊರಳಿಗೆ ಹಚ್ಚುವದು.

ಹಳೇ ಹುಂಣುಗಳಿಗೆ: ಸಹದೇವಿಯ ತೊಪ್ಪಲವನರೆದು ಹಚ್ಚಲು ಹಳೇಹುಂಣು ಮಾಣ್ಗು.

ನಾರಹುಂಣಿಗೆ: ನಿಂಬಿಯ ತೊಪ್ಪಲು ಬೆಚ್ಚಗೆಮಾಡಿ ಕಟ್ಟಲು ನಾರು ಹರದು, ಕಾಲು ಬಾತದ್ದು ಇಳಿವದು.

ಅರಸು ಹುಂಣಿಗೆ: ಹಾಲು ಕುಂಬಳದಕುಡಿ ನೀರಲ್ಲಿ ಅರೆದು ಮುಂಚೆ ಮೊಸರು ವಾಗರಕಟ್ಟುವದು. ಮೇಲೆ, ಈ ಔಷಧ ಹಾಕಿ ಕಟ್ಟಲು ಅರಸು ಹುಂಣು ಮಾಣ್ಗು. ಮತ್ತೆ, ಕಿರಿನೆಲ್ಲಿ ಸಮೂಲವುಂ ತಂದು ನೀರಿಂದ ಅರೆದು ಹಚ್ಚಲು ಅರಸುಹುಂಣು ಮಾಣ್ಗು. ಮತ್ತೆ, ಬೇವಿನ ಯಲೆ, ಎಳ್ಳು, ಅರಷಿಣಾ ಚಂದನವು, ಈ ನಾಲ್ಕೂ ಸಮನಾಗಿ ಅರೆದು ಹುಂಣಿಗೆ ಲೇಪನಮಾಡಲು ಅರಸುಹುಂಣು ಮಾಣ್ಗು.

ಹಂದಿ ಮೊಸಡಿಹುಂಣಿಗೆ: ಹಣಜೀ ರಸದೊಳಗೆ ಅವು ಮರ್ದಿಸಿ ಹಚ್ಚಿದರೆ ನಾಶವಾಗುವದು.

ತಲೆಯೊಳಗೆ ಹೇನು ಶೀರಮಾಡಿ ಹುಂಣು ಆದರೆ: ಖೊಬ್ಬರಿ ಯಂಣೆ, ಕಾಡಿಗ್ಗರಿಗಿನ ರಸ, ಎರಡು ಮರ್ದಿಸಿ ಕೂದಲಕ್ಕೆ ತಿಕ್ಕುವದು. ಹುಂಣಿಗೆ

ಹಚ್ಚುವದು. ಈ ಪ್ರಕಾರ ಮೂರು ಸಾರಿ ಹಚ್ಚುವದು. ಮತ್ತೆ, ಹುಳಾ ಬಿದ್ದಿದ್ದರೆ ಹೇನಬೀಜ, ರಸಕರ್ಪೂರ, ಖೊಬ್ಬರಿ ಯಂಣಿಯಲ್ಲಿ ಮರ್ದಿಸಿ ಹಚ್ಚುವದು. ಹುಳುಗಳು ನಾಶವಾಗುವವು.

ನಾನಾ ಪ್ರಕಾರದ ಹುಂಣಿಗೆ: ತುಥ್ಯ 3 ಪೈ ತೂಕ, ಮೆಣಸು ಪಾವ ಶೇರು, ತುಪ್ಪ ಅಚ್ಚೇರು, ಮೇಣಾ ಕೂಡಿಸಿ ಕರಗಿಸಿ ಪುನಹಾ ಪುಡಿಮಾಡಿ ಹಾಕಿ ಕೋಲಾಡಿಸಿ ಅಷ್ಟುಕೂಡಿದ ಮೇಲೆ ತಳಗೆ ವಳಗೆ ಮರ್ದಿಸಿ ಹಚ್ಚೋದು.

ದಂತ ಹುಂಣಿಗೆ: ಎಲಿಪಾಷಾಣವ ತಂದು ಪುಡಿಮಾಡಿ ಬೆಲ್ಲದೊಳ ಗಿರಿಸಿ ಅರಳಿಗೆ ಹಚ್ಚಿ ಆ ಹುಂಣಿನ ಮೇಲೆ ಹಚ್ಚಬೇಕು, ಪರಿಹಾರವಾಗುವದು. ನಂಜಿನ ಪದಾರ್ಥ ತಿನ್ನಕೂಡದು.

ಸಂಣ ಹುಡುಗರಿಗೆ ತಲೆ ಮತ್ತು ಮೈಗೆ ಹುಂಣಾಗಿದ್ದರೆ: ಕರೇಹೂಲಿ ತೊಪ್ಪಲು ತಂದು ಅರೆದು ಹಚ್ಚುವದು, ಅಂದರೆ ಪರಿಹಾರ.

ಸಂಣ ಹುಡುಗರ ತಲೆಯಲ್ಲಿ ಹುಂಣಾದರೆ: ಔಡಲಯಂಣಿ ತಂದು ಅದ ರೊಳಗೆ ಉರಳೇಗಡ್ಡೆ ಹಾಕಿ ಅರೆದು 3 ದಿವಸ ತಲೆಗೆ ಹಾಕುವದು. ಶೀಗಿ ಕಾಯಿ ಹಚ್ಚಿ ತೊಳಿಸೋದು, ಹುಂಣು ಪರಿಹಾರ.

ಕಾಲಮೇಲಿನ ಹುಂಣಿಗೆ: ಉತ್ರಾಣಿ ಗಿಡವ ತಂದು ವಣಗಿಸಿ ಭಸ್ಮ ಮಾಡಿ ತೆಂಗಿನ ಎಂಣಿಯೊಳಗೆ ಮರ್ಧಿಸಿ ಹಚ್ಚುವದು, ನಾಶವಾಗುವದು.

ನಾರಹುಂಣಿಗೆ: ಸುಂಬಲಖಾರ, ಹೊಸಸುಂಣ, ಸಬಖಾರ ಅವು ಈ ನಾಲ್ಕೂ ನಿಂಬಿರಸದೊಳಗೆ ಅರೆದು ನಾರಿನ ಶಂದಿಗೆ ಹಚ್ಚುವದು, ನಾರು ಕತ್ತ ರಿಸಿ ಬೀಳುವದು.

ಮುಲಾಮು ಮಾಡುವ ಕ್ರಮು: ಪಾದರಸ 1 ಪೈ ತೂಕ, ಗಂಧಕ 1 ಪೈ ತೂಕ, ಮುಡದಾರಸಿಂಗಿ 1 ಪೈ ತೂಕ, ಮನಶಿಲ 1 ಪೈ ತೂಕ, ಇಂಗ ಳೀಕ 1 ಪೈ ತೂಕ, ರಸಕರ್ಪೂರ 1 ಪೈ ತೂಕ, ಜಂಗಾಲು 1 ಪೈ ತೂಕ, ತುಥ್ಯ 1 ಪೈ ತೂಕ, ಸಂಗಜೀರಗಿ 3 ಪೈ ತೂಕ, ಪಾಷಾಣಭೇದಿ 1 ಪೈ ತೂಕ, ಈ ಜೀನಸುಗಳನ್ನೆಲ್ಲ ಆಡಿನಬೆಂಣಿ ಅಥವಾ ಆಕಳಬೆಂಣಿಯಲ್ಲಿ ಆಗಲಿ, ಅಥವಾ ಅಚ್ಚೇರು ತುಪ್ಪದಲ್ಲಾಗಲಿ, ಇವುಗಳನ್ನು ತಾಂಬ್ರದ ಪರಾತದಲ್ಲಿ ತಾಂಬ್ರ ತಂಬಿಗೆಯಿಂದ ಮರ್ದಿಸಿ ಮುಲಾಮುಮಾಡಿ ತೆಂಗಿನಮರಟೆಯಲ್ಲಿರಿಸಿ ಕೊಂಡು ಹುಣ್ಣಿಗೆ ಹಚ್ಚಲು ಸರ್ವವಿಧ ಹುಂಣು ಮಾಣ್ಗು.

ಕೆಮ್ಮಿಗೆ, ಕಫಕ್ಕೆ : ಅಣಲಿಕಾಯಿ, ಚಿತ್ರಮೂಲ, ಸೈಂಧವಲವಣ, ಶುಂಠಿ, ಈ 4 ಜೀನಸು ಚೂರ್ಣವಂ ಮಾಡಿ ಜೇನುತುಪ್ಪದೊಡನೆ ಕೊಳ್ಳಲು ಕೆಮ್ಮು ಮಾಣ್ಗು. ಮತ್ತೆ ಖಸಖಸಿ 3 ಪೈ ತೂಕ, ಆಕಳ ಹಾಲೊಳಗೆ ಕೊಡಲು ಕೆಮ್ಮು ಪರಿಹಾರ, ಮತ್ತೆ ಅರಷಿಣ, ಗೊತಡಿ ಯಲಿ, ಕುರಟಿಗನ ಯಲಿ, ಹಣ್ಣುಚೊಗಚಿ ತೊಪ್ಪಲರಸ ತೆಗೆದು ಜೇನುತುಪ್ಪದೊಳಗೆ ಕೂಡಿಸಿ ಕೊಡಲು ಕೆಮ್ಮು ಪರಿಹಾರ. ಮತ್ತೆ, ಕಾಲಪಿ ಕಲ್ಲಸಕ್ಕರಿ 3 ಪೈ ತೂಕ, ಬೆಂಣೆ 3 ಪೈ ತೂಕದೊಡನೆ ಮರ್ದಿಸಿ 1 ಸಪ್ತಕ ಕೊಡುವದು. ಮತ್ತು, ಇಂಗಳೀಕ 3 ಪೈ ತೂಕ, ಮದ್ದುಬೀಜ 1 ಪೈ ತೂಕ, ನೀರಲಚಕ್ಕಿ ರಸದಲ್ಲಿ 3 ದಿವಸ ಅರೆದು ಚುಟಕ ಪ್ರಮಾಣ ಮಾತ್ರೆಮಾಡಿ ರಾತ್ರಿಯಲ್ಲಿ ಜೇನುತುಪ್ಪದೊಳಗೆ ಕೊಡುವದು. ಪುನಃ ಫಕ್ತಮೂತ್ರಿ ಪ್ರಾತಃಕಾಲ ತಿಂಬೋದು. ಈ ರೀತಿ 40 ದಿವಸ ಸಾಧಿಸಿದರೆ ತಂತಿಹಾಂಗೆ ಕಫ ಬೀಳುವದು. ಪರಿಹಾರವಾಗೋದು, ಮತ್ತು ಹಿಪ್ಪಲಿ 3 ಪೈ ತೂಕ, ಮೆಣಸು 3 ಪೈ ತೂಕ, ಬಳಿಗಾರ 3 ಪೈ ತೂಕ, ಹಸಿ ಬಿಸಿರೇಶ್ಮಗಡ್ಡೆ ಚೂರ್ಣ ಜೇನುತುಪ್ಪದೊಳಗೆ ಕಲಸಿ ಗುಳಿಗೆ ಅಂಗುಲ ಪ್ರಮಾಣಮಾಡಿ ಕೊಡುವದು. ಹುಳಿ ವರ್ಜ್ಯ, ಮತ್ತು ನೆಲವರಿ ಪುಡಿ ಬಿಸಿನೀರಲ್ಲಿ ಕೊಡಲು ಕೆಮ್ಮು ನಾಶ. ಮತ್ತು ಕುರಟಿಗನಮೂಲ, ಮೆಣಸು, ಬೆಳ್ಳುಳ್ಳಿ ಅರೆದು ನೀರಲ್ಲಿ ಕೊಡಲು ಕೆಮ್ಮು ನಾಶವಹುದು. ಮತ್ತೆ ಹಾಂವಮೆಕ್ಕೆಯ ಬೇರು, ವೀಳೇದೆಲೆಯಲ್ಲಿ ಕೊಡಲು ಕೆಮ್ಮು ನಾಶ. ಮತ್ತು ಕಟ್ಟಮೊಸರು ಸಕ್ಕರಿಪುಡಿ ಹಾಕಿ ತಕ್ಕೊಂಬುವದು. ಮತ್ತೆ ಕುರಟಿಗನ ಯಲಿ 4, ಮೆಣಸು 4 ಅರೆದು ಗುಳಿಗೆ ಮಾಡಿಕೊಡುವದು. ಅಂದರೆ ಕೆಮ್ಮುಹರ. ಮತ್ತೆ ತಾರೀಕಾಯಿ 3 ಪೈ ತೂಕ, ಹಿಪ್ಪಲಿ 3 ಪೈ ತೂಕ, ಪುಡಿಮಾಡಿ ಸಕ್ಕರಿ ತುಪ್ಪದೊಳಗೆ ಕೊಡುವದು. ಮತ್ತೆ ನುಗ್ಗಿಬೇರು ಹಾಲೊಳಗೆ ತೇದುಕೊಡಲು ಕೆಮ್ಮು ನಾಶ. ಮತ್ತೆ, ಅಲೂರಿ ತೊಪ್ಪಲು, ಅಡಸಾರ ತೊಪ್ಪಲು, ಲಕ್ಕಿ ತೊಪ್ಪಲು, ಒಂದೊಂದು ದುಡ್ಡು ತೂಕ, ಈ ಜೀನಸುಗಳು ಲವಣ ಮಿಶ್ರಮಾಡಿ ಅರೆದು ತುಪ್ಪದಲ್ಲಿ ಕೊಡುವದು, ಕೆಮ್ಮುಹರ. ಮತ್ತೆ ಸಜ್ಜಿಖಾರ ಪಾವಶೇರು ತೂಕ, ಬಳಿಗಾರ ಪಾವುಶೇರು ತೂಕ, ಸೈಂಧವಲವಣ ಪಾವಶೇರು ತೂಕ, ನಿಂಬಿರಸದಲ್ಲಿ ಅರೆದು ಪುಟಹಾಕಿ ಕೊಡುವದು, ಈ ಭಸ್ಮದಿಂದಲೇ ಕೆಮ್ಮು ನಿಲ್ಲುವದು.

ಮತ್ತೆ ಹಿಪ್ಪಲಿ 2 ಪೈ ತೂಕ, ಶುಂಠಿ 2 ಪೈ ತೂಕ, ಲವಂಗ 4 ಪೈ ತೂಕ, ಬಳಿಗಾರ 3 ಪೈ ತೂಕ, ಅರಳುಮಾಡಿ, ನೆಲಗುಳ್ಳ, ಅಡಸೆರದ ಹೂವು ಪುಡಿಮಾಡಿ ಖಾರಗೆಣಸಿನ ರಸದೊಳಗೆ ಮಾತ್ರೆ ಕಟ್ಟಬೇಕು. ಜೇನು ತುಪ್ಪದೊಡನೆ ಕೊಡುವದು, ಕೆಮ್ಮುಹರ. ಮತ್ತೆ ಅಜಿವಾನ ತೈಲ, ಅಲ್ಲದ ರಸ ಅಥವಾ ಜೇನುತುಪ್ಪ ಅಥವಾ ತುಲಸಿರಸ, ಇದರಲ್ಲಿ ತೈಲಹಾಕಿ ಕೊಡುವದು. 1 ಸಪ್ತಕಕ್ಕೆ ಕೆಮ್ಮುನಾಶ, ಹುಳಿ ಬಿಡುವದು.

ಕಫಾ ಬೀಳೋದಕ್ಕೆ : ತುಂಬಿಗಿಡವ ನೆರಳೊಳಗೆ ವಣಗಿಸಿ ಪುಡಿಮಾಡಿ ಬಳಿಗಾರ ಅರೆದು ಪುಡಿಮಾಡಿ ಜೇನುತುಪ್ಪದೊಳಗೆ ಕೊಡಲು ಯೆಂಥಾ ಕಫಾ ಇದ್ದಾಗ್ಯೂ ಬೀಳುವದು. ಇದನ್ನ 3 ದಿನ ಅಥವಾ 7 ದಿನ ತಕ್ಕೊಂಬೇಕು, ಅಂದರೆ ಕೆಮ್ಮು ಪರಿಹಾರ, ಕಫ ಪರಿಹಾರ. ಮತ್ತೆ ಕಿರುಕಸಾಲಿ ಬೇರು, ಕುರಟೆಗಿನಬೇರು, ಕಕ್ಕಿಬೇರು, ಕೊಳಂಜಿನ, ಅಳಲಿಕಾಯಿ, ಕಾಂಚು, ಲವಂಗ, ಈ ಜೀನಸುಗಳು ಸಮಭಾಗ 2 ಶೇರು ತೂಕ ನೀರು ಇಟ್ಟು ಅಚ್ಚೇರು ನೀರು ಇಳಿಸಿ 3 ಹೊತ್ತು ತಕ್ಕೊಂಬೇಕು, ಕೆಮ್ಮು ನಿಲ್ಲುವದು. ಮತ್ತೆ ಗಡಗಿ ವಲೆ ಮೇಲೆ ಇಟ್ಟು ಅದರೊಳಗೆ ಬೇವಿನ ತೊಪ್ಪಲು ಹಾಕಿ ಕರಕುಮಾಡಿ ತೆಗೆದು ಜೀರಗಿ ಹಾಕಿ ಹಳೇ ನೀರೊಳಗೆ ಕೊಡುವದು. ಮತ್ತೆ ಹಾಲೊಳಗೆ ಅಪ್ಪು ಸ್ವಲ್ಪ ಹಾಕಿ ಮರ್ದಿಸಿ 14 ದಿನ, ಸ್ವಲ್ಪ ಇದ್ದರೆ 3 ದಿವಸ, ಕೊಡುವದು. ಪಥ್ಯ ಹಾಲು ಅನ್ನ. ಮತ್ತೆ ಖಾರಗೆಣಸಿನ ರಸದೊಳಗೆ ಕಲ್ಲಸಕ್ಕರಿ ಪುಡಿಹಾಕಿ 3 ದಿನ ಕೊಡಲು ಕೆಮ್ಮು ನಾಶವು.

ಕಫಕ್ಕೆ : ನೆಲಗುಳ್ಳದ ಬೇರು, ಮುಳ್ಳುಸೊಂಡಿ ಬೇರು, ಎರಡೂ ವಣಗಿಸಿ ಪುಡಿಮಾಡಿ, ಅದರೊಳಗೆ ಶುಂಠಿ, ಮೆಣಸು, ಹಿಪ್ಪಲಿ, ಅರಿಷಿಣ, ಇಷ್ಟು ಜೀನಸು ಪುಡಿಮಾಡಿ ಬೆಲ್ಲದೊಳಗೆ ಕೂಡಿಸಿ ಗುಳಿಗೆಯುಮಾಡಿ ಕೊಡುವದು. ಪಥ್ಯ ಮಜ್ಜಿಗೆ ತುಪ್ಪ ಮುಂತಾದ ನಂಜಿನ ಪದಾರ್ಥ ಬಿಡಬೇಕು. ಕಫ ನಾಶವಾಗುವದು. ಮತ್ತೆ ಶ್ಲೇಷ್ಮದ ಕೆಮ್ಮಿಗೆ ಅರಷಿಣ 2 ತಕ್ಕೊಂಡು 1 ಸೊಲಗಿ ಸುಂಣವ ತಂದು ಆ ಸುಂಣದೊಳಗೆ ಅರಷಿಣ ಗಂಟುಕಟ್ಟಿ 27 ತಂಬಿಗಿ ನೀರುಹಾಕಿ ಕುದಿಸಬೇಕು, ನೀರು ಆರಿದಮೇಲೆ ಆ ಅರಷಿಣದ ಕವಚವ ತೆಗೆದು ನೆರಳೊಳಗೆ ವಣಗಿಸಿ ಪುಡಿ ಮಾಡಬೇಕು. ಶುಂಠಿ 9 ಪೈ ತೂಕ, ಮೆಣಸು 9 ಪೈ ತೂಕ, ಹಿಪ್ಪಲಿ, ಅಳಲಿಕಾಯಿ, ತಾರಿಕಾಯಿ, ನೆಲ್ಲಿಕಾಯಿ,

ಲವಂಗ 3 ಪೈ ತೂಕ, ಮುಳ್ಳುಸೊಂಡಿ ಹಾಂವಮೆಕ್ಕಿ, ನೆಲಗುಳ್ಳ, ಅಡಸಾರದ ಹೂವು ಸಮಭಾಗ ತಂದು ವಣಗಹಾಕಬೇಕು. ಬಳಿಗಾರ ಅರಳಮಾಡಿದ ಪುಡಿ ಈ ಜೀನಸುಗಳನ್ನೆಲ್ಲಾ ಜ್ಯಾಲಿಶೋಟಿಯ ಕಷಾಯಮಾಡಿ ಸರ್ವಜೀನಸುಗಳನ್ನು ಹಾಕಿ ಅರೆದು ಗುಳಗಿಮಾಡಿ ಜೇನುತುಪ್ಪದೊಳಗೆ ಕೊಡುವದು. ಪಥ್ಯ ಹುಳಿ, ತುಪ್ಪ, ತೈಲ, ತಕ್ರ ವರ್ಜ್ಯ. ಮತ್ತೆ, ಹಂಣುಕಳ್ಳಿ ತಂದು ವಣಗಿಸಿ ಸುಟ್ಟು ಪುಡಿಮಾಡಿ, ಆ ಬೂದಿ ಜೇನುತುಪ್ಪದೊಳಗೆ ಕೊಡುವದು, ಕೆಮ್ಮು ನಾಶನವಹದು.

ತಾಂಬ್ರಭಸ್ಮಕ್ಕಾಗಲಿ, ರಸಭಸ್ಮಕ್ಕಾಗಲಿ, ಅನುಪಾನಮಂ ಪೇಳ್ವೆನು : ಕುಷ್ಟರೋಗಕ್ಕೆ 2 ಗುಂಜಿಪ್ರಮಾಣ ಏರಂಡಿ ತೈಲದೊಡನೆ ತಕ್ಕೊಂಬುವದು. ಮೇಲೆ 1 ಶೇರು ಮಜ್ಜಿಗೆ ತಕ್ಕೊಂಬುವದು. ಮತ್ತೆ ಉದರ ರೋಗಗಳಿಗೆ ಹುರಳಿಕಟ್ಟಿನಲ್ಲಾಗಲೀ ಗೋಮೂತ್ರದಲ್ಲಾಗಲೀ 2 ತೂಕ, 3 ತೂಕ ಅಣಿಲಿಯ ಹಾಕಿಕೊಂಬುವದು. ಮತ್ತೆ ಗ್ರಹಣಿಶುಂಠಿ, ಜೀರಗಿಯ ಕೂಡಿಸಿ ಮೊಸರು ಕಲಸಿಕೊಂಬುವದು. ಮತ್ತೆ ಪಾಂಡುರೋಗಂಗಳಿಗೆ—ಶುಂಠಿ ಚೂರ್ಣವ ಹಾಕಿ ಆಕಳಹಾಲಿನಲ್ಲಿ ಕಲಸಿಕೊಂಬುವದು.

ಮಹಾರೋಗಕ್ಕೆ : ಆಕಳಬೆಂಣಿ, ರಾಜಾಪುರಿಸಕ್ಕರಿ ಕೂಡಿಸಿ ತಕ್ಕೊಂಬುವದು. ಮತ್ತೆ ಗಂಗಾವಳಿಯು ಅಂದರೆ ನೀರಮೇಲಿನ ಹಾಂವಸಿಯ ತೊಪ್ಪಲವನ್ನು 1 ಗ, ಸಂಣಾಗಿ ಅರೆದು ತುಪ್ಪದಿಂದ ಕಲಸಿಕೊಂಡರೆ 3 ದಿವಸಕ್ಕೆ ಶುಕ್ಲನಾಳದಲ್ಲಿ ಜಾಡಿಸಿಹೋಗಿ ಮಲಮೂತ್ರ ಸಹವಾಗಿ ವಳಿತಾಗುವದು.

ಶೀತಜ್ವರಕ್ಕೆ : ಅಣಲಿಕಾಯಿ, ಚಿತ್ರಮೂಲ, ಶುಂಠಿ, ಬಿಳೀಗಣಜಲೀ, ಔಡಲಬೇರು, ಅಮರದಬಳ್ಳಿ 2 ಗುಳ್ಳಾ ಅಂದರೆ ನೆಲಗುಳ್ಳಾ, ಹಬ್ಬಗುಳ್ಳಾ ಇವು ಸರಿಯಾಗಿ 1 ಗ, ಪ್ರಮಾಣಕೊಂಡು 2 ಶೇರು ನೀರು ಇಟ್ಟು ಪಾವಶೇರು ನೀರು ಇಳಿಸಿ ತೆಗೆದು 1 ಗ, ಹಿಪ್ಪಲಿಯ ಪ್ರತಿಪಾಕವಿಕ್ಕಿ ಕೊಂಬೋದು. ಶೀತಜ್ವರ, ಹಳೇಜ್ವರ ಮಾಣ್ಗು. ಪಥ್ಯ ಅಕ್ಕಿಅನ್ನ ; ತುಪ್ಪ, ಲವಣ ವರ್ಜ್ಯ.

ರಸಶಿಂಧೂರದ ಅನುಪಾನ : ನೆಲ್ಲಿಯಗಿಡ, ವಾಯುವಡಂಗ, ಲವಂಗಪತ್ರಿ, ಲವಂಗದ ಚಕ್ಕೆ, ಪುತ್ರಂಜೀವಿ, ಭದ್ರಮುಷ್ಟಿ, ಹಿಪ್ಪಲಿ, ಮೆಣಸು, ಶುಂಠಿ, ಅಣಲಿಕಾಯಿ ಸಮಭಾಗ, ಇಷ್ಟರ ಸಮಾ ತಿಗಡಿ 3 ಪಾಲು, ಇಷ್ಟನ್ನು

ಕೂಡಿಸಿ ಚೂರ್ಣವಮಾಡಿ ಸವು ಸಕ್ಕರಿಯು ಹಾಕಿ ಕೊಂಬುವದು. ಇದರಿಂದ ಕ್ಷಯ, ಪಾಂಡುರೋಗ, ಕಾಮಣಿ, ಶೋಭಿರೋಗ, ಶ್ವಾಸ, ಖಾಸ, ಮಂದಾಗ್ನಿ, ಪ್ರಮೇಹ, ಮೊದಲಾದವು ನಾಶನವಹವು.

ತಾಂಬ್ರದ ಭಸ್ಮ ತೆಗಿದುಕೊಂಬುವ ಕ್ರಮ : ಗುಲ್ಮಶೂಲಿಗೆ ಒಳ್ಳೇ ಹಿಂಗು, ಶುಂಠಿ, ಹಿಪ್ಪಲಿಗಜಗಿನ ಅರಳು, ಸೈಂಧವಲವಣ, ಇವಂ ಚೂರ್ಣವ ಮಾಡಿ, 3 ಗದ್ಯಾಣ ಚೂರ್ಣಕ್ಕೆ 1 ಹಣ ತೂಕ ತಾಂಬ್ರದ ಭಸ್ಮವ ಹಾಕಿ ತಕ್ಕೊಂಬುವದು. ವಾಯುಗುಲ್ಮ, ಅಷ್ಟ ಉದರವು ಪರಿಹಾರವಾಗುವವು.

ಭಾರವನೆತ್ತಬೇಕಾದರೆ : ಕಿರ್ಕಸಾಲಿಯು ಬೇರು, ಬಿಳೇತೊಟ್ಟಿಲ ಬೇರು, ಬಳಿವಡಕನ ಬೇರು, ಇವಂ ನವಣಿಯು ಪಾಯಿಸದಲ್ಲಿ ಅಟ್ಟು ಉಂಡರೆ, ಬಂಡಿಯು ಗಾಲಿಯನೆತ್ತಬಹುದು.

ಸರ್ಪನ ವಿಷಕ್ಕೆ ಲೇಪನ : ಬೆಳ್ಳುಳ್ಳಿ, ಮೆಣಸು, ಉಪ್ಪು, ಶುಂಠಿ, ಗಜಗು, ಇಲ್ಲಣ, ಹುಲಗಿಲಬೀಜ, ಇವುಗಳನೆಲ್ಲಾ ಅಂಬಿಲದಲ್ಲಿ ಅರೆದು, ಗುಳಗಿ ಮಾಡಿಕೊಡುವದು. ಮತ್ತು ಸರ್ಪ ಕಚ್ಚಿದವರಿಗೆ ಮೂರ್ಛೆ ಇದ್ದು ಎಚ್ಚರ ಇಲ್ಲದಿದ್ದರೆ, ನೆತ್ತಿಯಲ್ಲಿ ಕ್ಷತವ ಮಾಡಿ ರಕ್ತ ಬರುವದ ಕಂಡು, ಅಂಬಿಲದೊಳಗೆ ಈಸು ಗುಳಿಗಿಯು ತೇದು ಕ್ಷತಕ್ಕೆ ಪೂಸಲು ಮೂರ್ಛೆ ತಿಳಿದು ಬದುಕುವನು. ಮತ್ತೆ ಅಂಟಾಳದಹಂಣು, ನೆಲ್ಲಿಯಗಿಡ, ನರಮೂತ್ರದಿಂದರೆದು ನಶ್ಯಂ ಗೆಯ್ಯಲು, ಸರ್ಪದ ವಿಷ ಇಳಿವದು. ಮತ್ತೆ ನರಮೂತ್ರದಿಂದ ಇಬ್ಬೆರಳು ಅರವಿಯು ತೋಯಿಸಿ ನಶ್ಯಂಗೈಸಲು ಸರ್ಪನ ವಿಷ ಇಳಿವದು. ಮತ್ತೆ ಸೈಂಧವ ಲವಣ, ಎಣಿಸಿಲೆ ಸಮಾನವಾಗಿ ಅರೆದು ನಶ್ಯಂಗೈಯಲು ವಿಷ ಇಳಿವದು.

ಸರ್ಪ ಕಚ್ಚಿದರೆ : ಪುತ್ರಜಿಯು ತಿಳಲು ಹಾಲಿಂದ ಅರೆದು ಪಾನ ಮತ್ತು ನಶ್ಯ ಮತ್ತು ಅಂಜಿನ ಮಾಡಿಸೆ ಯೆಂಥಾ ವಿಷವಾದರೂ ಇಳಿವದು. ಮತ್ತೆ ಒಳ್ಳೇಬೇವಿನ ಹೂವು 1 ಶೇರು, ಕಾಯಿ 1 ಶೇರು, ಯಲಿ 1 ಶೇರು, ಖಡಿ 1 ಶೇರು, ತಾಟಿ 1 ಶೇರು, ಈ 5 ಶೇರು ಬೇವಿನ ಪಂಚಾಂಗವನ್ನು ಚೂರ್ಣವ ಮಾಡಿ ಇಟ್ಟುಕೊಂಡಿಹದು. ಹಾವು ಕಚ್ಚಿದರೆ ಒಂದು ಹಿಡಿ ಪುಡಿ ಮಜ್ಜಿಗೆ ಯೊಳಗೆ ಕಲಸಿ ಕುಡಿಸುವದು, ಸರ್ಪನ ವಿಷ ಇಳಿವದು. ಮತ್ತು ಬಿಸಲ ನಂಜು, ಹಲ್ಲಿ, ಇಲಿ, ಹೆಗ್ಗಣ, ನಾಯಿ, ಮುಂಗಲಿಯು ನಂಜು ಮತ್ತು ಹಂಣು

ಗಂಡಿನ ನಂಜು, ಇವಕ್ಕೆ ಮೂರು ಬೆರಳಿಗೆ ಬಂದಷ್ಟು ನೀರೊಳಗೆ ಹಾಕಿ ಕುಡಿಸುವದು. ಈ ಚೂರ್ಣವನ್ನು ಹೇಳಿದ ಪ್ರಕಾರ ಸೇವಿಸಲು ಸರ್ವನಂಜು ಪರಿಹಾರವಾಗುವದು.

ಮತ್ತೆ ಸರ್ಪ ಕಚ್ಚಿದ್ದಕ್ಕೆ : ಹೆಂಮುಷ್ಟಿಯ ಬೀಜವನ್ನು ತಂದು ಕಂಣಿಗೆ ಹಚ್ಚಲು ಇಳಿವದು. ಮತ್ತೆ ಸರ್ಪ ಕಚ್ಚಿದ್ದಕ್ಕೆ ಮತ್ತು ಮಲರೋಗಕ್ಕೆ— ಹಾಗಳರಸ, ಅಂಟ್ಯಾಳದ ನೊರಿ, ಎರಡನ್ನು ಕೂಡಿಸಿ ಮೂಗಿನೊಳಗೆ ಹಾಕಿದರೆ ಸರ್ಪನ ವಿಷ ಉತಾರ, ಮತ್ತು ಮಲರೋಗ ಪರಿಹಾರ. ಮತ್ತೆ, ಹಾವಕಚ್ಚಿ ದರೆ—ಅಂಟಾಲಕಾಯಿ ನಾಲ್ಕು, ಒಂದು ತಂಬಿಗಿ ನೀರೊಳಗೆ ಕಿವುಚಿ ಅದರಲ್ಲಿ ತುತ್ತೇದಪುಡಿ ಉದ್ದಿನಕಾಳಷ್ಟು ಹಾಕಿ ಕೊಡುವದು. ಮತ್ತೆ ಅಂಟಾಳದ ಬೀಜಾ ನೀರೊಳಗೆ ತೇದು ನಿಂಬೆಹುಳಿ ವಳಗೆ ಕೊಡುವದು. ಇಲ್ಲವೇ ಕಂಣಿಗೆ ಹಚ್ಚುವದು, ವಿಷ ಪರಿಹಾರ. ಮತ್ತೆ ತೊಟ್ಟಲಬೇರು ನೀರೊಳಗೆ ತೇದು ನಿಂಬೆಹುಳಿಯೊಳಗೆ ಕೂಡಿಸಿ ಕೊಡಲು ತಾತ್ಕಾಲ ವಿಷನಾಶವಹುದು. ಮತ್ತೆ ಕಿರಿನೆಲ್ಲಿಯ ಬೇರು ಹಾವಿಗೆ ತೋರಿಸಿದರೆ ಸತ್ತಂತೆ ಬೀಳುವದು. ಕುರಟಿಗನ ಬೇರು ಕೈಯಲ್ಲಿ ಇದ್ದರೆ ಹಾವ ಕಡಿದರೆ ಬಾಧೆಯಿಲ್ಲಾ. ಮತ್ತು ಲಕ್ಕಿಯ ಸೊಪ್ಪು, ರಂಜಿಕೆಯ ಸೊಪ್ಪು, ಈ ಎರಡನ್ನು ಹಳೇ ನೀರೊಳಗೆ ರಸಾ ತೆಗಿದು ಕುಡಿಸಲು, ಹಾವಿನ ವಿಷ ಪರಿಹಾರ.

ಚೇಳಿನ ವಿಷಕ್ಕೆ : ಮೆಣಸು, ಹಿಪ್ಪಲಿ, ಪುಡಿಮಾಡಿ ಅದರಲ್ಲಿ ಅಕ್ಕಿ, ಹಾಲು ಕೂಡಿಸಿ ಲೇಪಿಸೆ ವಿಷ ಬಿಡುವದು. ಮತ್ತೆ, ಇಂಗು ನೀರಲ್ಲಿ ತೇದು ಹಚ್ಚಿದರೆ ಇಳಿವದು. ಮತ್ತೆ ಬಿಳೆಗಣಜಲಿ ಬೇರು ತಂದು ಕಡಲಲ್ಲಿ ತೇದು ಹಚ್ಚಿ ಬೆಂಕಿ ಕಾಸಿದರೆ ಪರಿಹಾರ. ಮತ್ತು ಸುಂಣಾ ಎಳ್ಳಯಂಣಿಯಾಗಲಿ, ಔಡಲಯಂಣಿಯಾಗಲಿ ಹಚ್ಚಲು ಪರಿಹಾರ. ಮತ್ತೆ ಮೆಣಸು, ಹಿಪ್ಪಲಿ, ಒಂದುರುವಿ ತೂಕ ನವಸಾಗರ, ಸೋಂಪು, ಬಿಳೇಗಣಜಲಿ ಬೇರು, ಕಿರಕಸಾಲಿ ಬೇರು, ಇಂಗು, ಗಜಗಿನಬೀಜ, ಸುಂಣಾ ಇಷ್ಟನ್ನು ಯಕ್ಕಿಹಾಲಲ್ಲಿ ಅರೆದು ಗುಳಿಗೆ ಮಾಡಿ ಇಟ್ಟಿರುವದು. ಚೇಳು ಕಡಿದಾಗ್ಯೆ ಹಳೇ ನೀರೊಳಗೆ ತೇದು ಹಚ್ಚಲು ಬಾಧಾಪರಿಹಾರ.

ಕಿವಡಬಿದ್ದರೆ : ಕಲ್ಲುಪ್ಪು ಸಂಣಾಗಿ ಅರೆದು ಅಂಬಿಲದಲ್ಲಿ ಕಾಸಿ 21 ದಿನ ಕಿವಿಯಲ್ಲಿ ಬಿಡಲು ಕಿವಡಬಿದ್ದದ್ದು ಹೋಗಿ ಕಿವಿ ಕೇಳಬರುವದು.

ಕಿವಿಯಲ್ಲಿ ತೊನಸಿ ಹೊಕ್ಕರೆ : ವಟನಟಿಗನ ರಸಾ ಕಿವಿಯೊಳಗೆ ಹಿಂಡೋದು, ತೊನಸಿ ನಾಶನವು.

ಕಿವಿ ಸೋರೋದಕ್ಕೆ : ಉತ್ತಮ ಶರೆ ತಂದು ಕಿವಿಯೊಳಗೆ ಹಾಕಿದರೆ ಬಾಧಾಪರಿಹಾರ. ಮತ್ತೆ ಕಲ್ಲನಾರು ಬಿಸಿಮಾಡಿ 3 ದಿವಸ ಕಿವಿಯೊಳಗೆ ಹಿಂಡಿದರೆ ಶೂಲಿಪರಿಹಾರ. ಮತ್ತೆ ಸಮುದ್ರಫಳಾ ನಿಂಬಿಹಣ್ಣಿನ ರಸದೊಳಗೆ ಪುಡಿಮಾಡಿ ಹಾಕಿದರೆ ಶೂಲಿನಾಶ. ಮತ್ತೆ ಕಿವಿ ಸೋರೋದಕ್ಕೆ, ಕುರಿತುಪ್ಪ ದೊಳಗೆ ಹಂಣಿಯುಕ್ಕಿಯುಲಿ ತಿಕ್ಕಿ ರಸಾ ತೆಗೆದು ಹಾಕಿ ಮೂರು ತಟಕು ಕಿವಿ ವಳಗೆ ಬಿಟ್ಟರೆ ಶೂಲಿನಾಶ. ಮತ್ತೆ ಕಿವಿಸೋರಿ ಕೀವ ಬೀಳುತ್ತಿದ್ದರೆ ನುಗ್ಗೀ ಹೂವು ವಣಗಿಸಿ 1 ಸಪ್ತಕ ಹಾಕೋದು.

ತೊನಸಿ ಕಿವಿಯಲ್ಲಿ ಹೊಕ್ಕರೆ : ಉತ್ರಾಣಿಸೊಪ್ಪು, ಕರಿಕಿರಸಾಲ ಯಂಣ್ಣಿವಳಗೆ ಮರ್ದಿಸಿ ಕಿವಿವಳಗೆ ಬಿಡೋದು, ತೊನಶಿ ಬೀಳುವದು.

ಕಿವಿ ಸೋರೋದಕ್ಕೆ : ನಾಯಿತುಳಸಿ ರಸಾ, ಕಟಕರೋಹಿಣಿ, ವಾಯಿ ವಡಂಗ, ಮೆಣಸು, ಅರೆದುಹಾಕಿ ಕಿವಿಯಲ್ಲಿ ಹಾಕಲು ಕಿವಿ ಸೋರೋದು ಬಂದ್ ಆಗುವದು.

ಕಿವದರಿಗೆ : ನೆಲದಾಳಗಡ್ಡಿ ಉತ್ರಾಣಿ ರಸದೊಳಗೆ ತೇದು ಕಿವಿಯಲ್ಲಿ ಹಿಂಡಲು ಕಿವಿ ಕೇಳುವದು.

ಅರದಲಿಗೆ : ಕಾಡಿಗ್ಗರಗು, ಮೆಣಸು, ಬೆಳ್ಳುಳ್ಳಿಬ್ಯಾಳಿ 7, ಸ್ವಲ್ಪ ಉಪ್ಪಿನ ಹರಳು ಹಾಕಿ ಅರೆದು ಕಿವಿಯೊಳಗೆ ಹಿಂಡಿ ಅರಳಿ ಇಡುವದು. ದಿನಕ್ಕೆ ಎರಡು ಸಾರಿ ಇದರಂತೆ ಮಾಡುವದು. ಅರದಲಿ ಬಾಧಾ ಪರಿಹಾರ.

ತಲೆಶೂಲಿಗೆ : ಅರ್ಧಾ ಬೇವಿನಯಲೆ ಅರ್ಧಾ ಮೆಣಸು ಅರ್ಧಾ ಬೆಳ್ಳುಳ್ಳಿ, ಹೊಸ್ತಲಬುಡಿಕಿನ ಮಣ್ಣು, ನಿಂಬೆಹಂಣಿನ ರಸದಲ್ಲಿ ತೇದು ಬಿಳೀ ಕಾಗದಕ್ಕೆ ಲೇಪನ ಮಾಡಿ ಶೇದಬೇಕು, ತಲೆಶೂಲಿ ಪರಿಹಾರವು.

ಅರ್ಧಾ ತಲೆಶೂಲಿಗೆ : ತುಂಬಿ ತೊಪ್ಪಲವ ತಂದು ಅದರೊಳಗೆ ಮೆಣಸು, ಬೆಳ್ಳುಳ್ಳಿ ಹಾಕಿ ಅರೆದು ಅರವಿಯೊಳಗೆ ಇಟ್ಟು ಎಡದಲ್ಲಿ ನೊಂದರೆ ಬಲದ ಕಿವಿಯಲ್ಲಿ ಹಿಂಡುವದು, ಬಲದಲ್ಲಿ ನೊಂದರೆ ಯಡದ ಕಿವಿಯಲ್ಲಿ ಹಿಂಡು ವದು, ತಲೆಶೂಲಿ ಪರಿಹಾರವು. ಮತ್ತೆ ಲವಂಗ ಜೇಷ್ಠಮಧು, ಕೋಷ್ಟ, ಶುಂಠಿ, ಅಳಲಿಕಾಯಿ, ಈ 5 ಸಮಾನ ಗೊಂಡು ಕಾಡಿಗ್ಗರಗಿನ ರಸದಲ್ಲಿ

ಮರ್ದಿಸಿ ಗುಳಿಗಿ ಮಾಡಿ ಒಂದು ಗುಳಗಿ ಆಕಳ ತುಪ್ಪದಲ್ಲಿ ಮೂಗಿನೊಳಗೆ ಹಾಕಿದರೆ ತಲೆಶೂಲಿ ಪರಿಹಾರವು.

ಉಷ್ಣ ಸಮ್ಮಂಧ ರೋಗಕ್ಕೆ : ಇಂಗು 1 ದುಡ್ಡು ತೂಕ, ಅಗರ ಶುಂಠಿ 1 ದುಡ್ಡು ತೂಕ, ಮಡಿವಾಳ 1 ದುಡ್ಡು ತೂಕ, ಹಾಗಲಗಡ್ಡಿ 1 ದುಡ್ಡು ತೂಕ, ಭಂಗಿ 1 ದುಡ್ಡು ತೂಕ, ಅಜಾವೋದ 1 ಪೈ ತೂಕ, ಕಾಡ ಮೇಣ 1 ಪೈ ತೂಕ, ಹಿಪ್ಪಲಿ 1 ಪೈ ತೂಕ, ಉಪ್ಪು 5 ಪೈ ತೂಕ, ವಾಯ ವಡಂಗ 1 ಪೈ ತೂಕ, ಸಜ್ಜಕಾರ 1 ಪೈ ತೂಕ, ಕೊಡಶೀಗಿ 1 ಪೈ ತೂಕ, ತಿಗಡಿ 1 ಪೈ ತೂಕ, ಈ ಜೀನಸುಗಳನ್ನೆಲ್ಲ ಕುಟ್ಟಿ ಪುಡಿಮಾಡಿ ವಸ್ತ್ರಗಳಿತವ ಮಾಡಿ ಭರಣಿ ತುಂಬಿ ಮೂರು ಬೆರಳಿನಿಂದ ಬಂದಷ್ಟು ಆಕಳ ತುಪ್ಪದಲ್ಲಿ ಕಲಶಿ ಕೊಡುವದು. ಶ್ವಾಸ ಖಾಸ, ಮೂಲವ್ಯಾಧಿ, ಭಗಂದರ, ಹೊಕ್ಕಳ ಶೂಲಿ, ವಾತಶೂಲಿ, ಗಂಧಶೂಲಿ, ಕಾಮಿಣಿ, ಪಾಂಡುರೋಗ, ಮೈಹಾದದ್ದು, ಅಡ್ಡಗೈ, ತಲೆಶೂಲಿ ಮೊದಲಾದ ರೋಗಗಳು ಮಾಣ್ಬು.

ವಾಂತಿಗೆ : ಅರದಾಳ 1 ಗ, ಸುಂಣ 9 ಗ, ಒಂದು ತಳಿಗೆಯ ವಳಗೆ ತಾಂಬರ ತಂಬಿಗೆಯಿಂದ ಮರ್ದಿಸಿ ಮಾತ್ರೆಯ ಕಟ್ಟುವದು, ಗುಂಜಾಪ್ರಮಾಣ ಬಿಳೇಯಲಿವಳಗೆ ಒಂದು ಮಾತ್ರೆಯ ತಕ್ಕೊಳ್ಳಲು ವಾಂತಿಯಾಗುವದು, ವಿಶೇಷವಾದರೆ ಬೆಂಣಿ, ಅಂಬಿಲ, ಮಜ್ಜಿಗೆ, ಅಕ್ಕಿ ಕಚ್ಚು ಕೊಟ್ಟರೆ ಉತಾರವು.

ಜುಲಾಬು ಆಗೋದಕ್ಕೆ : ಔಡಲಯಣ್ಣಿ 9 ಟಾ, ಕಾಸಿದ ಬಿಸಿ ಹಾಲು ಕೂಡಿಸಿ ಬಿಸೀನೇ ಕುಡೀಬೇಕು. ಜುಲಾಬು 7 ಸಾರೆ ಆದ ಬಳಿಕ ಘಾಬರಿ ಆದರೆ ಗೋಧಿ ಸಜ್ಜಿಕೆ, ಬೆಲ್ಲ, ತುಪ್ಪಾ ತಿನ್ನಬೇಕು ; ಉತಾರವು. ಮತ್ತೆ ಕಳ್ಳಿಹಾಲು ಒಂದು ಬಿಂದು, ಕರೆಕಡಲಿ 7 ಪುಡಿಮಾಡಿ ಕಲಸಿ ಗುಳಿಗೆಯ ಕಟ್ಟಿ ಒಂದೇ ಗುಳಿಗೆ ಕೊಡಲು ಪೂರ್ವಾಷಾಢವಾಗೋದು. ಅಕ್ಕಿ ಅನ್ನ ತುಪ್ಪಾ ಉತಾರ.

ಧ್ವನಿಗೆ ಮಾಡಿದರೆ : ನೆಲಗುಳ್ಳದ ಹಚ್ಚು ಕರೇ ಆಡಿನ ತುಪ್ಪದಲ್ಲಿ ಉದಯಕಾಲದಲ್ಲಿ ಕೊಡೋದು, ಮಾಡಿದ ಕೃತಿ ಮಾಣ್ಬು.

ತೃಷಿಗೆ : ಹುಣಚಿಗಿಡದ ತಾಟಿ ಚಕ್ಕಿಯ ತಂದು ಪುಡಿ ಮಾಡಿ ನೀರೊಳು ಹಾಕಿ ಕುಡಿಯಲು ತೃಷಿ ಮಾಣ್ಬು.

ಬಾವುಗೆ : ಮರಗವ ತಂದು ಅರೆದು ಪೂಸಲು ಶರೀರದ ಬಾವು ಇಳಿವದು.

ಭೂತಭೈರವ ಅಂಜನಾ : ಬಿಳಿಸಾಸವಿ, ಇಲ್ಲಣ, ಶುಂಠಿ, ಹಿಪ್ಪಲಿ, ಬಜಿ, ಮೆಣಸು, ಇಂಗಳಮ್ಯಾಣ, ಇವಂ ಮಾನಗೊಂಡು ಅಂಬಿಲದಿಂದ ತೇದು ಹಚ್ಚಲು ಸನ್ನಿಪಾತ, ತಲೆಬ್ಯಾನಿ, ಭೂತಬಾಧಾ ಮುಂತಾದವು ಮಾಣ್ಬು.

ಅಂಜನಕ್ರಮ : ಈಶ್ವರಿಬೇರು, ಬಿಳೆಗಣಜಲಿಬೇರು, ಹಾವಮೆಕ್ಕಿ ಬೇರು, ಹುಲಗಲಬೀಜಾ, ಶುಂಠಿ, ಮೆಣಸು, ಹಿಪ್ಪಲಿ, ಇಂಗಳಮೇಣ, ಇಷ್ಟನ್ನು ಸಮಾನ ಗೊಂಡು ಚೂರ್ಣ ಮಾಡಿ ನಿಂಬೆ ಹುಳಿಯಲ್ಲಿ ಮರ್ಧಿಸಿ ಕಡಲಿ ಪ್ರಮಾಣ ಗುಳಗಿಯ ಮಾಡಿ ಮಣಗಿಸಿ ಇಡುವದು. ಈ ಗುಳಗಿಯುನರೆದು ಕಂಣಿಗೆ ಹಚ್ಚಲು ತ್ರಿದೋಷ, ಸನ್ನಿಪಾತ, ಗ್ರಹಭೂತ, ಛಳಿ, ಜ್ವರ ಮುಲ ರೋಗ ಮೊದಲಾದ ಸರ್ವವೂ ಕೆಡುವವು.

ನೇತ್ರರೋಗಕ್ಕೆ : ಹೊನಗನ್ನಿಯ ತೊಪ್ಪಲು, ಅಲ್ಲೂರಿ ತೊಪ್ಪಲು ಹೊನ್ನವರಿ ತೊಪ್ಪಲು, ನೆಲ್ಲಿಕಾಯಿ (ಬೀಜ ತೆಗದದ್ದು) ಈ ನಾಲ್ಕನ್ನು ಸಮಾನಗೊಂಡು ಮರಳೊಳಗೆ ಕುಟ್ಟಿ ಆಕಳ ಮೊಸರು ಹಾಕಿ ಶೇರು ರಸವ ತೆಗದು, ಅದಕ್ಕೆ ಅರ್ಧಶೇರು ಆಕಳ ತುಪ್ಪವ ಹಾಕಿ ಅಚ್ಛೇರ ಔಡಲಯುಂಣಿ ಕೂಡಿಸಿ ಏಕತ್ರ ಸಮರಸ ಮಾಡಿ 7 ದಿವಸ ಮಾಳಿಗಿಯ ಮೇಲೆ ಬಿಸಲ ಪುಟಕ್ಕೆ ಇಟ್ಟು ನೆತ್ತಿಗೆ ಊಡುವದು. ನೇತ್ರರೋಗ ಪರಿಹಾರ. ಪಥ್ಯ ಹುಳಿ, ಖಾರ, ನಂಜಿನ ಪದಾರ್ಥ ಬಿಡಬೇಕು.

ನರೆಕರೇವು ಆಗೋದಕ್ಕೆ : ಕರೇ ಆಕಳ ಬೆಂಣಿ ಒಂದು ಶೇರು, ಕೇರಿ ಹರಳು ಒಂದು ಶೇರು ಕತ್ತರಿಸಿ ಹಾಕಿ, ಬೆಂಣಿವಳಗೆ ಕುದಿಸಿ, ಆ ರಸವ ಹಿಂಡಿ ಕೊಂಡು ರಸ 3 ಗ, ಜೇನುತುಪ್ಪ 3 ಗ, ಈ ಎರಡನ್ನು ಕೊಳ್ಳಲು ನರಕರೇ ವಾಗುವವು. ಮತ್ತೆ ಮೋಹನ ಬಿಡುವದಕ್ಕೆ–ನೆಲ್ಲಿಯುಬೇರು, ಗೋಮೂತ್ರದಲ್ಲಿ ತೇದು ಕುಡಿಸುವದು. ಹತ್ತಿಯ ಕಾಯಿ ನಿಲ್ಲಿಸುವದು, ಮೋಹನ ಬಿಡುವದು.

ಖಡ್ಗ ಸ್ತಂಭನಕ್ಕೆ : ನೆಲಗೊಡಚಿಗನಬೇರು, ನಾಯಿ ತುಳಶಿಯ ಬೇರು, ಅರಶಿಣ ರಸದಲ್ಲಿ ಪೂಜೆಯ ಮಾಡಿ ಕಟ್ಟಿ ಕಡಿಯುಲು ಧಾರಕಟ್ಟು.

ಸಮಸ್ತ ಪಿತ್ತಕ್ಕೆ : ಗಜಾಂಕುಶವೆಂದರೆ ದೊಡ್ಡನೆಗ್ಗಿಲು ಅಚ್ಛೇರು, ಚೋಪಚಿನ್ನಿ 3 ಪೈ ತೂಕ, ಖುರಾಸಾನಿ ಅಜಿವಾನ 3 ಪೈ ತೂಕ, ಸಾಲಾ

ಮಿಸ್ರಿ 3 ಪೈ ತೂಕ, ಮೆಣಸು 3 ಪೈ ತೂಕ, ಶುಂಠಿ 3 ಪೈ ತೂಕ, ಹಿಪ್ಪಲಿ 3 ಪೈ ತೂಕ, ಅಳ್ಳಿಕಾಯಿ 3 ಪೈ ತೂಕ, ಕೇಸರಿ 1 ಪೈ ತೂಕ, ತಾರಿಕಾಯಿ 3 ಪೈ ತೂಕ, ನೆಲ್ಲಿಗಿಡ 3 ಪೈ ತೂಕ, ದಾಲಚಿನ್ನಿ 3 ಪೈ ತೂಕ, ಪ್ರತಾಜ 3 ಪೈ ತೂಕ, ನಾಗಕೇಶರ 3 ಪೈ ತೂಕ, ಕಬಾಬಚಿನ್ನಿ 3 ಪೈ ತೂಕ, ಜಟಾ ಮಾಂಸಿ 2 ಪೈ ತೂಕ, ಲವಂಗ 1 ಪೈ ತೂಕ, ಪತ್ರಿ 1 ಪೈ ತೂಕ, ಜಾಜಿ ಕಾಯಿ 1 ಪೈ ತೂಕ, ಯಾಲಕ್ಕಿ 1 ಪೈ ತೂಕ, ಚಿನ್ನಿ ಸಕ್ಕರಿ 3 ಶೇರು, ಆಕಳಹಾಲು 6 ಶೇರು, ಆಕಳ ತುಪ್ಪ ಅಚ್ಛೇರು, ಇಂತು ಜೀನಸಗಳನೆಲ್ಲಾ ಕೂಡಿಸಿ ತರುವಾಯ ಪಾಕ ಮಾಡುವ ಕ್ರಮ – ಮುಂಚೆ, ದೊಡ್ಡನೆಗ್ಗಲವ ಶೋಧಿಸಿದ ಚೂರ್ಣವಂನು ಹಾಲಿನಲ್ಲಿ ಇಡುವದು, ಅಡಗಿ ಫೇಡೇದ ಹದಕ್ಕೆ ಬಂದರೆ ತುಪ್ಪ, ಸಕ್ಕರಿ ಹಾಕಿ ಕೂಡಿಸಿ ಎಲ್ಲಾ ಪ್ರತ್ಯೇಕ ಚೂರ್ಣವನ್ನು ವಚನ ಪ್ರಕಾರ ಹಾಕುವದು ; ಮೇಲೆ ಮೇಲೆ ತಿರವಿ ಕೂಡಿಸುತ್ತಾ ಇರಬೇಕು. ಉಂಡಿಯು ಹದಕ್ಕೆ ಬಂದರೆ ಕಟ್ಟಿಗೆಯಿಂದ ತೆಗೆದು ಒಂದೇ ಪ್ರಕಾರವಾಗಿ ಸಮ ರಸವಾಗಿ ಮರ್ದಿಸಿ ಕೂಡಿಸಿ ಇಳಿಸಿಕೊಂಡು ದಿನಂಪ್ರತಿಯಲ್ಲು 1 ತೊಲಿ ಚೂರ್ಣವನ್ನು 40 ದಿವಸ ಕೊಳ್ಳಲು, ಸಮಸ್ತ ಪೈತ್ಯ ಮೊದಲಾದ ರೋಗ ಗಳು ನಾಶನವು.

ಛಳಿಜ್ವರಕ್ಕೆ : ಔಡಲಮುಗಳು, ಉಪ್ಪು ಕೂಡಿಸಿ ಕೈಲೆ ತಿಕ್ಕಿ ವೀಳ್ಯೆ ದೆಲೆಯೊಳಗೆ ಹಾಕಿ ತಿನ್ನಿಸಿದರೆ 3 ದಿನಕ್ಕೆ ಛಳಿಜ್ವರ ಮಾಣ್ಬು.

ಅಸ್ತಿಗತಜ್ವರಕ್ಕೆ : ಶುಂಠಿ 1 ಪೈ ತೂಕ, ಲವಂಗ 7, ತುಲಸಿ 1 ಪೈ ತೂಕ, ಖಾರಿಕಾ 1, ದಾಲಚಿನ್ನಿ 1 ಪೈ ತೂಕ, ಕಲ್ಲಗಡಲಿ 1 ಪೈ ತೂಕ, ಕಲ್ಲಸಕ್ಕರಿ 1 ಪೈ ತೂಕ, ಈ 7 ಜೀನಸನ್ನು 1 ಶೇರು ನೀರು ಇಟ್ಟು ನವಪಾಕ ಆಗುವಂತೆ ಕಾಡೆ ಇಳಿಸಿಕೊಡುವದು. ಪಥ್ಯ ಅಕ್ಕಿ ಅನ್ನ ತೊಗರಿಕಟ್ಟು, ಆಕಳಹಾಲು, ಮೆಂತ್ಯದ ಪಲ್ಲೆ, ರೊಟ್ಟಿ ಇಷ್ಟನ್ನು ತಕ್ಕೊಂಬುವದು.

ಶ್ಲೇಷ್ಮಜ್ವರಕ್ಕೆ : ಅಲ್ಲದ ರಸ 1 ದುಡ್ಡು ತೂಕ, ಹಿಪ್ಪಲಿ, ಜೇನು ತುಪ್ಪ ಕೂಡಿಸಿ ಕೊಡುವದು, ಜ್ವರನಾಶ. ಮತ್ತೆ ನೆಲಗುಳ್ಳಾ, ಹೆಗ್ಗುಳ್ಳಾ, ಬಜಿ, ಶುಂಠಿ, ಅಲ್ಲ, ಈ ಸಮ ಭಾಗ ಕಷಾಯ ಕೊಡಲು ಜ್ವರನಾಶ. ಮತ್ತೆ ಪಡವಲ, ತ್ರಿಫಲ, ಲೋಳಸರ, ಕಟಕರೋಹಿಣಿ, ಶುಂಠಿ, ಗುಳ್ಳ, ಕಷಾಯ ಕೊಡಲು ನಾಶ. ಮತ್ತೆ ಕಾಡಿಗ್ಗರಗು, ನೆಲಗುಂಬಳ, ಹಿಪ್ಪಲಿ, ಬಜೆ, ಶುಂಠಿ,

ಅಜಿವಾನ, ಕಷಾಯ ಕೊಡಲು ಜ್ವರನಾಶ.

ನಿತ್ಯಛಳಿಗೆ : ಕಳ್ಳಿಮುಗ್ಗಳು 7 ವೀಳೆದೆಲೆ ಅಡಿಕಿಯೊಡನೆ ಕೊಡಲು ಛಳಿನಾಶ. ಮತ್ತೆ ಶಂಖಪಾಷಾಣ 1 ದುಡ್ಡು ತೂಕ ತಂದು ಮದ್ದಗುಣಕಿ ರಸದಲ್ಲಿ ಅರೆದು ಸೂರ್ಯಪುಟ ಮೂರು ದಿವಸ ಇದನ್ನು ಕೊಡುವದು. ಅದರಲ್ಲಿ ಮೂರು ಲವಂಗ ಹಾಕಿ ಅರೆದು ಹೆಸರಕಾಳ ಪ್ರಮಾಣ ಮಾತ್ರೆಯು ಕಟ್ಟಿ ಹಾಗೇ ತಿಂಬೋದು, ಈ ಮಾತ್ರೆಯಿಂದ ಛಳಿಜ್ವರ ಮಾಣ್ಬು. ಉಷ್ಣದಿಂದ ಹುಳ ಬಿದ್ದಿದ್ದರೂ ಹೋಗುವದು. ಪಥ್ಯ ಹುಳಿ ಬಿಡುವದು. ಮತ್ತೆ, ಅರದಾಳ ಹಾಗಲರಸ, ಸುಣ್ಣಾ, ಮೂರನ್ನು ಸಮಭಾಗ ಅರೆದು ಗುಳಗಿ ಕಟ್ಟಿ ಬೆಲ್ಲದಲ್ಲಿ ಹಾಕಿ ಕೊಡುವದು. ಪಥ್ಯ, ಉಪ್ಪುಯಿಲ್ಲದ ಅನ್ನಮೊಸರು ತಿನ್ನಬೇಕು.

ಚತುರ್ಥಿಛಳಿಗೆ : ಸುಣ್ಣಾ ಶೋಧಿಸಿ ಅರದಾಳ ಅರೆದು ಅಲ್ಲದ ರಸದೊಳಗೆ ಗುಂಜಾ ಪ್ರಮಾಣ ಮಾತ್ರೆ ಕಟ್ಟಿ ಮೂರು ದಿನ ಅಥವಾ 1 ಸಪ್ತಕ ದಿನ 1 ರಂತೆ ಸೇವಿಸುವದು. ಪಥ್ಯ ಕ್ಷೀರಾನ್ನ ಮತ್ತೆ, ತುಂಬಿಹೂವು, ಜೀರಗಿ, ಮೆಣಸು ಅರೆದು ಗುಳಿಗಿಮಾಡಿ ದಿನಕ್ಕೆ 1 ರಂತೆ ತಕ್ಕೊಂಬುವದು. ಕ್ಷೀರಾನ್ನ ಭೋಜನವು.

ಪಿತ್ತಜ್ವರಕ್ಕೆ : ಪರಿಪಾಷ್ಟಕ 1 ದುಡ್ಡುತೂಕ, ಎರಡು ಶೇರು ನೀರುಯಿಟ್ಟು ನವಪಾಕ ಇಳಿಸಿ ಕಷಾಯ ಮಾಡಿ 3 ದಿನ ಅಥವಾ 1 ಸಪ್ತಕ ಕಾಡೆ ನಿಃಕಾಡೆ ಕೊಡಲು ಪರಿಹಾರ. ಮತ್ತೆ ಜೇಕಿನಗಡ್ಡಿ, ಕೋಳಿಹೂವಿನಗಡ್ಡಿ, ಅಮರದ ಬಳ್ಳಿ, ಸಮಭಾಗ ದೀಪದ್ರಾಕ್ಷಿ 9 ಪೈ ತೂಕ, ಬಾಳದ ಬೇರು 1 ಪೈ ತೂಕ, ರಕ್ತಚಂದನ 1 ಪೈ ತೂಕ, ಪಡವಲತಾಟಿ 1 ಪೈ ತೂಕ, ಈ 7 ಜೀನಸನ್ನು ಕೂಡಿಸಿ ಕಷಾಯ ಮಾಡಿ ಕೊಟ್ಟರೆ ಪಿತ್ತಜ್ವರ ನಾಶ.

ಜ್ವರ ಛಳಿ ಹುಗಳು ಆಗಿದ್ದರೆ : ನಿಂಬಿಬೀಜ 2, ಕಟಕರೋಹಿಣಿ ಒಂದು ಚೂರು, ಜೀರಗಿ, ಚಿನ್ನಿಸಕ್ಕರಿ, ಕೂಡಿಸಿ ನಿಂಬಿ ಹುಳಿಯೊಳಗೆ ಅರೆದು ನಿಂಬಿ ಹುಳಿಯೊಳಗೆ ಕೇರು ತೇದು ಆ ನಾಲ್ಕು ಜೀನಸಿನೊಳಗೆ ಕೀರ ಕೂಡಿಸಿ ಗುಳಗಿ ಮಾಡಿ ಅಂಗೈಯೊಳಗೆ ಇಟ್ಟು ಕೆಳಗೆ ಮೇಲೆ ಜೇನುತುಪ್ಪ ಹಾಕಿ ತಕ್ಕೋಬೇಕು. ಹೊಟ್ಟೆ ಝಾಡಿಸಿ ಸರ್ವ ಪ್ರಕಾರದ ಜ್ವರ ಮುಂತಾದವು ಪರಿಹಾರ. 3 ದಿವಸ ನಂಜಿನ ಪದಾರ್ಥ ಬಿಡುವದು. ಮತ್ತೆ, ಪಿತ್ತಜ್ವರಕ್ಕೆ—ಹಳೆ ಬಿದರ

ಚೂರು, ತುಲಸಿ ದುಗ್ಗಾಣಿತೂಕ, ಶುಂಠಿ, ಲವಂಗ ಒಂದೊಂದು ಹಾಕಿ ಕಷಾಯ ಮಾಡಿ ಕೊಡುವದು.

ಅಸ್ತಿಗತಜ್ವರಕ್ಕೆ : ಬಿಲ್ಪತ್ರಿ ತೊಪ್ಪಲು ಥಡೆ, ಅಥವಾ ಮೂರು ಪಂಚೇರು ಸುಮಾರು ತಂದು ಅದರೊಳಗೆ ನಾಲ್ಕು ಉಳ್ಳೀಗಡ್ಡಿ, ಒಂದು ಗಡಿಗಿ ಯೊಳಗೆ ಹಾಕಿ ಹೊತ್ತುವ ಪರಿಯಂತರ ಉರಿ ಹಚ್ಚಿ ತೊಪ್ಪಲು ಸುಟ್ಟು ಬೂದಿ ಆಗುವ ಸುಮಾರಕ್ಕೆ ನೋಡಿ ಲವಂಗ 20, ಜೀರಿಗಿ 1 ಪಾವಶೇರು, ಹಾಕಿ ಜೀರಿಗಿ, ಲವಂಗ, ಸುಟ್ಟ ಸುಮಾರ ನೋಡಿ, ನೀರು ನಾಲ್ಕೈದು ತಂಬಿಗೆ ಹಾಕುವದು. ಆ ನೀರು ಅಟ್ಟಿಸಿ ಒಂದು ತಂಬಿಗೆ ಉಳದದ್ದು 1 ಗಡಿಗೆಯೊಳಗೆ ಶೋಧಿಸಿ ಇಟ್ಟುಕೊಂಬೋದು. ನಿತ್ಯದಲ್ಲಿ ಒಂದು ಪಾವಶೇರು ಸಕ್ಕರಿ ಹಾಕಿ ತಕ್ಕೊಂಬುವದು. 1 ಸಪ್ತಕ ಪರಿಯಂತರ ನಂಜು ತಿನಬಾರದು.

ಛಳಿಜ್ವರಕ್ಕೆ : ಅರದಾಳ 1 ಪೈ ತೂಕ, ಸುಣ್ಣ 1 ಪೈ ತೂಕ ಎರಡನ್ನು ಹಾಗಲರಸದೊಳಗೆ ಅರೆದು ಕಡಲೆಕಾಳ ಪ್ರಮಾಣ ಮಾತ್ರೆಯ ಮಾಡಿ ನೀರೊ ಳಗೆ ಕೊಡುವದು, ವಾಂತಿಯಾದರೆ ಹಿಪ್ಪಲಿ, ತುಪ್ಪಾ ಉತಾರ.

ಮತ್ತೆ ಜ್ವರಕ್ಕೆ : ಶುಂಠಿ, ಲವಂಗ, ದೀಪದ್ರಾಕ್ಷಿ ಖಾರೀಕಾ, ಬಡೇ ಸೋಪು, ಬಾಳದಬೇರು, ಕಲ್ಲಸಬ್ಬಸಿಗಿ, ಕಕ್ಕಿತಾಟಿ, ಕಲ್ಲಸಕ್ಕರಿ ಕಷಾಯ ಮಾಡಿ ಕೊಡುವದು, ಸಂಜಿನ ಪದಾರ್ಥ ತಿನ್ನಬಾರದು.

ಹಳೇಜ್ವರಕ್ಕೆ : ಔಡಲಯಂಣಿ, ಒಳ್ಳೀಯಂಣಿ, ತುಪ್ಪ ಮೂರು ಕೊಟ್ಟರೆ ಸಾರಣಿ ಆಗೋದು ; ಜ್ವರನಾಶ.

ಮದನವಿಲಾಸ ಮಾತ್ರಿಕ್ರಮು : ಪತ್ರಿ $1\frac{1}{2}$ ಪೈ ತೂಕ, ದಾಲಚಿನ್ನಿ $1\frac{1}{2}$ ಪೈ ತೂಕ, ಲವಂಗ $1\frac{1}{2}$ ಪೈ ತೂಕ, ಆಕಳಕರಿ 1 ದುಡ್ಡುತೂಕ, ಹಿಪ್ಪಲಿ $1\frac{1}{2}$ ಪೈ ತೂಕ, ಶುಂಠಿ $1\frac{1}{2}$ ಪೈ ತೂಕ, ಇಂಗಳೀಕ $1\frac{1}{2}$ ಪೈ ತೂಕ, ಈ ಪ್ರಕಾರ ಜೀನಸ ಹಾಕಿ ಅದರೊಳಗೆ ವಿಳ್ಳೀದೆಲೆರಸ, ಅಲ್ಲದರಸ, ಈ 2 ರಸ ದೊಳಗೆ ಅರೆದು ಕಡಲಿಕಾಳ ಪ್ರಮಾಣ ಗುಳಗಿ ಮಾಡಿ ಕೊಡಬೇಕು.

ನಾರಸಿಂಹಚೂರ್ಣಕ್ರಮು : ಆಷಾಢಿಯಬೇರಿನ ಚೂರ್ಣ 6 ಪಾಲು, ನೆಲಿದಾಳಚೂರ್ಣ 20 ಪಾಲು, ಅಮೃತದಬಳ್ಳಿಚೂರ್ಣ 25 ಪಾಲು, ಗ್ಯಾಃರುಕಾಯಿ 32 ಪಾಲು, ಚಿತ್ರಮೂಲ 10 ಪಾಲು, ತ್ರಿಫಳ ನೆಲಗುಂಬ ಇವು ಪ್ರತ್ಯೇಕ 16 ಪಾಲು, ತ್ರಿಕಟುಕ 8 ಪಾಲು, ಸಕ್ಕರಿ 70 ಪಾಲು,

ಜೇನುತುಪ್ಪ 35 ಪಾಲು, ತುಪ್ಪ 17 ಪಾಲು, ಇವು ಸಮರಸ ಮಾಡಿ ತುಪ್ಪವ ಕಾಸಿದ ಮಡಿಕೆಯಲ್ಲಿ ತುಂಬಿ, ಅದರನ್ನ ಮುಚ್ಚಿ ಧಾನ್ಯದೊಳು ಒಂದು ಪಕ್ಷ ದಿವಸ ಹೂಳಿ ತೆಗದು ಮಂದುಪಾಲು ಉದಯಕಾಲದಲ್ಲಿ ನಿತ್ಯ ಸೇವಿಸುವದು, ಇಚ್ಛಾಭೋಜನವ ಮಾಡುವದು. ಈ ನಾರಸಿಂಹಚೂರ್ಣ ಭೃಂಗಾಮ್ಲಕ್ಕೆ ಸೇವನೆಯಿಂದ ಸಮಸ್ತರೋಗವು ಪರಿಹಾರವಾಗುವವು.

ಭೃಂಗಾಮ್ಲಕ್ಕೆ ತೈಲಪ್ರಕರಣ : ಕಾಡಿಗ್ಗರಗಿನರಸ 2 ಶೇರು ತೂಕ, ಹೆನಗನ್ನಿಯರಸ 3 ಶೇ, ಮೂಲಂಗಿಯರಸ 2 ಶೇರು, ನಿಂಬಿಹುಳಿ 1 ಶೇರು, ತೆಂಗಿನಕಾಯಿ ಯಳೆನೀರು 3 ಶೇರು, ಯಳ್ಳುಯಂಣಿ 4 ಶೇರು, ಆಕಳತುಪ್ಪ 1 ಶೇರು, ಆಕಳಹಾಲು 1 ಶೇರು, ಖರ್ಚೂರ 9 ಪೈ ತೂಕ, ಅಂಬಿಹಳದಿ 1 ಪಾವ ಶೇರು, ಜೇಷ್ಟಮಧು 3 ಪೈ ತೂಕ, ಕರ್ಪೂರ 3 ಪೈ ತೂಕ, ಬಾಳದ ಬೇರು 1 ಶೇರು, ನೆಲ್ಲಿಚೆಟ್ಟು 2 ಶೇರು, ಜೀರಗಿ ಅಚ್ಚೇರು, ಈ ಜೀನಸು ಕೂಡಿ 2 ತಂಬಿಗಿ ನೀರು ಇಟ್ಟು, 2 ಶೇರು ನೀರು ಇಳಿಸಿ, ಈ ತೈಲವ ಭ್ರಮಣಪಿತ್ತಕ್ಕೆ ತಲೆಗೆ ಹಚ್ಚುವದು. ನೀರು ಕಾಸಿ ಬೆರಕಿ ಹಾಕದೆ ಅದರೊಳು ಹಾಕತಕ್ಕ ತೊಪ್ಪಲು, ಬೇವು, ಹಲಸು, ಮಾವು, ಹುಣಚಿ, ಅರಿಶಿನ ಈ ಪಂಚಪಲ್ಲವ ನೀರಿನೊಳಗೆ ಹಾಕಿ ಸ್ನಾನವ ಮಾಡಿಸುವದು.

ಪಾದರಸ ವಡಧಿದ್ದರೆ : ಗಜಗಿನ ತೊಪ್ಪಲದ ರಸ 9 ಪೈ ತೂಕ, ಜೀರಗಿ 1 ಪೈ ತೂಕ, ಸಕ್ಕರಿ 1 ಪೈ ತೂಕ, ಈ ಮೂರನ್ನು ಏಕತ್ರಮಾಡಿ ಹಗಳು ಕುಡಿಸಬೇಕು, ಅಂದರೆ ಮೂತ್ರದ್ವಾರದಿಂದ ಬಿದ್ದು ಹೋಗುವದು. ಪಥ್ಯ ತುಪ್ಪ, ತುಕಡಿ ಸಕ್ಕರಿ ಉಣಬೇಕು. ಮತ್ತೆ ಪಾದರಸಾ 2 ತೊಲಿ, ಮುಡದಾರಶಿಂಗಿ 2 ತೊಲಿ, ಆಕಳಬೆಣ್ಣಿ ಪಕ್ಕಾ ಪಾವಶೇರು ತಂದು ವೀಳ್ಯದೆಲಿ ಯಾಗಲೀ ಅಥವಾ ಕರೇ ಮದಗುಣಕಿ ಯಲಿಯಾಗಲೀ ಅಥವಾ ಕರಹತ್ತಿ ತೊಪ್ಪಲರಸವಾಗಲೀ ; ಇದರಂತೆ ತಾಂಬ್ರವಾಗಲೀ ಹಿತ್ತಾಳಿ ಪರಾತವಾಗಲೀ ಮುಂಚೆ ರಸಹಾಕಿ ಅದರೊಳಗೆ ಪಾರಹಾಕಿ ತಂಬಿಗಿ ಬುಡದಿಂದ ಮರ್ದಿಸ ಬೇಕು, ಈ ಪ್ರಕಾರ ಗೋಟಾಡಿಸುವದರೊಳಗಾಗಿ ಪಾರಜಾ ಪರಾತಕ್ಕೆ ಲೇಪಿಸಿ ಹೋಗುತ್ತದೆ. ಅಲ್ಲಿಂದ ಮುಡದಾರಶಿಂಗಿ ಪುಡಿ ಹಾಕಿ ಮರ್ದಿಸಬೇಕು. ಅಲ್ಲಿಂದ ಬೆಣ್ಣೆ (ಎಮ್ಮಿದಾದರು) ಕೂಡಿಸಿ ತಿಕ್ಕಿ ಎಲ್ಲಾನ್ನು ತೆಗಿದು ಹೊಸಾ

ಚಿಪ್ಪಿನಲ್ಲಿ ಇಡಿಸೋದು. ನಿತ್ಯ ಕೈಕಾಲಿಗೆ ಸಂಜೆ ತನಕಾ ಮೇಲಿಂದ ಮೇಲೆ ಹಚ್ಚಿ ತಿಕ್ಕಬೇಕು. ಅಂದರೆ ರಸವಡದದ್ದು ಮಾಣ್ಗು.

ಕಾಲು ವಡದದ್ದಕ್ಕೆ : ಉಪ್ಪು, ಎಳ್ಳು, ಅರಿಶಿನ, ದತ್ತೂರಿಬೀಜ, ಎಮ್ಮಿ ಮೊಸರು ಗೋಮೂತ್ರದಲ್ಲಾಗಲೀ ಈ ಸರ್ವ ಜೀನಸು ಅರೆದು ಕಾಲಿಗೆ ಹಚ್ಚ ಬೇಕು. ಕಾಲುವಡದದ್ದು ಮಾಣ್ಗು.

ಪಾದರಸ ಮೈಮೇಲೆ ವಡದಿದ್ದರೆ : ಕರಿಹತ್ತಿ ತೊಪ್ಪಲ ವಂದು ಹಿಡಿ, ತೊಟ್ಟಲ ತೊಪ್ಪಲ ವಂದು ಹಿಡಿ, ವೀಳ್ಯದೆಲಿ ಮೂರುಹಿಡಿ ಕುಟ್ಟಿ ರಸ ತೆಗಿದು ಸಂಜೆ ಮುಂಜಾನೆ ಕೊಡುವದು. ಪಥ್ಯ ಅಲವಣ ತುಪ್ಪ ಅನ್ನ ಊಟ ಮಾಡ ಬೇಕು ; ಥಣ್ಣೀರು ಕುಡೀಬೇಕು. ಮತ್ತೆ ಲವಂಗ 6 ಪೈ ತೂಕ, ರಸ ಕರ್ಪೂರ 1 ಪೈ ತೂಕ, ವೀಳ್ಯದೆಲಿ ರಸದಲ್ಲಿ ಅರೆದು ಗುಳಗಿ ಮಾಡಿ ತುಪ್ಪದ ಸಂಗಡ ತಿಂಬೋದು. ಅನುಪಾನ ಅನ್ನ ತುಪ್ಪ 3 ದಿವಸ ಅಥವಾ 5 ದಿವಸ ತಕ್ಕೋಬೇಕು. ಆಮೇಲೆ ಹುರಳಿಕಟ್ಟು, ಮೆಣಸಿನಪುಡಿ, ತುಪ್ಪ ಕುಡೀಬೇಕು ; ಅನ್ನ ಊಟ ಮಾಡಬೇಕು. ಮ್ಲೇಂಛರು ಮಾಂಸಕುಚ್ಚಿದ ನೀರು ಕುಡೀ ಬೇಕು ; ರಸ ವಡದದ್ದು ಹೋಗುವದು.

ಕೈಯೊಳಗೆ ಪಾದರಸ ವಡದರೆ : ಈ ಹೀರಿ ತೊಪ್ಪಲ ರಸ 2 ಶೇರು ತೆಗದು ಆ ರಸ ಕೈಗೆ ಮೈಗೆ ತಿಕ್ಕೋದು ; ಥಂಡಿಯಾಗಿ ಮೈ ನಡಗಿದರೆ ಎರಡು ಘಳಿಗೆ ಮಲಗೋದು ; ಪಥ್ಯ ನಂಜು ತಿನ್ನಬಾರದು. ಮೂರು ದಿವಸ ತಿಕ್ಕಿದರೆ ಪರಿಹಾರವಾಗೋದು.

ಸುಂಬಳಖಾರ ತಿಂದವರಿಗೆ : ಕಿರಕಸಾಲಿ ರಸಾ ಚಿನ್ನಿಸಕ್ಕರಿ ಹಾಕಿ ಕೊಟ್ಟರೆ ವಿಷ ಉತಾರವಾಗೋದು.

ಇಲಿ ಕಡಿದದ್ದಕ್ಕೆ : ಖೈಹೀರೆಕಾಯಿ, ಕೋಷ್ಟ, ಬಜಿ ಈ ಸಮಭಾಗ ವನ್ನು ಕಾಡೆಮಾಡಿ ಅದರಲ್ಲಿ ಗೋಮೂತ್ರವ ಹಾಕಿ ಮೂರು ದಿವಸ ಅಥವಾ ಒಂದು ಸಪ್ತಕ ಕೊಟ್ಟರೆ ವಿಷ ಉತಾರ. ಪಥ್ಯ ಅನ್ನ ಹುರಳಿಕಟ್ಟು ತಕ್ಕೊಂಬು ವದು.

ನಾಯಿ ಕಡಿದ ವಿಷಕ್ಕೆ : ಹಿಪ್ಪಲಿ, ದತ್ತೂರಿಬೀಜ ಎರಡನ್ನು ಚೂರ್ಣ ಮಾಡಿ ಕೊಟ್ಟರೆ ಉತಾರ. ವಿಷ ಹೋದೀತು.

ಭೂತಚೇಷ್ಟಕ್ಕೆ : ಈಶ್ವರಿಬೇರು, ಸಮುದ್ರಫಳಾ, ಅರದಾಳ, ಕೋಷ್ಟ, ಖೈಹೀರೆಬಿಜಾ, ಕೆಂಪು ಚೊಗಚಿಬೇರು, ತ್ರಿಕಟುಕ, ಈ ಜೀನಸುಗಳನೆಲ್ಲಾ ಹೋತನ ಮೂತ್ರದಲ್ಲಿ ಅರೆದು ಮೂಗಿನೊಳಗೆ ಹಚ್ಚುವದು, ಭೂತಬಾಧೆ ಪರಿಹಾರ.

ಹುಂಣಿಗೆ : ಪಟಕ, ಪಾಷಾಣ 3 ಪೈ ತೂಕ, ಬಿಳೀಕಾಂಚು 2 ಪೈ ತೂಕ, ಯಾಲಕ್ಕಿಕಾಯಿ 1 ಪೈ ತೂಕ ಪುಡಿ, ಕರೇವಿಳ್ಳೇದಲಿ 125 ಇದರ ರಸದೊಳಗೆ ಸದರೀ ಜೀನಸು ರಸ ಅಟ್ಟಸೋ ಪರಿಯಂತರ ಅದರೊಳಗೆ ಅರೆದು ಉದ್ದಿನಕಾಳ ಪ್ರಮಾಣ ಮಾತ್ರೆಯು ಮಾಡಿ ಮೂರು ದಿವಸ ಕೊಡಬೇಕು. ಪಥ್ಯ ಹಾಲು, ಬೆಲ್ಲ, ಸಕ್ಕರಿ ಬಿಡಬೇಕು. ರೋಗ ಪರಿಹಾರ.

ಪ್ರಜಾಪತಿ ಬಾತಿದ್ದರೆ : ಬೇವಿನ ವಳತಾಟಿ ಕೆಂಪಗೆ ಇದ್ದದ್ದು, ಯಾಲಕ್ಕಿ ಕಾಳು ನಾಲ್ಕು, ಜೀರಗಿ, ಸಕ್ಕರಿ, ಮೂರು ಬಟ್ಟನಿಂದ ಹಾಕೋದು. ಹಳೆ ನೀರೊಳಗೆ ಕೊಡಲು ಮೂರು ದಿನಕ್ಕೆ ಪರಿಹಾರ. ಪಥ್ಯ ಅನ್ನ ಊಟ ಮಾಡು ವದು ; ಹುಂಣು ಇದ್ದರೂ ನಾಶ.

ಲಿಂಗಲೇಪನಸಿದ್ಧಿ : ಧಾತಕಿ ಕುಸುಮವೆಂದರೆ ಕಲ್ಲು ಹೂವು, ಗುಗ್ಗುಳ, ಅಡಕಿ ಬೊಳ್ಳಬದಿರದ ಅಂಟು, ಅಂದರೆ ತೆರೆದ ಅಂಟು, ಜೇನುತುಪ್ಪದಲ್ಲಿ ಮರ್ದಿಸಿ ಲೇಪನ ಮಾಡಿದರೆ ಬಾತದ್ದು ಪರಿಹಾರ. ಮತ್ತೆ ಲಿಂಗಧೂಪಕ್ಕೆ ಇಂಗಳೀಕ 3 ದುಡ್ಡು ತೂಕ, ಲವಂಗ 1 ದುಡ್ಡು ತೂಕ, ಯುಕ್ಕಿ ಇದ್ದಲಿ ಬೆಂಕಿ ಮಾಡಿ ಎರಡೂ ಪುಡಿಹಾಕಿ ಹೊಗೆ ಕೊಡುವದು. ಪಥ್ಯ ದಧ್ಯಾನ್ನ.

ಮತ್ತೆ ಹುಂಣಿಗೆ : ತಪಸಿತಾಟಿರಸ 9 ಪೈ ತೂಕ, ಲಿಂಬೆಹಂಣು 10 ಇವುಗಳ ರಸ ಎರಡು ಮರ್ದಿಸಿ ಪ್ರಾತಃಕಾಲ, ಸಾಯಂಕಾಲ 7 ದಿವಸ ಹಚ್ಚಲು ಹುಂಣು ಪರಿಹಾರ. ಪಥ್ಯ ಉಪ್ಪು ಇಲ್ಲದ ನವಣೆ ಅನ್ನ, ಗೋಧಿ ಅನ್ನ ಉಣಬೇಕು. ಮತ್ತೆ ಬಕ್ಕಿ ಶಾಂತಾಗಬೇಕಾದರೆ ಅರಳಿ ಚಕ್ಕಿ 6 ಪೈ ತೂಕ ಅತ್ತಿವಳತಾಟಿ ಚಕ್ಕಿ 6 ಪೈ ತೂಕ, ಬೇವಿನ ವಳತಾಟಿ ಚಕ್ಕಿ 12 ಪೈ ತೂಕ, ಇವುಗಳ ಚೂರ್ಣವ ಮಾಡಿ ಶೋಧಿಸಿ ಅದರಲ್ಲಿ ಜೀರಗಿ, ಸಕ್ಕರಿ ಹಾಕಿ, ಹಳೆನೀರೊಳಗೆ 1 ಸಪ್ತಕ ಕೊಡುವದು. ಪಥ್ಯ ಮೊಸರುಅನ್ನ. ಮತ್ತೆ, ತುತ್ತೆ ಸುಂಣ, ಸಮ ಅರೆದು ಜೋಳದ ಕಾಳಿನ ಪ್ರಮಾಣ ಮಾತ್ರಿ ಮಾಡಿ ತುಪ್ಪ ದೊಳಗೆ ಕೊಡೋದು. ಪಥ್ಯ ತುಪ್ಪ ಅನ್ನ ಮೂರು ದಿನಕ್ಕೆ. ಹುಂಣು

ಮಾಣ್ಗು. ಮತ್ತೆ ಬಜಿ, ಅಜಿವಾನ, ಕೇರು, ಅರೆದು 3 ದಿವಸ ತಕ್ಕೊಂಬೋದು. ಪಥ್ಯ ಸಾಧಾರಣ ಮಂಡಕಳ್ಳಿ, ತಾಟಿ ರಸ 6 ಪೈ ತೂಕ, ಮೆಣಸು 7, ಬೆಳ್ಳುಳ್ಳಿ 7, ಕುಟ್ಟಿ ರಸ ತೆಗದು ಅನ್ನದ ಗಂಜಿಯೊಳಗೆ ಕುಡೀಲಿಕ್ಕೆ ಕೊಡುವದು. ಮೂರು ದಿವಸ ಪರಿಯಂತರ ಅನುಪಾನ, ಕುದವಲಕ್ಕಿ ಅನ್ನಗಂಜಿ. ಮತ್ತೆ ಬಿಸಿ ಔಡಲಯಂಣಿ ಪಾವಶೇರು, ಮನಗಲತೊಬ್ಬಲ ರಸ, ಬೆಳ್ಳುಳ್ಳಿರಸ ಪಾವಶೇರು, ಮೆಣಸು ಪಾವಶೇರು, ಈ ನಾಲ್ಕನ್ನು ಕೂಡಿಸಿ ಮೂರು ದಿವಸ ಕೊಡುವದು. ಪಥ್ಯ ಉಪ್ಪು ಇಲ್ಲದ ಗೋಧಿರೊಟ್ಟಿ, ತುಪ್ಪ; ಹುಂಣು ಮಾಣ್ಗು.

ಒಣ ಯಿಸಬಿಗೆ : ತೋಳನ ಗಡ್ಡಿ ತಂದು ಸುಟ್ಟು ಭಸ್ಮಮಾಡಿ ಶೋಧಿಸಿ ಒಳ್ಳೇಯಂಣಿ ಕಲಸಿ ಹಚ್ಚುವದು, ಪರಿಹಾರ. ಮತ್ತೆ ಹುಣಶಿಗಿಡದ ಮೇಲಿನ ಒಣ ತಾಟಿ ತಂದು ಸುಟ್ಟು ಭಸ್ಮವ ಮಾಡಿ ತೈಲದಲ್ಲಿ ಹಚ್ಚುವದು, ಇಸಬು ಮಾಣ್ಗು.

ರಸ ಇಸಬಿಗೆ: ಕೇರು ಎರಡು ಕೆಂಪಗೆ ಸುಟ್ಟು ಪುಡಿಮಾಡಿ ಔಡಲ ಎಂಣಿಯೊಳಗೆ ಹಚ್ಚುವದು.

ಕಾಲಿಗೆ ರಸಯಿಸಬು ಆದರೆ : ಯಮ್ಮಿ ಬೆಂಣಿಯೊಳಗೆ ಯಕ್ಕಿ ಹಾಲ ಹಾಕಿ ಮರ್ದನಮಾಡಿ ಕಾಲಿಗೆ ಹಚ್ಚಬೇಕು. ನಂಜಿನ ಜೀನಸು ಬಿಡಬೇಕು. ಮತ್ತೆ ಅಡವಿಕುರಳು ತಂದು ತಾಳಿಹಾಕಿ ಅದರೊಳಗೆ ಕುದುರೆಲದ್ದಿ ಐದಾರು, ಕೇರು ಐದಾರು ಹಾಕಿ ಆ ತಾಳಿಯ ಮೇಲೆ ಕಂಚಿನ ಬಟ್ಟಲ ನೀರು ತುಂಬಿ ಇಡೋದು. ನೀರು ಕಾದ ಮೇಲೆ ಬಟ್ಟಲ ಇಳಿಸಿ ನೀರು ಚೆಲ್ಲಿ ಬಟ್ಟಲಕ್ಕೆ ಹತ್ತಿದ ಮುಲಾಮುವನ್ನು 7 ದಿವಸ ಕಾಲಿಗೆ ಹಚ್ಚುವದು. ಸ್ನಾನ ವರ್ಜ್ಯ. ಮತ್ತೆ, ಖೈಹೀರೆಕಾಯಿಬೀಜಾ ತುಪ್ಪದೊಳಗೆ ಕರಿದು, ಕರೇಮೆಣಸು ಕರಿದು ಎರಡು ಪುಡಿ ಮಾಡಿ ಖೊಬ್ಬರಿ ಬೆಂಣಿಯೊಳಗೆ ಹಚ್ಚಬೇಕು. ಅಂದರೆ ಪರಿಹಾರವಾಗುವದು. ಮತ್ತೆ, ಕೆಂಪು ಕಣಗಿಲ ಹೂವು ಮಗ್ಗು ತಂದು ಹಂಚಿನೊಳಗೆ ಹುರಿದು ಔಡಲಯಂಣಿಯೊಳಗೆ ಹಾಕಿ ಕುಚ್ಚಿ ಕಾಲಿಗೆ ತಿಕ್ಕುವದು; ಇಸಬು ಹೋಗುವದು.

ಸಂಕಟಕ್ಕೆ : ಭತ್ತದರಳು ಖೊಬ್ಬಟ್ಟು ಸರವಾಗಿ ಕುಟ್ಟಿ ಶೋಧಿಸಿ ಸಕ್ಕರಿ ಹಾಕಿ ಕುಡಿಸಲು ಸಂಕಟ ಪರಿಹಾರವಾಗುವದು.

ಧಾತುಪುಷ್ಟಿಗೆ : ಜ್ಯಾಲಿ ಅಂಟು ಪಾವಶೇರು, ಜ್ಯಾಲಿಹುವು ಪಾವ ಶೇರು, ಜ್ಯಾಲಿಕಾಯಿ ಪಾವಶೇರು, ಜ್ಯಾಲಿಮುಗಳು ಪಾವಶೇರು, ಜ್ಯಾಲಿವಳ ನಾರು ಪಾವಶೇರು, ನೆರಳೊಳಗೆ ವಣಗಿಸಿ, ಕುಟ್ಟಿ, ಸೋಸಿ, ಆಕಳ ಹಾಲಿನೊಳಗೆ 21 ದಿವಸ ತಕ್ಕೊಳ್ಳೇಬೇಕು. ಅದರೊಳಗೆ ಮಗದುಮಿ ಸಕ್ಕರಿ ಪಾವಶೇರು ಕೂಡಿಸಿ ತಕ್ಕೊಳ್ಳೇಬೇಕು. ಪಥ್ಯ ಹುಳಿ ಉಷ್ಣ ಪದಾರ್ಥ ಬಿಡಬೇಕು. ಇದ ರಿಂದ ಧಾತುಪುಷ್ಟಿ ಆಗುವದು.

ತಿಗಳಿ ನೆಕ್ಕಿದರೆ : ಕುದರಿ ಕಾಲಿನ ಖುರವ ತೆಗೆದು ಸುಟ್ಟು ಭಸ್ಮವ ಮಾಡಿ ತುಪ್ಪದೊಳಗೆ ಕಲಸಿ ಹಚ್ಚುವದು. ಮತ್ತೆ ಜಾಲಿಗಿಡದೊಳಗೆ, ಮುಳ್ಳ ಗೊಂಚಲೊಳಗೆ ಹುಳ ಇರುತ್ತದೆ. ಆ ಹುಳವ ತಿಗಳಿ ನೆಕ್ಕಿದಲ್ಲಿ ಮೂರು ದಿವಸ ತಿಕ್ಕುವದು, ತಿಗಳಿ ಪರಿಹಾರ.

ದಂತಶೂಲಿಗೆ : ಮಲ್ಲಿಗೆ ಯಲಿ, ಬಿಳೇಗಣಜಲಿ, ಗಜಹಿಪ್ಪಲಿ, ಮುಳ್ಳು ಜಾಜಿ, ಕೋಷ್ಟ, ಬಜಿ, ಕಾಡಮೆಣಸು, ಚಿತ್ರಮೂಲ, ಆಳಲಿಕಾಯಿ ಈ ಒಂಭತ್ತು ಜೀನಸನ್ನು 3 ಪೈ ತೂಕ ಸಮಾನ ಕೂಡಿಸಿ ಚೂರ್ಣಮಾಡಿ ಬಾಯೊಳಗೆ ಧಾರಣ ಮಾಡಿದರೆ ಮುಖದೊಳಗಿನ ರೋಗಗಳೆಲ್ಲಾ ನಾಶವಾಗಿ ವಜ್ರದಂತೆ ಹಲ್ಲು ಘಟ್ಟಿ ಆಗುವದು. ಮತ್ತೆ ಬಿಳೀಯೆಳ್ಳು ಅಚ್ಚೇರು, ವಾಯಿ ವಡಂಗ ಅಚ್ಚೇರು, ಎರಡನ್ನು ಪುಡಿ ಮಾಡಿ 5 ಶೇರು ನೀರು ಹೊಸಗಡಿಗೆ ಯೊಳಗೆ ಇಟ್ಟು ಪುಡಿ ಹಾಕಿ ಮರಳಿಸಿ ಮೂರು ಶೇರು ಉಳಿದನಂತರ, ಇಳಿಸಿ ಕಡಲಿಕಾಳಷ್ಟು ತುತ್ಯಾ ಹಾಕಿ ತೀರು ತನಕಾ ನೀರು ಬಾಯೊಳಗೆ ಗುಳುಗುಳು ಮಾಡಿ ಉಗಳುವದು, ಅಂದರೆ ಕ್ರಿಮಿ ನಾಶವಾಹವು.

ಮತ್ತೆ, ಮಿಟ್ಟಲ ತೋಟೆ ತಿಂದು ಹಲ್ಲಿಗೆ ಇಟ್ಟು ಮಲಗಿಕೊಂಬುವದು. ಶೂಲಿ ನಾಶವಾಹದು. ಮತ್ತೆ ತುತ 3 ಪೈ ತೂಕ, ಮನಿವುಪ್ಪು 3 ಪೈ ತೂಕ, ಯಕ್ಕಿಹಾಲು ಹಾಕಿ ಮರ್ದಿಸಿ ತಿಕ್ಕೋದು. ಶೂಲಿ ಪರಿಹಾರವು. ಮತ್ತೆ ಹಿಟ್ಟಲಕ್ಕಿಬೇರು, ಅಂದರೆ ವಿಭೂತಿಗಿಡದ ಬೇರು, ತಿಕ್ಕಿದರೆ ಹಲ್ಲು ಘಟ್ಟಿಯಾಗುವವು.

ಸುದರ್ಶನ ಚೂರ್ಣಕ್ರಮ : ತ್ರಿಕಟುಕ, ತ್ರಿಫಲ, ಇಂದ್ರಜಂವಿ, ನಾಗದ ಮುಷ್ಟಿಚೆಕ್ಕೆ, ಪರಿಪಾಷ್ಟಕ, ಕಟಕರೋಹಿಣಿ, ವಾಯಿವಡಂಗ, ಮರ್ದರಿ

ಷಿಣ, ಅರಿಶಿನ, ಖೈಪಡವಲ, ನೆಲೆಯಿಂಗಳ, ನೆಲಬೇವು, ನೆಲದಾಳಿ, ಚಿತ್ರ ಮೂಲ, ದೇಶಾವರತಿಗಡಿ, ಹೆಮ್ಮುಷ್ಟಿಬೀಜಾ, ಚಿರಾಯಿತ, ಕರೆಜೀರಗಿ, ಖುರಾಸಾನಿ, ಅಜಿವಾನ, ಪಡವಲಹಂಣು, ಇಷ್ಟು ಜೀನಸು ಸಮಭಾಗ ಮಾಡಿ ಕೂಡಿಸಿ ಚೂರ್ಣ ವರಾಹತೂಕ ತಿಂದು ನೀರು ಕುಡಿದರೆ ಸರ್ವಜೀನಸಿನ ನಂಜು ಪರಿಹಾರವಾಗುವದು.

ಕಂಣ ಬ್ಯಾನಿಗೆ : ಅಲೀಕನ ತೊಪ್ಪಲು 3 ಪೈ ತೂಕ, ಜೀರಗಿ 3 ಪೈ ತೂಕ, ಪಟಿಕಾ, ತುತ್ಯ, ಕಡಲಿಕಾಳ ಪ್ರಮಾಣ ಅರೆದು ಲವಳರಸ, ಬಂಬಸಕ, ಕಲಸಿ ಅರವಿಯೊಳಗೆ ಗಂಟುಕಟ್ಟಿ ಕಂಣಿಗೆ ಹಚ್ಚೋದು, ಕಂಣುಬ್ಯಾನಿ ಪರಿಹಾರ.

ಕಿರನಾಲಿಗೆ : ಮಲದ ಹಿಕ್ಕಿ, ಆಕಳ ಬೆಂಣಿ ಕೂಡಿಸಿ, ಹೆಡತಲೆಗೆ ಹಚ್ಚುವದು ; ಕಿರನಾಲಿಗಿ ಬಿದ್ದದ್ದು ಪರಿಹಾರವಾಗುವದು.

ಆಸಪಾಕ ಹುಗಳಿಗೆ : ಕಡ್ಲಿಕಾಳಷ್ಟು ತುತ್ಯಾ ಬಾಯಿವಳಗೆ ಹಿಡಿದರೆ ನೀರು ಬರುವದು, ಉಗಳಬೇಕು. ಶೀರಿದನಂತರ ಬಾಯೊಳಗೆ ಕಲ್ಲಸಕ್ಕರಿ ಹಿಡೀಬೇಕು, ಆ ನೀರು ಉಗಳಬೇಕು. ಬಾಯಿ ಮುಕ್ಕಳಿಸಿ ಆಮೇಲೆ ಕಲ್ಲ ಸಕ್ಕರಿ ತಿನ್ನಬೇಕು. ಹೀಗೆ ಮಾಡಿದರೆ ಒಂದೇ ದಿನಕ್ಕೆ ಪರಿಹಾರವಾಗುವದು. ಮತ್ತೆ ಜೀರಗಿ ಹೊಸ ಹರಿವಾಣದೊಳಗೆ ಕೆಂಪಗೆ ಹುರಿದು, ಬೇವಿನರಸ 1 ಶೇರು ಹಾಕಿ ಪಾಕ ಮಾಡಿ ಅರೆದು ಮಾತ್ರೆಯು ಕಟ್ಟಿ ಚಣಕಪ್ರಮಾಣ ಪ್ರಾತಃ ಕಾಲಕ್ಕೆ ಸಾಯಂಕಾಲಕ್ಕೆ ತಕ್ಕೊಂಬುವದು ; ಹುಗಳು ಪರಿಹಾರ. ಮತ್ತೆ, ಮೆಣಸಿನಕಾಯಿ ಎಂಣಿಯಲ್ಲಿ ಕರಿದು, ಕಿರಿನಾಲಿಗಿ ಆರಂಭ ತುದಿ ಪರಿಯಂತ ತಿಕ್ಕುವದು ; ನೀರು ಸೋರಿಹೋದ ಮೇಲೆ, ಜಾಜಿತೊಪ್ಪಲು 1 ಮುಷ್ಟಿ ತುಂಬಾ, ಜೀರಗಿ, ಬೆಳ್ಳುಳ್ಳಿ, ಹಳೆನೀರೊಳಗೆ ಅರೆದು ಕುಡಿಸುವದು ; ಹುಗಳು ನಾಶ. ಮತ್ತೆ, ತುಂಬಿರಸಾ, ಜೇನತುಪ್ಪ ಮರ್ದಿಸಿ ಗಂಟಲೊಳಗಿನ ಹುಗಳಿಗೆ ಹಚ್ಚಲು ನಾಶವಹುದು. ಮತ್ತೆ, ಲವಳರಸದ ಬೇರು ತಂದು ಬಿಸಿಮಾಡಿ ಕುಟ್ಟಿ ರಸಾ ತೆಗದು ಚಿನ್ನಿಸಕ್ಕರಿ, ಅದರೊಳಗೆ ಜೀರಗಿ ಪುಡಿ ಹಾಕುವದು ; ಹುಗಳು ನಾಶ. ಮತ್ತೆ ಜೀರಗಿ, ಬೀಜಾ ಅರಿಸಿ ತುಪ್ಪವ ಕಲಸಿ, ಅರವಿಗೆ ತುಪ್ಪವ ಹಚ್ಚಿ ಗಂಟುಕಟ್ಟಿ ದೀಪದ ಕುಡಿಗೆ ಸುಟ್ಟು ಭಸ್ಮವ ಮಾಡಿ, ಹೊಗಿ ಹೋದ ಬಳಿಕ ಅರವಿ ಕಳಕ ತೆಗದು, ಈ ಭಸ್ಮವ ಬಿಸಿನೀರೊಳಗೆ ರುವಿತೂಕ ಕೊಟ್ಟರೆ,

ಹುಗಳು ತಾತ್ಕಾಲಕ್ಕೆ ಪರಿಹಾರವು. ನಂಜಿನ ಪದಾರ್ಥ ಬಿಡುವದು. ಮತ್ತೆ ಜೀರಗಿ ಸಕ್ಕರಿ, ಕಿರಿನೆಲ್ಲಿ, ಅರೆದು ಕೊಟ್ಟರೆ ನಾಶ. ಮತ್ತೆ ಖಸಕಸಿ, ಎಳ್ಳು, ಎರಡೂ ಕೂಡಿ ತಿಂದರೆ, ನಾಲಿಗಿ ಅಡ್ಡ ಮಗ್ಗಲ ಶೀಳಿದ್ದರೂ ತುಟಿಮೇಲೆ ಬಕ್ಕಿ ಎದ್ದಿದ್ದರೂ ನಾಶವಾಗುವವು.

ಕ್ಷಯರೋಗಕ್ಕೆ : ಕರೆ ಆಕಳತುಪ್ಪ ಅಚ್ಚೇರು, ಇದರಲ್ಲಿ ಅರಿಶಿನ ಪುಡಿ 3 ದುಡ್ಡುತೂಕ ಅಥವಾ 1 ತೊಲಿ, ಇದರಲ್ಲಿ 7 ಭಾಗವ ಮಾಡಿ 1 ಭಾಗ ತುಪ್ಪದೊಳಗೆ ನಿತ್ಯ ತಕ್ಕೊಂಬುವದು, ಇದರಂತೆ 40 ದಿನ ತಕ್ಕೊಂಡರೆ ಕ್ಷಯರೋಗ ಪರಿಹಾರ. ನಂಜಿನ ಪದಾರ್ಥ ಬಿಡುವದು. ಮತ್ತೆ, ಅಡ ಸೋಗಿ, ಅಮರದ ಬಳ್ಳಿ, ಹದಲಿಬೇರು, ಬೀಜ ಅಂಗರದಬೇರು, ಬಿಳಿಗಣಜಲಿ ಬೇರು ಇವು ಸಮಗೊಂಡು, ಹಾಲೊಳಗೆ ಹಾಕಿ ಕೊಳ್ಳಲು, ಕ್ಷಯರೋಗ ಮಾಣ್ಗು.

ಮನುಷ್ಯನ ಮೈವಳಗಿನ ಸತ್ವಹೋದರೆ : ಮಾಪಳದ ಪುಡಿ ಹಾಕಿ ನುಂಗಬೇಕು. 21 ದಿನ ಸಪ್ಪನ್ನ, ಅನ್ನ ತುಪ್ಪ ಉಣಬೇಕು, ಥಂಣೀರು ಕುಡೀಬೇಕು.

ಥರಡಬೀಜಾ ಇಳದಿದ್ದರೆ : ಗಜಗಿನತೊಪ್ಪಲ ಆಕಳಹಾಲೊಳಗೆ ಅರೆದು, ಪಾವು ರಸವ ತೆಗದು ಹೊಟ್ಟೆಯೊಳಗೆ ತಕ್ಕೋಬೇಕು. ಗಜಗಿನ ತೊಪ್ಪಲು ನೀರೊಳಗೆ ಅರೆದು ಮೇಲೆ ಲೇಪನವ ಮಾಡುವದು. ಹುಳಿಖಾರ ನಂಜಿನ ಪದಾರ್ಥ ಬಿಟ್ಟು 5 ದಿವಸ ತಕ್ಕೊಂಡರೆ ನೆಟ್ಟಗೆ ಆಗುವದು.

ಬೇರು ಯಿಳದಿದ್ದರೆ : ಕುದರಿಥಡಿಯ ಉಂಣಿಯ ಕೂದಲ ಬಟ್ಟಲ ದೊಳಗೆ ಔಡಲಯಂಣಿಯ ತುಂಬಿ ಅಂಡಕ್ಕೆ ಕಟ್ಟುವದು. 7 ದಿನಕ್ಕೆ ಒಳಿತಾ ಗುವದು. ಮತ್ತೆ ಉಳ್ಳೇಗಡ್ಡಿ ಸಂಣ ಚೂರುಮಾಡಿ ಥರಡಿಗೆ ಹಾಕಿಕಟ್ಟುವದು. ಆಮೇಲೆ ಉಳ್ಳೇಗಡ್ಡಿಹಚ್ಚಿ ತುಪ್ಪದೊಳಗೆ ಕರಿದು 7 ದಿವಸ ಕಟ್ಟಬೇಕು. ಅಂಡಬೀಜ ಮೇಲಕ್ಕೆ ಸೇರುವದು.

ತೊಡಿವಾಳಕ್ಕೆ : ಉತ್ರಾಣಿ ಸೊಪ್ಪು ತಂದು ಸಂಣಾಗಿ ಅರೆದು ಕಟ್ಟು ವದು ; ಅಂದರೆ ನೀರಾಗಿ ಕರಗಿಹೋಗುವದು.

ಹಲ್ಲುಶೂಲಿಗೆ : ಕುರಡಿನ ಎಲಿ ತಂದು 1 ಬೆಳ್ಳುಳ್ಳಿ, 1 ಮೆಣಸು ಹಾಕಿ ಅರೆದು 7 ದಿನ ಹಲ್ಲಿಗೆ ಹಾಕಿದರೆ ಶೂಲಿ ಪರಿಹಾರವು.

ಹೊಲಕುಟ್ಟಿಗೆ : ಮುತ್ತಲದ ಹೂವು ತಂದು 3 ದಿನ ನೀರೊಳಗೆ ನೆನೆ ಹಾಕಿ, 7 ಸಾರಿ ತೊಳೆದು ಜೇನುತುಪ್ಪದೊಳಗೆ ಅರೆದು ಜಾಲಿಯ ತೊಪ್ಪಲ ರಸದೊಳಗೆ ಕೊಡುವದು, ಹೊಲಕಟ್ಟು ನಾಶ.

ಶೀತದಿಂದ ಕಿವಿಗಡಚ ಹಾಕಿದರೆ : ಕಾಡಿಗ್ಗರಗಿನರಸ 9 ಪೈ ತೂಕ, ಲಕ್ಕಿರಸ 9 ಪೈ ತೂಕ, ಎಕ್ಕಿಯಲಿರಸ 9 ಪೈ ತೂಕ, ಜಾಜಿತೊಪ್ಪಲ ರಸ 9 ಪೈ ತೂಕ, ಬದನಿತೊಪ್ಪಲ ರಸ 9 ಪೈ ತೂಕ, ನುಗ್ಗಿತೊಪ್ಪಲ ರಸ ನವಟಾಕ ಹಾಗಲರಸ ನವಟಾಕ, ಬಾಳೆಗಿಡದ ರಸ ನವಟಾಕ, ಅಲ್ಲದ ರಸಾ ನವಟಾಕ, ತುಳಸಿರಸಾ ನವಟಾಕ, ಈ ಹತ್ತು ಜೀನಸಿನ ರಸ ಸಮ ಹತ್ತು ನವಟಾಕ, ಎಳ್ಳಯಂಣಿ ಹಾಕಿ ತಲೆಗೆ ಹಚ್ಚುವದು, ಅಥವಾ ಸ್ವಲ್ಪ ಕಿವಿಯೊಳಗೆ ಬಿಡುವದು, ಅಂದರೆ ಕಿವಿ ಕೇಳಿಸುವದು.

ಖಜ್ಜಗೆ : ತುಬಾಕಿ ಮದ್ದು ಖೊಬ್ರಿಯಂಣಿವಳಗೆ ಹಾಕಿ ಹಚ್ಚಿ ಬೆಂಕಿ ಕಾಸಬೇಕು, ಅಂದರೆ ಪರಿಹಾರವಾಗುವದು.

ಪಾಂಡುರೋಗಕ್ಕೆ : ಹುಣಸಿಕಾಯಿ ತಂದು ಸುಟ್ಟು ಭಸ್ಮ ಮಾಡಬೇಕು. ಆ ಭಸ್ಮ ಆಡಿನ ಮೂತ್ರದಲ್ಲಿ ಕೊಟ್ಟರೆ ಪಾಂಡುರೋಗ ಹೋಗುವದು. ಪಥ್ಯ ಸಪ್ಪಗಿನ ಅನ್ನ, ಆಕಳಹಾಲು, ತುಪ್ಪ ಉಣಬೇಕು.

ಕಾಮಾಲಿಗೆ : ಘಟಿಕ, ಅರಿಶಿನ, ನೆಲ್ಲಿಚೆಟ್ಟು, ದೇವದಾಳಿ ಕಾಯಿ ಚೂರ್ಣ, ಇವು ಇಷ್ಟು ಚೂರ್ಣಮಾಡಿ ನಸ್ಯಗೈಯಲು ಕಾಮಣಿ ಪರಿಹಾರ.

ಕುರುವಿಗೆ : ಪತಂಗದ ಹಿಟ್ಟು, ತುಪ್ಪ ಕಲಸಿ ಹಚ್ಚುವದು, ಪರಿಹಾರ. ಮತ್ತೆ ನವಣಿ ಅನ್ನ ಮೊಸರು ಹಾಕಿ ಕಟ್ಟುವದು. ಕುರುವು ಬಸಿದುಹೋಗುವದು. ಮತ್ತೆ, ಅರದಾಳ, ಸುಂಣ ಹಚ್ಚುವದು. ಮತ್ತೆ, ಗಜಗದ ಬೀಜವ ಚಿತ್ರಮೂಲದ ರಸದಲ್ಲಿ ತೇದು ಹಚ್ಚಿದರೆ ತಕ್ಷಣವೆ ವಡೆಯುವದು. ಮತ್ತೆ, ಕೋಳಿತತ್ತಿ ರಸದೊಳಗೆ ಅರದಾಳ ತೇದು ಹಚ್ಚಿದರೆ ಕುರುವು ನಾಶವು, ಜಾಡೆವಾಳಕ್ಕೆ ಸಹಾ ಬರುವದು.

ಜಾಲಿಯ ಕಲ್ಪ : ಜಾಲಿಯ ತೊಪ್ಪಲು, ಮುಗಳು ಪಾವು, ಜಾಲಿಯ ಹೂವು ಪಾವು, ಜಾಲಿಯ ಅಂಟು ಪಾವು, ಜಾಲಿಯಕಾಯಿ ಎಳೇವು ಪಾವು, ಜಾಲಿತಾಟ ವಳಗಿಂದು ಪಾವು, ಈ ಪ್ರಕಾರ ಐದು ಜೀನಸು ನೆರಳೊಳಗೆ

ವಣಗಿಸಿ ಕುಟ್ಟಿ ಚೂರ್ಣಮಾಡಿದ ಪುಡಿ ಪಾವಶೇರು; ಅದರಲ್ಲಿ ನಿತ್ಯ 5 ಬೆರಳಿಗೆ ಬಂದಷ್ಟು ತಕ್ಕೊಳ್ಳಬೇಕು. ಚಿನ್ನಿ ಸಕ್ಕರಿ ವೆರಸಿ ಅಥವಾ ಜೇನು ತುಪ್ಪದಲ್ಲಿ 41 ದಿವಸ ತಕ್ಕೊಳ್ಳಬೇಕು. ಹುಳಿ, ಎಂಣಿ ನಂಜಿನ ಪದಾರ್ಥ ಬಿಡುವದು. ಹುಂಣು ಶಿಶನ ಆಗಲಾದದ್ದು ಜಿಲ್ಲಿಬಿದ್ದಿದ್ದರೆ ಸಹಿತ, ಧಾತು ಘಟ್ಟಿಯಾಗಿ ಪುಷ್ಟಿ ಆಗೋದು. ಈ ಜಾಲಿಪಂಚಾಂಗ ಶೇವನೆಯಿಂದ ಆರೋಗ್ಯವಾಗುವದು.

ಉಷ್ಣಕ್ಕೆ : ಮಜ್ಜಿಗಿ, ಜಾಲಿತೊಪ್ಪಲು, ಉಪ್ಪು ಥೋಡೆ, ಅರೆದು ರಾತ್ರಿಯಲ್ಲಿ ಮಾಳಿಗಿ ಮೇಲೆ ಮಗೆಯೊಳಗೆ ಇಟ್ಟು ಮುಂಝಾನೆ ಕುಡೀಬೇಕು. ಬದನಿಕಾಯಿ ಯೆಂಣಿ ವಗೈರಿ ಬಿಡಬೇಕು.

ಹಾವಿನ ತಡಿ : ಬಿಳೀಗುಲಗಂಜಿಯ ಬೇರು ಹತ್ತರ ಇದ್ದರೆ, ಹಾವು ಕಚ್ಚದು, ಬಾಯಿ ತೆರಿಯದು. ಕಚ್ಚಿದರೆ ಈ ಬೇರು ನಿಂಬಿ ರಸದಲ್ಲಿ ತೇದು ಹಚ್ಚಲು ವಿಷವು ಯೇರದು. ಮತ್ತೆ, ನಸಗುನ್ನಿಯ ಬೇರು ತಿಂದು, ಹಾವಿನ ಮೇಲೆ ಉಗುಳಿದರೆ ಬಾಯಿ ತೆಗೆಯದು, ಮತ್ತು ಕಚ್ಚದು.

ಉಷ್ಣಕ್ಕೆ : ಕರೆಹತ್ತಿಕಾಯಿ 5 ಅರೆದು ಬೀಜ ಇಲ್ಲದ ಜೀರಗಿ 1 ಗ, ಕಲ್ಲಸಕ್ಕರಿ 3 ದುಡ್ಡತೂಕ, ಹಳೇನೀರು 1 ದುಡ್ಡ ತೂಕ ಹಾಕಿ ಅರೆದು ಕೊಳ್ಳಲು, ಕೆಂಪು ಬಿಳಪು ಬೀಳುವ ಉಷ್ಣ ಪರಿಹಾರ. ಪಥ್ಯ ಮೊಸರು ಅನ್ನ.

ಪಿಚ್ಚಗುಣ ಮೊದಲಾದ ನೇತ್ರರೋಗಕ್ಕೆ : ಕಾಡಿಗ್ಗರಗಿನ ಸಮೂಲದ ರಸ ಅಚ್ಚೇರು, ಇದರಲ್ಲಿ ಶುಂಠಿ 1 ಪೈ ತೂಕ, ಇಂಗು 1 ಪೈ ತೂಕ, ಲವಂಗ 1 ಪೈ ತೂಕ, ಸೈಂಧವಲವಣ $\frac{1}{4}$ ಪೈ ತೂಕ, ತುತ್ಯ 1 ಪೈ ತೂಕ, ಹಿಪ್ಪಲಿ 1 ಪೈ ತೂಕ, ಮೆಣಸು 1 ಪೈ ತೂಕ, ಅಜಿವಾನ ತೌಡು 1 ಪೈ ತೂಕ, ಬಜಿ 1 ಪೈ ತೂಕ, ಈ ಎಲ್ಲಾ ಸಮಭಾಗವನ್ನು ಪುಡಿಮಾಡಿ ಹಾಕಿ ಕದಡಿ ಕರೇಹತ್ತಿ ಅರಳಿ ಕಾಸಿ 3 ದಿನ ಪರಿಯಂತರ ಆ ರಸದಲ್ಲಿ ಭಾವನೆ ಇರಿಸಿ ಆ ಮೇಲೆ ತೆಗೆದು ನೆರಳೊಳಗೆ ವಣಗಿಸಿ ಬತ್ತಿಯಮಾಡಿ ಆ ಬತ್ತಿ ಔಡಲಯಂಣಿಯಿಂದ ದೀಪವ ಹಚ್ಚಿ ಪರಿವಾಣಕ್ಕೆ ಉರಳಾಗಡ್ಡಿ ತಿಕ್ಕಿ ಕಾಡಿಗೆಯ ಹಿಡಿದು, ಅರ್ಚಿಸಿ, ಇಳಿಸಿಕೊಂಡು ಆ ಕಾಡಿಗೆಯ ತೆಗೆದುಕೊಂಡು ಆಕಳಬೆಂಣಿಯಿಂದ ಹಚ್ಚಲು, ಸಮಸ್ತ ಪ್ರಕಾರ ಕಂಣಿನ ರೋಗಳು ಮಾಣ್ಗು. ಪಥ್ಯ ಎಂಣಿ,

ಕೋತಂಬರಿ, ಹಸಿಮೆಣಸಿನಕಾಯಿ, ಬದನಿಕಾಯಿ ಬಿಡುವದು. ನಿತ್ಯ ಅಂಜನವನ್ನು ರಾತ್ರಿಯಲ್ಲಿ ಹಚ್ಚುವದು.

ಜ್ವರಕ್ಕೆ: ಕರೆಹತ್ತಿಕಾಯಿ 7, ಜೀರಗಿ 3 ದುಡ್ಡು ತೂಕ, ಕಲ್ಲಸಕ್ಕರಿ, 1 ದುಡ್ಡ ತೂಕ ಹಾಕಿ ಮೂರನ್ನು ಅರೆದು ತಕ್ಕೊಂಬುವದು. ಪಥ್ಯ ತೊಗರಿ ಬ್ಯಾಳಿಕಟ್ಟು ಅನ್ನ 3 ದಿನ ತಕ್ಕೊಂಬುವದು, ಜ್ವರ ಪರಿಹಾರವು.

ಹುಣ್ಣಿಗೆ: ನೆಳಗುಳ್ಳದ ರಸ 1 ಶೇರು, ಅದರಲ್ಲಿ 1 ಹಿಡಿ ಅಕ್ಕಿಹಾಕಿ ಕಿಂಚಿತ್ ಉಪ್ಪು ಹಾಕಿ ಪಾಕವಮಾಡಿ, 1 ತೊಲಿ ಅನ್ನ ತುಪ್ಪ ಉಂಬುವದು. 7 ದಿನಕ್ಕೆ ಹುಣ್ಣು ಮಾಣ್ಬುಗ.

ಇರಳುಕಂಣಿಗೆ: ಇಲಿಯಿಕ್ಕೆ ಮೊಲಿ ಹಾಲಿಂದ ತೇದು ಹಚ್ಚಲು ಇರಳುಗಂಣು ಮಾಣ್ಬುಗ. ಕೆಂಜೋಳರೊಟ್ಟಿ ಹರವಿಸೊಪ್ಪು ಸಪ್ಪಗೆ ತಿನ್ನಬೇಕು.

ಶುಕ್ಲಸ್ತಂಭನಕ್ಕೆ: ನೆಗ್ಗಿಲಬೇರು, ನೆಲ್ಲಿಚೆಟ್ಟು, ಅಮರದಬಳ್ಳಿ, ಮೂರನ್ನು ಸಮಭಾಗ ಚೂರ್ಣವಮಾಡಿ ಎಳ್ಳು ಸಕ್ಕರಿವೆರಸಿ ಮೆಲ್ಲಲು ಶುಕ್ಲಸ್ತಂಭನವಾಗುವದು. ಮತ್ತೆ, ಉತ್ತರಾಣಿ ಮೂಲವ ತಂದು ಹಾಲೊಳರೆದು ಕುಡಿಯಲು ರಕ್ತಶೂಲಿ ಪರಿಹಾರ.

ಅರಷಿಣ, ಗಿಣಿಮೂಗಿನ ಗಡ್ಡಿ, ಗೋಮೂತ್ರದಲ್ಲಿ ಅರೆದು ಪೂಸಲು ದುಷ್ಟವ್ರಣ ಪರಿಹಾರವು. ಅದನ್ನು ಬತ್ತಿಮಾಡಿ ಹುಂಣಿನ ಬಾಯಿಗೆ ಇಡಲು ಪರಿಹಾರ.

ಉಡಚಿಗೆ: ಹಾಲಿಕುಡಿ ತುಪ್ಪದಲ್ಲಿ ಅರೆದು ಹಚ್ಚಲು ಉಡುಚು ಮಾಣ್ಬುಗ.

ಅರತಲೆಶೂಲಿಗೆ: ಕಾಡಿಗ್ಗರಗ, ಮೆಣಸು 7 ಬೆಳ್ಳೊಳ್ಳಿ ಬ್ಯಾಳಿ ಸ್ವಲ್ಪ ಉಪ್ಪುಹಾಕಿ ಅರೆದು ಕಿವಿಯೊಳಗೆ ಹಿಂಡಿ ಅರಳಿ ಇಡುವದು. ದಿನಕ್ಕೆ ಎರಡು ಸಾರೆ ಹಿಂಡುವದು. ಅರ್ಧ ತಲೆಶೂಲಿ ಮಾಣ್ಬುಗ. ಮಣಖಾರ, ಇಂಗು, ಸಂಣಾಗಿ ಅರೆದು ತುಪ್ಪವೆರಸಿ ಈ ಪುಡಿ ಬಾಯಿಗೆ ಹಾಕಲು ನಾರು ಮಾಣ್ಬುಗ.

ದೂರ ನಡಿಯುವದಕ್ಕೆ: ನೆಗ್ಗಿಲಬೀಜ $1\frac{1}{2}$ ಗದ್ಯಾಣ, ನಸಗುನ್ನಿ ಬೀಜ 2 ಗ, ಸಮುದ್ರಶೋಕೆಯ ಬೀಜ 4 ಗ, ಹಳೆಬೆಲ್ಲ 4 ಗ, ಇವನ್ನು ಚೂರ್ಣವ ಮಾಡಿ ಜೇನುತುಪ್ಪದಲ್ಲಿ ಕಲಸಿ ಸೊಸಿ ಪ್ರಮಾಣ ಗುಳಿಗೆ ಮಾಡಿ ಬಾಯಿಒಳಗೆ ಇಟ್ಟುಕೊಂಡರೆ ದೂರ ನಡೆಯಬಹುದು. ಮನೋಯೋಗಕ್ಕೆ

ಎತ್ತಿನ ವಾಲಿಗೆಯುಬೇರು ಪೂಜಿಸಿ ತಂದು ಕೆರಹಿಗೆ ತೊಡಿಯುಲು ಮನೋಯೋಗ ನಡೆಯುಬಹುದು.

ಬಸರು ಇಳಿವದು : ಕವಡಿಸೊಪ್ಪಿನ ರಸದಲ್ಲಿ ಎಳ್ಳೆಂಣೆ ಕಲಸಿ ಕುಡಿಸಲು ಬಸರು ಇಳಿವದು.

ನಂಜುಯೇರಿದರೆ ಚೊಗಚಿಸೊಪ್ಪನ್ನು ಗಂಡಿನ ಮೂತ್ರದಲ್ಲಿ ಅರೆದು ಕುಡಿಸಲು ನಂಜು ಇಳಿವದು. ಅದರ ಚರಟವನ್ನು ಮಂಡಿಗೆ, ಹೊಕ್ಕಳಿಗೆ ಹಾಕಿ ಕಟ್ಟುವದು, ನಂಜು ನಾಶ.

ನಪುಂಸಕನಿಗೆ : ಕೊಳಂಜನ 1 ಗದ್ಯಾಣ, ಆಕಳಕರೆ 1 ಗ, ಮದನ ಕಾಮೇಶ್ವರಿ 1 ಗ, ಗೊಳಗೊಳಕಿಬೀಜ 9 ಗ, ಮರಟಿವೆಗ್ಗೆ 1 ಗ, ಗರದಗಡ್ಡೆ 1, ಸಾಲಾಮಿಸರಿ 1 ಗ, ಸಮುದ್ರಶೋಕಿ 1 ಗ, ನಸಗುನ್ನಿಯುಬೀಜ 1 ಗ, ಹಿರೆಗಡಚಿಗನ ಗಡ್ಡೆ 1 ಗ, ಚಿಕ್ಕಕಡಚಿಗನಗಡ್ಡೆ 1 ಗ, ವರದಗಡ್ಡೆ 3 ಗ, ಕರ್ಪೂರ ದೊಂಡೆ 1 ಗ, ಬಳಿಗಾರ 1 ಗ, ಲವಂಗ ಜಾಜಿಕಾಯಿ 1 ಗ, ಪತ್ರೆ 1 ಗ, ಅಡವಿ ಜಾಜಿಕಾಯಿ 1 ಗ, ಅಡವಿ ಮೋಡಿ 1 ಗ, ಹಿಪ್ಪಲಿ 1 ಗ, ಕಸ್ತೂರಿ 1 ಚವಲತೂಕ, ಪುಡಿ ಸಕ್ಕರಿ ಅಚ್ಚೇರು, ಆಪು 1 ಗ, ಈ ಯಲ್ಲವಂ ಚೂರ್ಣವ ಮಾಡಿ ಗುಳದ ಕಾಯುಷ್ಟು ಗುಳಿಗೆ ಮಾಡಿ ತಿಂದ ಮೇಲೆ ಹಾಲು ಕುಡಿಯುಬೇಕು. ಅನ್ನ, ಮಧುರ ಆಹಾರ ಊಟ ಮಾಡಬೇಕು. ವೀರ್ಯ ಹೆಚ್ಚುವದು.

ಗರ್ಭ ನಿಲ್ಲುವದಕ್ಕೆ : ಯುಲವುಸಂದಿಗನ ಬೇರು 1 ಹಿಡಿ, ಹಾಲಿವಾಣ ಬೇರಿನ ತಾಟೆ 1 ಹಿಡಿ ಎರಡನ್ನು ಅರೆದು ಆಕಳ ಹಾಲಿನಲ್ಲಿ ಕುಡಿಸುವದು. ಗರ್ಭವಾಗುವದು ಸಿದ್ಧ.

ಪಿತ್ತಕ್ಕೆ : ಕೋತಂಬರಿಬೀಜ 1 ಗದ್ಯಾಣ, ಸಂಣಾಗಿ ಅರೆದು ನೀರೊಳಗೆ ಹಾಕಿ ಆ ನೀರು ಬಸಕೊಂಡು, ಒಂದು ಬೆಣಚಿಕಲ್ಲಿನ ತುಕಡಿ ವಲಿಯೊಳಗೆ ಹಾಕಿ, ಕಾದ ನಂತರ ಅದರೊಳಗೆ ಆ ಕಲ್ಲು ಹಾಕಿ ಸಕ್ಕರೆ ಹಾಕಿ ತಕ್ಕೊಂಬುವದು. ಪೈತ್ಯ ಮಾಣ್ಗು. ಪಥ್ಯ ಅಕ್ಕಿ ಅನ್ನ, ತೊಗರಿಬ್ಯಾಳೆ, ತುಪ್ಪ ಕೊಂಬುವದು.

ಸರ್ವರೋಗಕ್ಕೆ : ಶುಂಠಿ 1 ಗದ್ಯಾಣ, ಮೆಣಸು 1 ಗ, ಹಿಪ್ಪಲಿ 1 ಗ, ಇಂಗು 3 ಗ, ಸೈಂಧವಲವಣ 1 ಗ, ಅಜಾಮೋದ 1, ಸಥ್ಯಕ್ಷರ 1 ಗ,

ಕರೇಜೀರಗಿ 1 ಗ, ಜೇಷ್ಟ ಮಧು 1 ಗ, ಇಸರಿಬೇರು 1 ಗ, ಚಿತ್ರಮೂಲ 1 ಗ, ಬೇವಿನಯಲೆ 1 ಗ, ಅಣಲಿಕಾಯಿ 1 ಗ, ತಾರಿಕಾಯಿ 1 ಗ, ಬೆಳ್ಳುಳ್ಳಿ 1 ಗ, ನೆಲ್ಲಿಚೆಟ್ಟು 1 ಗ, ವಾಯುವಡಂಗ 1 ಗ, ಅಜಿವಾನ ಹೊಟ್ಟು 1 ಗ, ಬಜಿ 1 ಗ, ಮುತ್ತುಲ ಬೀಜ 1 ಗ, ಮೆಂಥೆ 1 ಗ, ಇಷ್ಟು ಜೀನಸು ಗಳನ್ನು ಕುಟ್ಟಿ 3 ಬಾರಿ ಸೋಸಿ ಆ ಪುಡಿ 1 ಸೋರಿ ತುಂಬಿ ಇಡುವದು. ಊಟವ ಮಾಡುವಾಗ ಮೂರು ತುತ್ತನ್ನು ಉಂಬುವದು. ಪಥ್ಯ ಅಕ್ಕಿ ಅನ್ನ, ತುಪ್ಪ ಹಳೆಹುಳಿ ಉಂಬುವದು. ಇದರಿಂದ ಸರ್ವರೋಗ ಮಾಣ್ಬುಗ.

ಇಲ್ಲಿ ಉಪಯೋಗಿಸಿರುವ ಕೆಲವು ಮಾತುಗಳಿಗೆ ಅರ್ಥ

ಅಂಬಿಲ—ಅಂಬಲಿ (ಪಾಯಸದಂತಿರುವ ಅನ್ನದ ತಿಳಿ, ಮಜ್ಜಿಗೆಯೊಂದಿಗೆ ಕೂಡಿಸಿ)

ಅರಳಿ—ಹತ್ತಿ

ಅರಿವಿ—ಬಟ್ಟೆ

ಅಲ್ಲ—ಹಸಿಶುಂಠಿ

ಉತಾರ—(ಉತ್ತಾರ) ಕಡಮೆಯಾಗುವುದು, ಬಿಡುವುದು

ಕಸವು (ಕಸರು)—ದೇಹದಲ್ಲಿ ದೋಷಸಾಂಕರ್ಯ

ಕಾಡೆಮಾಡು—ಕಷಾಯವಿಳಿಸು (ಕುದಿಸು ; ನಿರ್ವ್ಯೂಹ)

ಗದ್ಯಾಣ—ರೂಪಿಯ ತೂಕ ; ಮೂವತ್ತೆರಡು ಗುಂಜಿ

ಗುಂಜಿ, ಗುಂಜಾ—ಗುಲಗಂಜಿ ಬೀಜದ ತೂಕ ; ಆದ್ಯಮಾಷಕದ ಐದನೆಯ ಒಂದು ಭಾಗ

ಛರ್ದಿ—ವಾಂತಿ

ಛಲೋದು—ಚೆನ್ನಾಗಿರುವುದು

ಟಾಕ—ಸಣ್ಣ ತೂಕ ; ಗುಂಜಿಯಂತೆ

ತಿಂಡಿ—ತಿನಿಸು, ನವೆ, ಕಂಡು

ತಿಳಲು—ತಿರುಳು

ತೃಷಿ—ಬಾಯಾರಿಕೆ

ತೊಪ್ಪಲು—ಸೊಪ್ಪು

ತೊಲ—ರೂಪಾಯಿ ತೂಕ ; 'ನಿಕ್ಕಂ ಐದಾಗಲ್ಕೆ ತೊಲೆ, ಅಂತವು ಇಪ್ಪತ್ತಿರಲ್ಕೆ ಭಾರಂ'

ತೊನಶಿ—ನಾಯಿಯ ಮತ್ತಿತರ ಪ್ರಾಣಿಗಳ ಮೇಲೆ ಕೂರುವ ಕೀಟ

ದುಗ್ಗಾಣಿ—ಎರಡು ಕಾಣಿ ; ಎರಡು ಕಾಸು ; ಅರ್ಧಪೆನ್ನಿ

ದುಡ್ಡು—ತೂಕ ; ಆಣೆಯಲ್ಲಿ ಮೂರರ ಒಂದು ಭಾಗ ; ತಾಮ್ರದ ನಾಣ್ಯ

ಧಡೆ—ಎರಡು ಪಂಚೇರು
ಪೂರ್ವಾಷಾಢ—ಮೂತ್ರ ಹೋಗುವುದು
ಪೈ—ತೂಕ, ಆಣೆಯಲ್ಲಿ ಹನ್ನೆರಡನೆಯ ಒಂದು ಭಾಗ
ಬಟ್ಟೆ—ಹೊಕ್ಕುಳ ಬಳಿಯ ನರ ಸರಿಯುವುದು
ಮಾಣ್ಗು—ಮಾಯುವುದು, ಗುಣವಾಗುವುದು
ಮಾಶಿ—ಐದು ಗುಂಜಿ ತೂಕ ; ಮಾಷ: ಬಂಗಾರದ ಒಂದು ತೂಕ
ಮಾಸ—ಪ್ಲೆಸೆಂಟ
ರುವಿ—(ರೂವಿ), ಕಾಸು, ಆಣೆಯ ಹನ್ನೆರಡನೆಯ ಒಂದು ಭಾಗ
ವರಹಾ—ತೂಕಕ್ಕೆ ಬಳಸುವ ಬಂಗಾರದ ನಾಣ್ಯ ; ಪಗೋಡಾ
ಹಂಸಿ—ನೀರೊಳಗೆ ಬೆಳೆಯುವ ಹಸಿರು ಗಿಡ
ಹುಗಳು—ಹುಣ್ಣು
ಹೊಲ್ಲ—ಸರಿಯಲ್ಲದುದು

ಈ ಪುಸ್ತಕವನ್ನು ಕುರಿತು

ಸಾಮಾನ್ಯವಾಗಿ ಜನರನ್ನು ಕಾಡಿಸುವ ಹಲವಾರು ರೋಗಗಳಿಗೆ ಮದ್ದುಗಳನ್ನು ಹೇಳುವ ಗ್ರಂಥವಿದು. ಮದ್ದುಗಳನ್ನು ಹೇಳುವಾಗ ಅಗತ್ಯ ದ್ರವ್ಯಗಳು, ಅವುಗಳ ಅಳತೆ-ತೂಕ, ಔಷಧ ಸಿದ್ಧಮಾಡುವ ಕ್ರಮ, ಸೇವಿಸುವ ಕ್ರಮ, ಪಥ್ಯ ಮೊದಲಾದ ವಿವರಗಳನ್ನು ಇದರಲ್ಲಿ ಕೊಡಲಾಗಿದೆ.

ಒಂದೇ ರೋಗಕ್ಕೆ ಬೇರೆ ಬೇರೆ ಔಷಧಿಗಳನ್ನು ಕಾಣಿಸಿದ್ದಾರೆ. ಕೆಲವು ಕಡೆ ಅನುಭವದಲ್ಲಿ ಬಂದ ಔಷಧಗಳೆಂಬ ಸೂಚನೆಯೂ ಇದೆ.

ಜಾನಪದ ನೆಲೆಯಲ್ಲಿ ಹರಡಿಕೊಂಡಿರುವ ಚಿಕಿತ್ಸಾ ಕ್ರಮಗಳನ್ನು ಬರೆದಿರುವ ಗ್ರಂಥಕರ್ತರು ಯಾರೋ ತಿಳಿಯದು. ಆದರೂ ಪುಸ್ತಕದ ಸ್ವಾರಸ್ಯದಲ್ಲಿ ಸಂಶಯವಿಲ್ಲ. ಅಂತೆಯೇ ಇದೊಂದು ಅತ್ಯುಪಯುಕ್ತ ಆಯುರ್ವೇದ ವೈದ್ಯ ಗ್ರಂಥವೆನಿಸಿದೆ.

ನಿತ್ಯೋಪಯೋಗಿ ಆಯುರ್ವೇದ ಅಮೂಲ್ಯ ಗ್ರಂಥಗಳನ್ನು ಗ್ರಾಹಕರಿಗೆ ಸುಲಭ ಬೆಲೆಯಲ್ಲಿ ಒದಗಿಸುವ ನಮ್ಮ ಪ್ರಯತ್ನದಲ್ಲಿ ಇದು ನಾಲ್ಕನೆಯ ಗ್ರಂಥ. ಮೊದಲನೆಯ **ಆರೋಗ್ಯ ದರ್ಪಣ,** ಎರಡನೆಯ **ಸ್ವಸ್ಥವೃತ್ತ,** ಮೂರನೆಯ **ವೈದ್ಯ ಹಿತೋಪದೇಶ** ಈಗಾಗಲೇ ಜನಪ್ರಿಯ ಕೃತಿಗಳಾಗಿ ಬಹುತೇಕ ಸಾಹಿತ್ಯಾಭಿಮಾನಿಗಳ ಗೃಹಭಂಡಾರದಲ್ಲಿ ಸೇರಿಕೊಂಡಿವೆ.

ಈ ಕೃತಿಯೂ ಇಂತಹ ಲೋಕ ಪ್ರಿಯತೆಯನ್ನು ಗಳಿಸುವುದೆಂದು ಆಶಿಸುತ್ತೇವೆ.

—**ಪ್ರಕಾಶಕರು**

ಶಾರದಾ ಪ್ರಕಾಶನ

ಅರಳೆಪೇಟೆ, ಬೆಂಗಳೂರು-560 053

ವೈದ್ಯಸಾರ ಸಂಗ್ರಹ **ಬೆಲೆ: ರೂ. 4-00**